ದುಡಿವ ಜನರ ಪ್ರಾಣ ಮಿತ್ರ


ಐಕ್ಯರಂಗ

ಸಂಪುಟ 27 ಸಂಚಿಕೆ 38-39 ಸೆಪ್ಟೆಂಬರ್ 25, 2005 ಬೆಲೆ ರೂ. 3.00



ಸೆಪ್ಟೆಂಬರ್ 29 ಕರ್ನಾಟಕ ಬಂದ್

ಜನರ ಧ್ವನಿ ಗುಡುಗಾಗಿ ಮೊಳಗಲಿ



ಪೆಟ್ರೋಲ್ ಬೆಲೆ ಏರಿಕೆ ಗಾಯದ ಮೇಲೆ ಮತ್ತೊಮ್ಮೆ ಬರೆ

ಪಶ್ಚಿಮ ಬಂಗಾಳ ಸರ್ಕಾರದ ಆರ್ಥಿಕ ನೀತಿ - ಸಿಪಿಐ(ಎಂ) ಸ್ಪಷ್ಟನೆ




ಜೆಓಸಿ ವಿದ್ಯಾರ್ಥಿಗಳ ಬೃಹತ್ ಹೋರಾಟ



- ರಕ್ತದಲ್ಲಿ ಅದ್ದಿದ ಇರಾಕ್ ಸಂವಿಧಾನ

ಪಾತಕ ಲೋಕದ ಕಲಾತ್ಮಕ ವೈಭವೀಕರಣ ಜೋಗಿ



1992-93 ರಲ್ಲಿ ಮುಂಬೈ ನಗರದಲ್ಲಿ ಅಲ್ಪಸಂಖ್ಯಾತ ಸಮುದಾಯದ ಮೇಲೆ ನಡೆದ ಹಿಂಸೆ-ಕೇಳುವವರ ಎದೆ ನಡುಗಿಸುವಂತಹ ಭೀಕರ ಹತ್ಯಾಕಾಂಡಗಳ ಹಿನ್ನೆಲೆಯಲ್ಲಿ ಕೋಮುವಾದ ತಲುಪಿರುವ ಘಟ್ಟವನ್ನು-ಅದರ ವಿವಿಧ ಮಗ್ಗಲುಗಳನ್ನು ವಿಶ್ಲೇಷಿಸಿರುವ ಈ ಲೇಖನವನ್ನು 'ಕೋಮುವಾದದ ಕರಾಳ ಮುಖಗಳು' ಪುಸ್ತಕದಿಂದ ಆಯ್ದುಕೊಳ್ಳಲಾಗಿದೆ.

ಕೋಮುವಾದದ ಕರಾಳ ಮುಖಗಳು

'ಭಾರತ ಹಿಂದುಗಳದ್ದು, ಮುಸ್ಲಿಮರು ಪಾಕಿಸ್ತಾನಕ್ಕೆ ಹೋಗಲಿ' ಎಂಬ ಘೋಷಣೆಯಂತೂ ಸರ್ವೇಸಾಮಾನ್ಯವಾಗಿತ್ತು. ಆದರೆ ಮುಂಬಯಿಯ ಪೊಲೀಸರು ಇದನ್ನೆಲ್ಲಾ ನೋಡಿಯೂ ನೋಡದವರಂತೆ ಇರುತ್ತಿದ್ದರು. ರಾಜ್ಯ ಸರ್ಕಾರವೂ ಈ ಬಗ್ಗೆ ಏನೂ ಮಾಡದೆ ಕೈಕಟ್ಟಿ ಕೂತಿತ್ತು. ಯಾವುದೇ ಸಮುದಾಯ ಯಾ ಧರ್ಮದ ವಿರುದ್ಧ ದ್ವೇಷ ಮತ್ತುಹಿಂಸೆ ಪ್ರಚೋದಿಸುವುದನ್ನು ನಿಷೇಧಿಸುವ ಇಂಡಿಯನ್ ಪೀನಲ್ ಕೋಡಿನ ಕಲಮು 153(ಎ) ಮತ್ತು (ಬಿ)ಗಳು ಆಗಿನ ಮಹಾರಾಷ್ಟ್ರದ ಕಾಂಗ್ರೆಸ್ ಮುಖ್ಯಮಂತ್ರಿ ಸುಧಾಕರ ರಾವ್ ನಾಯಕರಿಂದ ಹಿಡಿದು ಮುಂಬಯಿಯ ಪೊಲೀಸು ಪೇದೆಗಳವರೆಗೆ ಯಾರಿಗೂ ನೆನಪಿಗೆ ಬರಲೇ ಇಲ್ಲ. ಮುಂಬಯಿ ಗಲಭೆಗಳ ಕುರಿತು ನ್ಯಾಯಾಂಗ ತನಿಖೆ ನಡೆಸಲು ನೇಮಕಗೊಂಡಿದ್ದ ಜಸ್ಟೀಸ್ ಶ್ರೀಕೃಷ್ಣ ಆಯೋಗದ ಎದುರು ಸಾಕ್ಷ್ಯ ನೀಡುತ್ತ ರಾಜ್ಯ ಮುಖ್ಯಮಂತ್ರಿ 'ಶಿವಸೇನೆಗೆ ಕೋಮುಗಲಭೆಗಳಲ್ಲಿ ಭಾಗಿಯಾದ ಇತಿಹಾಸವಿದೆ ಎಂದು ತನಗೆ ಗೊತ್ತಿರಲಿಲ್ಲ. ಇತರ ಪಕ್ಷಗಳ ಜೊತೆ ಹೇಗೋ ಹಾಗೆ ಶಿವಸೇನೆಯ ಜೊತೆಗೆ ತನ್ನ ಸಂಬಂಧ ಉತ್ತಮವಾಗಿದೆ' ಎಂದು ಹೇಳಿದ್ದರು. ಭೀವಂಡಿ, ಜಲಗಾಂವ್, ಮಹಾಡ್‌ಗಳ ಹೆಸರು ಸಹ ಅವರು ಕೇಳಿಲ್ಲವೋ ಏನೋ! ರಾಮಜನ್ಮಭೂಮಿ ಚಳುವಳಿಯ ಸಂದರ್ಭದಲ್ಲಿ ಮುಂಬಯಿಯಲ್ಲಿ ಬಿಜೆಪಿ ಮತ್ತು ಶಿವಸೇನೆ ಮುಸ್ಲಿಮರ ವಿರುದ್ಧ ಹಿಂದುಗಳನ್ನು ಎತ್ತಿಕಟ್ಟಲು, ತಮ್ಮ ಮಾಮೂಲಿ ವಿಧಾನಗಳ ಜೊತೆಗೆ 'ಮಹಾ ಆರತಿ' ಎಂಬ ಹೊಸ ಕಾರ್ಯಕ್ರಮವೊಂದನ್ನು ಪ್ರಾರಂಭಿಸಿದವು. ರಸ್ತೆಗಳಲ್ಲಿ ಪ್ರಾರ್ಥನೆ ಕೂತು ಸಂಚಾರಕ್ಕೆ ಅಡ್ಡಿಪಡಿಸುತ್ತಾರೆ ಎಂಬುದನ್ನು ನೆವವಾಗಿಟ್ಟುಕೊಂಡು ಮುಂಬಯಿಯ ಗಲ್ಲಿಗಲ್ಲಿಗಳಲ್ಲಿ ಆರತಿ ಸಮಾರಂಭವನ್ನು ಏರ್ಪಡಿಸಲಾಯಿತು. ಇವುಗಳಲ್ಲಿ ಮುಸ್ಲಿಮರ ವಿರುದ್ಧ ಬೈಗುಳದ ಭಾಷಣಗಳೂ ಇರುತ್ತಿದ್ದವು. ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಜನಗಳು ನಂತರ ಮುಸ್ಲಿಮರ ಮೊಹಲ್ಲಾಗಳಿಗೆ ನುಗ್ಗಿ ಹಲ್ಲೆ ನಡೆಸುವುದು, ಆಸ್ತಿಪಾಸ್ತಿ ಲೂಟಿ ಮಾಡುವುದು ಮುಂತಾದ ಕೃತ್ಯಗಳಲ್ಲಿ ತೊಡಗುತ್ತಿದ್ದರು. ಶ್ರೀಕೃಷ್ಣ ಆಯೋಗ, ಮುಂಬಯಿಯ ಗಲಭೆಗಳು ವ್ಯಾಪಕವಾಗಿ ಹಬ್ಬಲು ಈ ಮಹಾ ಆರತಿಗಳೂ ಒಂದು ಕಾರಣ ಎಂದು ಹೇಳಿದರೆ; ಮುಖ್ಯಮಂತ್ರಿ ಸುಧಾಕರ ನಾಯಕ್ 'ಮಹಾ ಆರತಿ ಒಂದು ಧಾರ್ಮಿಕ ಕಾರ್ಯಕ್ರಮ ಎಂದು ತಾನು ಭಾವಿಸಿದ್ದರಿಂದ ಅದನ್ನು ನಿಷೇಧಿಸಲಿಲ್ಲ' ಎಂದು ಹೇಳಿಕೆ ಕೊಟ್ಟರು.



ಮುಂಬಯಿ ಗಲಭೆ ಪೋಲೀಸರ ಕೈಮೀರಿ ನಡೆಯಿತು ಎಂಬ ಸರ್ಕಾರದ ವಿವರಣೆಯನ್ನು ಶ್ರೀಕೃಷ್ಣ ಆಯೋಗ ತಳ್ಳಿ ಹಾಕಿ, ಮುಂಬಯಿಯ ಸಾಮಾನ್ಯ ಪೋಲೀಸರು ಮಾತ್ರವಲ್ಲ, ಹಿರಿಯ ಪೊಲೀಸು ಅಧಿಕಾರಿಗಳು ಮತ್ತು ಕೆಲವೆಡೆ ಕಾಂಗ್ರೆಸ್ ಪುಡಾರಿಗಳು ಸಹ ಗಲಭೆಕೋರರ ಜೊತೆ ಶಾಮೀಲಾಗಿದ್ದುದನ್ನು ಎತ್ತಿ ತೋರಿಸಿದೆ. ಕೋಮು ಹಿಂಸೆಯ ಸಂದರ್ಭಗಳಲ್ಲಿ ಕೆಲವು ಅಪರೂಪದ ಅಪವಾದಗಳನ್ನು ಬಿಟ್ಟರೆ, ಪೊಲೀಸರು ಗಲಭೆಕೋರರ ಜತೆ ಶಾಮೀಲಾಗುವುದು, ಅವರಿಗೆ ರಕ್ಷಣೆ ಕೊಡುವುದು ಅಥವಾ ತಟಸ್ಥರಾಗಿರುವುದು ಈಗ ದೇಶದ ಎಲ್ಲೆಡೆ ಸರ್ವೇಸಾಮಾನ್ಯವಾಗಿದೆ. ಹಾಗಾಗಿ ದೊಡ್ಡ ಪ್ರಮಾಣದ ಹಿಂಸಾಚಾರ ಸಂಭವಿಸಿದಾಗಲೆಲ್ಲಾ ಸೇನೆಯ ನೆರವನ್ನು ಕೋರುವುದು ಅನಿವಾರ್ಯವೆನ್ನಿಸಿದೆ. ಮುಂಬಯಿಯಲ್ಲಿ ಭಾರತೀಯ ಸೇನೆಯ ತುಕಡಿಗಳಿದ್ದರೂ ಗಲಭೆಯ ನಿಯಂತ್ರಣಕ್ಕೆ ಅವರನ್ನು ಬಳಸಿಕೊಳ್ಳಲು ಮಹಾರಾಷ್ಟ್ರದ ಮುಖ್ಯಮಂತ್ರಿ ಮನಸ್ಸು ಮಾಡಲಿಲ್ಲ. ಸೇನೆಗೆ ಆಜ್ಞೆ ನೀಡಲು ತನಗೆ ಅಧಿಕಾರವಿದೆಯೋ ಇಲ್ಲವೋ ಎಂದು ಅವರಿಗೆ ಗೊತ್ತಿರಲಿಲ್ಲವಂತೆ! ಮುಖ್ಯಮಂತ್ರಿಯವರಿಗೆ ಇದು ಗೊತ್ತಿರಲಿಲ್ಲವೆಂದೇ ಇಟ್ಟುಕೊಂಡರೂ ಅವರ ಬಳಿ ಖಂಡಿತ ಟೆಲಿಫೋನು ಎಂಬ ಉಪಕರಣವಿದ್ದಿರಲೇಬೇಕು. ಕೇಂದ್ರದಲ್ಲಿ ಆಗ ರಕ್ಷಣಾ ಮಂತ್ರಿಯಾಗಿದ್ದ, ತನ್ನದೇ ರಾಜ್ಯದ, ತನ್ನದೇ ಪಕ್ಷದ ರಾಜಕಾರಣಿ ಶರದ್ ಪವಾರ್ ಆಗ ಮುಂಬಯಿಯಲ್ಲೇ ಇದ್ದರು. ಅವರು ಸಹ ತಾವಾಗಿ ಈ ಬಗ್ಗೆ ಏನೂ ಮಾಡಲಿಲ್ಲ.ಆದರೆ ಈ ನಿಷ್ಕ್ರಿಯತೆ ಉದ್ದೇಶಪೂರ್ವಕವಾಗಿ ರುವುದೂ ಸಾಧ್ಯ.

ಕಾಂಗ್ರೆಸ್ ಸರಕಾರಗಳಿಗೆ ಕೋಮು ಘರ್ಷಣೆಗಳನ್ನು ಹುಟ್ಟುಹಾಕಿ ಒಂದು ಹಂತದವರೆಗೆ ಅವನ್ನು ಹಾಗೆಯೇ ಬೆಳೆಯಲು ಬಿಡುವ ಪರಂಪರೆಯಿದೆ. ಮುಂಬಯಿಯಲ್ಲಿ ಹಿಂಸಾಚಾರ ಗರಿಷ್ಠಮಟ್ಟಕ್ಕೇರಿದ ದಿನಗಳಲ್ಲಿ, ರಾಜ್ಯದ ಮುಖ್ಯಮಂತ್ರಿಗೆ ತನ್ನ ಅಧಿಕಾರವೇನು ಎಂದು ಗೊತ್ತಿರಲಿಲ್ಲ. ದೇಶದ ರಕ್ಷಣಾ ಮಂತ್ರಿಯೂ ಗಲಭೆಗಳನ್ನು ನಿಯಂತ್ರಿಸಲು ಸೇನೆಯನ್ನು ಬೀದಿಗಿಳಿಸುವುದರ ಬಗ್ಗೆ ಯೋಚಿಸಲಿಲ್ಲ. ಅತ್ತ ಡಿಸೆಂಬರ್ 6 ರಂದು ಬಾಬರಿ ಮಸೀದಿ ಉರುಳುತ್ತಿದ್ದಾಗ ಪ್ರಧಾನಮಂತ್ರಿ ನಿದ್ರೆ ಮಾಡುತ್ತಿದ್ದರು. ಬಿಜೆಪಿ ಹತ್ತು ವರ್ಷಗಳ ಕಾಲ ದೇಶಾದ್ಯಂತ ಚಳುವಳಿ ನಡೆಸಿ, ಲಕ್ಷಾಂತರ ಜನರನ್ನು ಒಟ್ಟು ಸೇರಿಸಿ, ಮೊದಲೇ ಹಾಕಿಕೊಂಡ ಯೋಜನೆಗೆ ಅನುಗುಣವಾಗಿ ಬಾಬರಿ ಮಸೀದಿಯನ್ನು ಧ್ವಂಸಗೊಳಿಸಿದ ಚಿತ್ರದಲ್ಲಿ ನಿದ್ರಿಸುತ್ತಿರುವ ದೇಶದ ಪ್ರಧಾನಮಂತ್ರಿಗೂ ಒಂದು ಪಾತ್ರವಿದೆ. ಹಾಗೆಯೇ ಮುಂಬಯಿಯ ರಸ್ತೆಗಳಲ್ಲಿ ಜನರ ಗುಂಪುಗಳು, ಮುಸ್ಲಿಮರನ್ನು ಹೊಡೆದು, ಬಡಿದು, ಬೆಂಕಿ ಕೊಟ್ಟು ಕೊಲ್ಲುವ ದೃಶ್ಯದಲ್ಲಿ ಅದನ್ನು ಸುಮ್ಮನೆ ನಿಂತು ನೋಡುತ್ತಿದ್ದ ಪೊಲೀಸರು ಮತ್ತು 'ಸೆಕ್ಯುಲರ್' ರಾಜಕಾರಣಿಗಳಾದ ಸುಧಾಕರ ರಾವ್ ನಾಯಕ್ ಮತ್ತು ಶರದ್ ಪವಾರರನ್ನೂ ಅಗತ್ಯ ಸೇರಿಸಿಕೊಳ್ಳಬೇಕು.

(ಮುಂದುವರಿಯುವುದು)

ಸೆಪ್ಟೆಂಬರ್ 29 ಕರ್ನಾಟಕ ಬಂದ್

ಸಮಸ್ತ ಜನತೆಯೂ ಧ್ವನಿ ಎತ್ತಿ - ನಿಮ್ಮ ಧ್ವನಿ ಗುಡುಗಾಗಿ ಮೊಳಗಲಿ

ಕರ್ನಾಟಕ ರಾಜ್ಯದ ಜನತೆ ಅನುಭವಿಸುತ್ತಿರುವ ಸಂಕಟಗಳ ಬಗೆಗೆ, ಸೆಪ್ಟೆಂಬರ್ 29 ರಂದು ಕರ್ನಾಟಕ ಬಂದ್ ಯಶಸ್ವಿ ಮಾಡುವ ಮೂಲಕ ತಮ್ಮ ಮೇಲೆ ಹೇರಿರುವ ಸಂಕಟಗಳ ವಿರುದ್ಧ ಸೆಟೆದೆದ್ದು ನಿಲ್ಲಬೇಕೆಂಬ ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿಯ ಕರೆಯ ಬಗ್ಗೆ ವಿವರಿಸಿದ್ದಾರೆ ಪಕ್ಷದ ರಾಜ್ಯ ಕಾರ್ಯದರ್ಶಿ ಕಾಂ. ಜಿ.ಎನ್.ನಾಗರಾಜ್‌ರವರು

ಆಳುವ ಪಕ್ಷಗಳಿಗೆ ಮಾತ್ರವಲ್ಲ, ಪ್ರಧಾನ ವಿರೋಧಪಕ್ಷವಾದ ಬಿಜೆಪಿಗೂ ಜನರ ಸಮಸ್ಯೆಗಳನ್ನು ಪರಿಗಣಿಸುವ, ಅದಕ್ಕೆ ಪರಿಹಾರ ನೀಡುವ ಕಾಳಜಿಯೇ ಇಲ್ಲವಾಗಿದೆ. ಪ್ರತಿಯೊಂದು ಪಕ್ಷದಲ್ಲಿಯೂ ಅಧಿಕಾರಕ್ಕಾಗಿ ಆಂತರಿಕ ಕಿತ್ತಾಟಗಳು, ಗುಂಪುಗಾರಿಕೆಗಳು. ರಾಜ್ಯದಲ್ಲಿಯೂ ಸಮಾವೇಶಗಳ ಸುರಿಮಳೆ. ಆ ಪಕ್ಷದ ಈ ಪಕ್ಷದ, ಆ ಗುಂಪಿನ ಈ ಗುಂಪಿನ ಸಮಾವೇಶಗಳು - ಆದರೆ ಎಲ್ಲಿಯೂ ಜನರ ನೈಜ ಸಮಸ್ಯೆಗಳ, ಬದುಕಿನ ಸಂಕಟಗಳಿಗೆ ಪರಿಹಾರ ನೀಡುವ ಬಗ್ಗೆ ಮಾತೇ ಇಲ್ಲ. ವ್ಯಕ್ತಿಗಳ, ಪಕ್ಷಗಳ ವೈಭವೀಕರಣ ಮಾತ್ರ ನಡೆದಿದೆ.

ಈಗ ಕರ್ನಾಟಕದಲ್ಲಿ ಪೆಟ್ರೋಲಿನ ಬೆಲೆ 50.66 ರೂ., ಡೀಸೆಲ್ ಬೆಲೆ 35.26 ರೂ. ಕಳೆದ 3 ತಿಂಗಳಲ್ಲಿ ಎರಡು ಬಾರಿ ಏರಿಕೆ. ಅದರ ಬೆನ್ನ ಹಿಂದೆಯೇ ಬಸ್‌ದರ ಏರಿಕೆ, ಬಸ್‌ಪಾಸ್ ದರಗಳ ಏರಿಕೆ, ಬಾಡಿಗೆ ದರಗಳ ಏರಿಕೆಯಿಂದಾಗಿ ದೂರದ ಪ್ರದೇಶಗಳಲ್ಲಿ ವಾಸಿಸುವ ಒಬ್ಬ ಬಡ ದುಡಿಮೆಗಾರನಿಗೆ ಕೇವಲ ಬಸ್ ಪ್ರಯಾಣವೇ ದಿನಕ್ಕೆ 20-25 ರೂ ಆಗುವ ಪರಿಸ್ಥಿತಿ. ಮಧ್ಯಮ ವರ್ಗಕ್ಕೂ ಕಷ್ಟಕರ ಪರಿಸ್ಥಿತಿ. ಅದೇ ರೀತಿ ವಿದ್ಯುತ್ ಖಾಸಗೀಕರಣ ಹಾಗೂ ನಾಲ್ಕು ವರ್ಷಗಳಿಂದ ದರಗಳ ನಿರಂತರ ಏರಿಕೆ ಇವು ಒಂದು ಕಡೆಯಾದರೆ ಸರ್ಕಾರ ಹಾಗೂ ಬ್ಯಾಂಕ್ ಜೀವವಿಮೆ ಮೊದಲಾದ ಅನೇಕ ಸಂಸ್ಥೆಗಳಲ್ಲಿ ನೇಮಕಾತಿ ರದ್ದು, ಕೈಗಾರಿಕೆಗಳ ಮುಚ್ಚುವಿಕೆ, ಕಾರ್ಮಿಕ ಕಾನೂನುಗಳ ಜಾರಿಯಿಲ್ಲದಿರುವುದರಿಂದ ಕೆಲವೇ ವಿಭಾಗಗಳ ಹೊರತಾಗಿ ದೊಡ್ಡ ಪ್ರಮಾಣದ ನಿರುದ್ಯೋಗ, ಅರೆ ಉದ್ಯೋಗ, ಖಾಯಂ ಕೆಲಸ ಎಂಬುದೇ ಮಾಯವಾಗುತ್ತಿರುವುದರಿಂದ ಸಂಪಾದನೆ ಕುಸಿತ, ಕಷ್ಟಕರ ಜೀವನ ಸ್ಥಿತಿ.

ಪಡಿತರ ಚೀಟಿ ವಂಚನೆ, ರೇಷನ್ ವ್ಯವಸ್ಥೆಯಲ್ಲಿ ಮೋಸ, ದುಬಾರಿಯಾದರೂ ಸಿಗದ ನಿವೇಶನಗಳು, ಮನೆ ಬಾಡಿಗೆ, ರೆವಿನ್ಯೂ ನಿವೇಶನಗಳ ಸಮಸ್ಯೆಗಳು, ಬಡವರಿಗೆ ದಕ್ಕದ ಉಚಿತ ನಿವೇಶನಗಳು, ಹಕ್ಕುಪತ್ರಗಳು, ಕೊಳಚೆ ಪ್ರದೇಶಗಳ ಹೆಚ್ಚಳ, ಸಂಕಟದ ಬದುಕು. ಆದಿವಾಸಿಗಳು, ಬಡರೈತರನ್ನು ಅರಣ್ಯ ಭೂಮಿಯಿಂದ ಒಕ್ಕಲೆಬ್ಬಿಸುವುದು, ಭೂಸುಧಾರಣೆಯ ನಿರ್ಲಕ್ಷ್ಯ. ಇವುಗಳ ಜೊತೆಗೆ ಲಕ್ಷಾಂತರ ಜನರಿಗೆ ಉದ್ಯೋಗ ದೊರಕಿಸುವ ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಬಂಡವಾಳಕ್ಕೆ ಪ್ರವೇಶ, ಕೃಷಿ ಫಸಲುಗಳ ವ್ಯಾಪಾರದಲ್ಲಿ ಕೂಡ ವಿದೇಶಿ ಕಂಪನಿಗಳ ಪ್ರವೇಶ. ನಮ್ಮ ಆಹಾರ ವ್ಯವಸ್ಥೆ, ಕೃಷಿ ವ್ಯವಸ್ಥೆ ದೈತ್ಯ ಬಹುರಾಷ್ಟ್ರೀಯ ಕಂಪನಿಗಳ ಹಿಡಿತಕ್ಕೆ ಸಿಲುಕುತ್ತಿರುವ ಸನ್ನಿವೇಶ. ಇವುಗಳ ಜೊತೆಗೆ ಗಾಯದ ಮೇಲೆ ಬರೆ ಎಳೆದಂತೆ ಶಿಕ್ಷಣದ ಖಾಸಗೀಕರಣ, ಶುಲ್ಕಗಳ ಏರಿಕೆ ತಾಂತ್ರಿಕ ಹಾಗೂ ವೈದ್ಯಕೀಯ ಶಿಕ್ಷಣ ಲಕ್ಷಾಂತರ ರೂ ಫೀ. ಖಾಸಗೀಕರಣದಿಂದಾಗಿ ಮೀಸಲಾತಿ ರದ್ದತಿ ಹಾಗೂ ಸಾಮಾಜಿಕ ನ್ಯಾಯದ ಮೇಲೆ ಧಾಳಿ. ಎಲ್ಲವೂ ಖಾಸಗೀಕರಣವಾಗುತ್ತಿರುವ ಸಂದರ್ಭದಲ್ಲಿ ಖಾಸಗೀರಂಗದಲ್ಲಿ ಮೀಸಲಾತಿ ನೀಡುವ ಬಗ್ಗೆ ದೊಡ್ಡ ಮಾತುಗಳನ್ನಾಡಿದ ಯುಪಿಎ ಸರ್ಕಾರ ಬಂಡವಾಳಶಾಹಿಗಳ ಸಿಟ್ಟಿನ ಪ್ರತಿಕ್ರಿಯೆ ನೋಡಿ ಮೌನ ಧರಿಸಿಬಿಟ್ಟಿದೆ. ಅದೇ ಸಮಯದಲ್ಲಿ ಖಾಸಗೀ ಶಿಕ್ಷಣ ಸಂಸ್ಥೆಗಳಲ್ಲಿ ಇದ್ದ ಮೀಸಲಾತಿಯನ್ನು ಕಿತ್ತುಹಾಕುವ ತೀರ್ಪನ್ನು ಸುಪ್ರೀಂಕೋರ್ಟ್ ನೀಡಿದೆ.

ಇದು ಇಂದು ಜನತೆ ಅನುಭವಿಸುತ್ತಿರುವ ಅನೇಕ ಸಮಸ್ಯೆಗಳ ಒಂದು ಸೀಳು ನೋಟ. ಬಿ.ಜೆ.ಪಿ ಕೂಟದ "ಭಾರತ ಪ್ರಕಾಶಿಸುತ್ತಿದೆ" ಎಂಬ ಮಹಾಮೋಸವನ್ನು ತಿರಸ್ಕರಿಸಿದ ನಂತರವೂ ಅದೇ ನೀತಿಗಳ ಮುಂದುವರಿಕೆ ಯು.ಪಿ.ಎ ಸರ್ಕಾರದಿಂದ ಹಾಗೂ ಕರ್ನಾಟಕದ ಸಮ್ಮಿಶ್ರ ಸರ್ಕಾರದಿಂದ. ಸರ್ಕಾರ ಬದಲಾದರೂ ಅದೇ ನೀತಿಗಳು, ಇನ್ನೊಂದಿಷ್ಟು ಹೆಚ್ಚು ಸಂಕಟಗಳು. ಹೀಗಾಗಿ ಜನ ಕಂಗಾಲಾಗುವ ಪರಿಸ್ಥಿತಿ ಎದುರಾಗಿದೆ.

ಈ ಹಿನ್ನೆಲೆಯಲ್ಲಿ ಭಾರತದ ದೊಡ್ಡ ಕಾರ್ಮಿಕ ಸಂಘಗಳು, ಬ್ಯಾಂಕ್ ವಿಮಾ ನೌಕರ, ಟೆಲಿಕಾಂ, ಸರ್ಕಾರಿ ನೌಕರರು, ಇತ್ಯಾದಿ ರಾಷ್ಟ್ರೀಯ ಒಕ್ಕೂಟಗಳು ಹಾಗೂ ಸಂಘಗಳು ಸೇರಿ ಸೆ.29ರಂದು ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿವೆ.

ಭಾರತದ ಹಾಗೂ ಕರ್ನಾಟಕದ ದೊಡ್ಡ ರೈತ ಚಳುವಳಿಗಳು, ಕೃಷಿ ಕೂಲಿಕಾರ ಸಂಘಗಳು ಕೂಡ.....

ಬೇಡಿಕೆಗಳಿಗಾಗಿ ಅಂದು ರಸ್ತೆ ರೋಖೋ, ರೈಲ್ ರೋಖೋಗೆ ಕರೆ ನೀಡಿವೆ.

ಭಾರತದ ಕಾರ್ಮಿಕರು, ರೈತರ ಜೊತೆಗೂಡಿ ಕರ್ನಾಟಕದ ಎಲ್ಲ ವಿಭಾಗದ ಜನತೆಯೂ ಕೇಂದ್ರದ ಯುಪಿಎ ಸರ್ಕಾರದ ವಿದೇಶಿ ಹಾಗೂ ದೇಶಿ ದೊಡ್ಡ ಬಂಡವಾಳಗಾರರ ಪರ ಜನವಿರೋಧಿ ನೀತಿಗಳ ವಿರುದ್ಧ ಅದೇ ಹಾದಿಯನ್ನು ತುಳಿಯುತ್ತಿರುವ ಕರ್ನಾಟಕ ಸಮ್ಮಿಶ್ರ ಸರ್ಕಾರದ ನೀತಿಗಳ ವಿರುದ್ಧ ನಮ್ಮ ಅತೃಪ್ತಿಯನ್ನು ಎತ್ತಿ ತೋರಿಸಬೇಕಾಗಿದೆ. ಜನಸಾಮಾನ್ಯರ ಧ್ವನಿ ಇಂದು ಭಾರತದಾದ್ಯಂತ ಮೊಳಗಿ ಸರ್ಕಾರಗಳನ್ನು ಎಚ್ಚರಿಸಬೇಕಾಗಿದೆ. ಪೆಟ್ರೋಲ್, ಡೀಸೆಲ್‌ಗಳ ದರ ಏರಿಕೆ, ಬಸ್ ದರ ಏರಿಕೆ, ವಿದ್ಯುತ್ ದರ ಏರಿಕೆ, ಶಿಕ್ಷಣ ಶುಲ್ಕ ಏರಿಕೆ, ಅರೆ ಉದ್ಯೋಗ, ನಿರುದ್ಯೋಗ ಸೃಷ್ಟಿಸುವ, ಸಂಬಳ ಭತ್ಯೆಗಳನ್ನು ಕನಿಷ್ಠ ಮಟ್ಟಕ್ಕೆ ತುಳಿಯುವ, ಮೀಸಲಾತಿಯನ್ನು ಕಿತ್ತುಹಾಕುವ, ಆಹಾರ, ವಸತಿ, ನಿವೇಶನಗಳನ್ನು ವಂಚಿಸುವ ನೀತಿಗಳನ್ನು ಕೈಬಿಡುವಂತೆ ಜನತೆ ಗುಡುಗಬೇಕಾಗಿದೆ.

ಆದ್ದರಿಂದ ಸಿಪಿಐ(ಎಂ) ರಾಜ್ಯಸಮಿತಿ ಸೆ.29ರಂದು ಕರ್ನಾಟಕ ಬಂದ್‌ಗೆ ಕರೆ ನೀಡಿದೆ. ಕರ್ನಾಟಕದ ಕಾರ್ಮಿಕರು, ರೈತರು, ದಲಿತರು, ಹಿಂದುಳಿದವರು, ಯುವಕರು, ವಿದ್ಯಾರ್ಥಿಗಳು, ಮಹಿಳೆಯರು, ವರ್ತಕರು ಇಂದು ಈ ಚಳುವಳಿಗೆ ಧುಮುಕಬೇಕಾಗಿದೆ. ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು ಸೇರಬೇಕಾಗಿದೆ.

ಕರ್ನಾಟಕ ಬಂದ್ ಯಾತಕ್ಕಾಗಿ?

ಪೆಟ್ರೋಲ್, ಡೀಸೆಲ್ ದರ ಏರಿಕೆ ವಿರುದ್ಧವಾಗಿ ಕೇಂದ್ರದ ಅಬಕಾರಿ ಶುಲ್ಕ ಕಡಿತಕ್ಕಾಗಿ

ಬಸ್‌ದರ ಏರಿಕೆ ವಿರುದ್ಧವಾಗಿ ಪೆಟ್ರೋಲ್ ಮೇಲೆ ರಾಜ್ಯ ಮಾರಾಟ ತೆರಿಗೆ ಕಡಿತಕ್ಕಾಗಿ, ಬೆಲೆ ಸ್ಥಿರೀಕರಣ ನಿಧಿಗಾಗಿ

ವಿದ್ಯುತ್ ಖಾಸಗೀಕರಣ, ವಿದ್ಯುತ್ ದರ ಏರಿಕೆ ವಿರುದ್ಧವಾಗಿ, ಎಲ್ಲರಿಗೂ ಪಡಿತರ ಚೀಟಿ ನೀಡುವ ಸಾರ್ವತ್ರಿಕ ಪಡಿತರ ವ್ಯವಸ್ಥೆ ಎಲ್ಲ ಬಡವರಿಗೂ ಹಳದಿ ಕಾರ್ಡ್ ನೀಡಿಕೆಗಾಗಿ ಹಳದಿ ಕಾರ್ಡಿನಲ್ಲಿ ಸಕ್ಕರೆ, ಸೀಮೆ ಎಣ್ಣೆ ಅರ್ಧ ಬೆಲೆಗೆ ಒತ್ತಾಯಿಸಿ, ಇತರ ಜೀವನಾವಶ್ಯಕ ವಸ್ತುಗಳನ್ನು ನೀಡಬೇಕೆಂದು ಒತ್ತಾಯಿಸಿ

ಅರಣ್ಯ ಭೂಮಿಯಿಂದ ಬಡವರನ್ನು ಒಕ್ಕಲೆಬ್ಬಿಸದಂತೆ ತೀವ್ರ ಭೂಸುಧಾರಣೆ ಜಾರಿಗೆ ತರುವಂತೆ ಒತ್ತಾಯಿಸಿ

ಗ್ರಾಮೀಣ ನಿರುದ್ಯೋಗ ಖಾತರಿ ಯೋಜನೆ ಕರ್ನಾಟಕದ ಎಲ್ಲೆಡೆಗೆ ಅನ್ವಯಿಸುವಂತೆ ಒತ್ತಾಯಿಸಿ

ಕೇಂದ್ರ -ರಾಜ್ಯ ಸರ್ಕಾರಗಳಲ್ಲಿ ನೇಮಕಾತಿ ನಿಷೇಧ ತೆರವು ಮಾಡಲು ಒತ್ತಾಯಿಸಿ.

ಉದ್ಯೋಗಾವಕಾಶ ಹೆಚ್ಚಿಸುವ ಕೈಗಾರಿಕಾ ಅಭಿವೃದ್ಧಿಗಾಗಿ ಒತ್ತಾಯಿಸಿ

ಅರೆಕಾಲಿಕ, ತಾತ್ಕಾಲಿಕ ಹುದ್ದೆಗಳ ಖಾಯಂಗಾಗಿ ಒತ್ತಾಯಿಸಿ

ಶಿಕ್ಷಣದ ಖಾಸಗೀಕರಣ, ಶುಲ್ಕ ಹೆಚ್ಚಳ ವಿರೋಧಿಸಿ

ತಾಂತ್ರಿಕ, ವೈದ್ಯಕೀಯ ರಂಗಗಳಲ್ಲಿ ಶುಲ್ಕ, ಪ್ರವೇಶಗಳಲ್ಲಿ ಸರ್ಕಾರದ ನಿಯಂತ್ರಣ ನೀಡುವ ಕೇಂದ್ರೀಯ ಶಾಸನಕ್ಕಾಗಿ

ಖಾಸಗಿ ಶಿಕ್ಷಣ ಸಂಸ್ಥೆಗಳು ಹಾಗೂ ಕೈಗಾರಿಕೆಗಳಲ್ಲಿ ಮೀಸಲಾತಿ ಹಾಗೂ ಸಾಮಾಜಿಕ ನ್ಯಾಯಕ್ಕಾಗಿ ಒತ್ತಾಯಿಸಿ

ಕೊನೆಗಾಣದ ಬಾಳಿನ ಗೋಳಿಗೆ ಹೋರಾಟವೇ ದಾರಿ.

ಕರ್ನಾಟಕದ ಜನತೆಗೆ ಇಂದು ಕರ್ನಾಟಕ ಬಂದ್ ಮಾಡುವುದೇ ದಾರಿ.

ಸೆಪ್ಟೆಂಬರ್ 18, 2005 ರಂದು ಪ್ರಕಟವಾಗಬೇಕಿದ್ದ ಸಂಚಿಕೆ 37 ಕಾರಣಾಂತರಗಳಿಂದ ಪ್ರಕಟವಾಗಿಲ್ಲ, ಓದುಗರು ಸಹಕರಿಸಬೇಕಾಗಿ ವಿನಂತಿ.

- ಸಂ

ಸೆಪ್ಟೆಂಬರ್ 29 ರಂದು ರೈತ ಸಂಘಗಳಿಂದ ರಾಜ್ಯಾದ್ಯಂತ ರಸ್ತೆ ತಡೆ, ರೈಲು ತಡೆ ಚಳುವಳಿ

ಸೆಪ್ಟೆಂಬರ್ 29, 2005 ರಂದು ದೇಶದಾದ್ಯಂತ ಕಾರ್ಮಿಕ ಸಂಘಟನೆಗಳು ಮುಷ್ಕರ ಮಾಡುತ್ತಿರುವ ಸಂದರ್ಭದಲ್ಲಿ ರೈತ ಮತ್ತು ಕೃಷಿಕೂಲಿಕಾರ ಸಂಘಟನೆಗಳು ತಮ್ಮ ಬೇಡಿಕೆಗಳಿಗಾಗಿ ರಸ್ತೆ ತಡೆ, ರೈಲು ತಡೆ ಚಳುವಳಿಗೆ ಕರೆ ನೀಡಿವೆ.

ಕರ್ನಾಟಕ ರಾಜ್ಯದಲ್ಲಿ ಪ್ರಾಂತ ರೈತ ಸಂಘದ ಎರಡು ರಾಜ್ಯರೈತ ಸಂಘಟನೆಗಳು, ಅಖಿಲ ಭಾರತ ಕಿಸಾನ್ ಸಭಾದ ರಾಜ್ಯ ಘಟಕ, ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘಗಳು ಸೇರಿ ಜಂಟಿಯಾಗಿ ಪೆಟ್ರೋಲ್, ಡೀಸೆಲ್, ಬಸ್ ದರ ಇಳಿಕೆಗೆ ಒತ್ತಾಯಿಸಿ, ಬೆಳೆಗಳಿಗೆ ಲಾಭದಾಯಕ ಬೆಲೆ, ಬೀಜ ಕಾಯ್ದೆ-2004 ಕ್ಕೆ ಆಮೂಲಾಗ್ರ ಬದಲಾವಣೆ ಇತ್ಯಾದಿ 17 ಬೇಡಿಕೆಗಳನ್ನು ಮುಂದಿಟ್ಟು ರಸ್ತೆ ತಡೆ, ರೈಲು ತಡೆ ಚಳುವಳಿಗೆ ಕರೆ ನೀಡಿವೆ.

ಕರ್ನಾಟಕ ರಾಜ್ಯ ರೈತ ಸಂಘ (ಪುಟ್ಟಣ್ಣಯ್ಯ)ನ ರಾಜ್ಯಾಧ್ಯಕ್ಷರಾದ ಬಸವರಾಜ ತಂಬಾಕೆ, ಪ್ರಧಾನ ಕಾರ್ಯದರ್ಶಿ ಹೆಚ್.ಆರ್.ಬಸವರಾಜಪ್ಪ, ಕರ್ನಾಟಕ ರಾಜ್ಯ ರೈತ ಸಂಘ (ನಂಜುಂಡಸ್ವಾಮಿ)ದ ರಾಜ್ಯಾಧ್ಯಕ್ಷರಾದ ಕೋಡಿಹಳ್ಳಿ ಚಂದ್ರಶೇಖರ್, ಕಾರ್ಯಾಧ್ಯಕ್ಷರಾದ ಚುಕ್ಕಿ ನಂಜುಂಡಸ್ವಾಮಿ, ಅಖಿಲ ಭಾರತ ಕಿಸಾನ್ ಸಭಾದ ರಾಜ್ಯ ಅಧ್ಯಕ್ಷರಾದ ಎಂ.ಸಿ.ವೆಂಕಟರಾಮ್, ಪ್ರಧಾನ ಕಾರ್ಯದರ್ಶಿ ಎಂ.ಗೋಪಾಲ್, ಕರ್ನಾಟಕ ಪ್ರಾಂತ ರೈತ ಸಂಘ(ಕೆಪಿಆರ್‌ಎಸ್) ನ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನ್ಪಡೆ, ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಟನೆಯ ರಾಜ್ಯಾಧ್ಯಕ್ಷರಾದ ನಿತ್ಯಾನಂದಸ್ವಾಮಿ, ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ ಅವರು ಹೋರಾಟದ ಯಶಸ್ಸಿಗೆ ಕರೆ ನೀಡಿದ್ದಾರೆ.

ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ವಿರುದ್ಧ ಪ್ರತಿಭಟನೆ, ರಸ್ತೆ ರೋಕೋ - ಬಂಧನ

ಗೌರಿ ಹಬ್ಬದ ಆಚರಣೆ ಗಣೇಶ ಹಬ್ಬದ ಸಿದ್ಧತೆಯಲ್ಲಿದ್ದ ಜನರಿಗೆ - ಕೇಂದ್ರ ಸರ್ಕಾರ ನೀಡಿದ ಪೆಟ್ರೋಲ್ - ಡೀಸಲ್ ಬೆಲೆ ಏರಿಕೆ - ಹಬ್ಬದ ಆಚರಣೆ ಸಂತೋಷವನ್ನು ಕಡಿತಗೊಳಿಸಿತು. 6-9-2005ರಂದು ಬೆಲೆ ಏರಿಸಿದ ಕೇಂದ್ರ ಸರ್ಕಾರದ ನಿರ್ಧಾರವನು ಖಂಡಿಸಿ ರಾಜ್ಯದ ಅನೇಕ ಕಡೆ ಸಿಪಿಐ(ಎಂ) ನೇತೃತ್ವದಲ್ಲಿ ಪ್ರತಿಭಟನೆ - ಧರಣಿ ರಸ್ತೆ ರೋಕೋ ನಡೆದಿವೆ.

ರಾಯಚೂರು : ಕಾರ್ಯದರ್ಶಿ ಡಿ.ಎಸ್.ಶರಣಬಸವರವರ ನೇತೃತ್ವದಲ್ಲಿ ನೂರಾರು ಕಾರ್ಯಕರ್ತರು ಮತ್ತು ಸಾರ್ವಜನಿಕರ ಪ್ರತಿಭಟನಾ ರಸ್ತೆ ರೋಕೋವನ್ನು 10.09.2005ರಂದು ಚಂದ್ರಮೌಳೇಶ್ವರ ವೃತ್ತದಲ್ಲಿ ಅರ್ಧ ತಾಸಿಗೂ ಹೆಚ್ಚು ಕಾಲ ನಡೆಸಿದರು. ನಂತರ ಸಭೆಯನ್ನುದ್ದೇಶಿಸಿ ಡಿ.ಎಸ್. ಶರಣ ಬಸವ ಮುಂತಾದವರು ಮಾತನಾಡಿದರು.

ಬೆಂಗಳೂರು : ಕೇಂದ್ರ ಯು.ಪಿ.ಎ. ಸರ್ಕಾರ ಅಧಿಕಾರಕ್ಕೆ ಬಂದ 15 ತಿಂಗಳಲ್ಲಿ 5 ಬಾರಿ ಪೆಟ್ರೋಲ್, ಡೀಸೆಲ್ ದರಗಳನ್ನು ಏರಿಸಿರುವುದರ ವಿರುದ್ಧ ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಸಮಿತಿಯು 8.9.2005ರಂದು ಬೆಳಿಗ್ಗೆ ಮೈಸೂರ್ ಬ್ಯಾಂಕ್ ವೃತ್ತದಲ್ಲಿ ಧರಣಿ ನಡೆಸಿ, ನಂತರ ರಸ್ತೆ ತಡೆ ಮಾಡಿ ಏರಿಸಿರುವ ದರಗಳನ್ನು ಕೂಡಲೆ ವಾಪಸ್ಸು ಪಡೆಯಬೇಕು, ಈಗಾಗಲೆ ಬೆಲೆ ಹೆಚ್ಚಾಗಿದ್ದು ಮತ್ತೆ ಹೆಚ್ಚು ಮಾಡಿರುವುದರಿಂದ ಜನಸಾಮಾನ್ಯರಿಗೆ ಬಹಳ ತೊಂದರೆಯಾಗುತ್ತಿದೆ ಎಂದು ಆಗ್ರಹಿಸಲಾಯಿತು.

ಕೇಂದ್ರ ಸರ್ಕಾರಕ್ಕೆ ಹೊರಗಡೆಯಿಂದ ಬೆಂಬಲ ಸೂಚಿಸಿರುವ ಎಡ ಪಕ್ಷಗಳ ವಿರೋಧದ ನಡುವೆಯೂ ಬೆಲೆಯನ್ನು ಹೆಚ್ಚಿಸಿರುವ ಜನವಿರೋಧಿ ನೀತಿಯನ್ನು ಖಂಡಿಸಲಾಯಿತು.

ನಂತರ ರಸ್ತೆ ತಡೆ ನಡೆಸಲಾಯಿತು. ಪೋಲೀಸರು, ಜಿಲ್ಲಾ ಕಾರ್ಯದರ್ಶಿ ಪ್ರಕಾಶ್ ಕೆ., ಮೀನಾಕ್ಷಿ ಸುಂದರಂ, ಹೆಚ್.ಎನ್.ಗೋಪಾಲಗೌಡ, ಗೌರಮ್ಮ ವೆಂಕಟಾಚಲಯ್ಯ, ಗಂಗಣ್ಣ, ವರಲಕ್ಷ್ಮಿ, ರಾಮಕೃಷ್ಣ ಮುಂತಾದ ಅನೇಕ ಮುಖಂಡರನ್ನು ಮತ್ತು ನೂರಾರು ಕಾರ್ಯಕರ್ತರನ್ನು ಬಂಧಿಸಿ ನಂತರ ಬಿಡುಗಡೆಗೊಳಿಸಿದರು. ನಂತರ ನಗರದ ಕೃಷ್ಣರಾಜಪುರದಲ್ಲೂ ರಸ್ತೆ ತಡೆ ನಡೆದಿದೆ.

ಮಂಗಳೂರು : 9.9.05ರಂದು ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ನಡೆದ ಪ್ರತಿಭಟನಾ ಕಾರ್ಯಕ್ರಮದಲ್ಲಿ ಯು.ಪಿ.ಎ. ಸರ್ಕಾರ ಜನರ ಮೇಲೆ ಹೊರೆ ಹೇರುವುದನ್ನು ಪಕ್ಷವು ಒಪ್ಪುವುದಿಲ್ಲ ಎಂದು ಮುಂತಾಗಿ ಪ್ರತಿಭಟನೆ ವ್ಯಕ್ತಪಡಿಸಿ ಕಾಂ. ಮಾಧವ ಮಾತನಾಡಿದರು. ಕಾರ್ಯಕ್ರಮದಲ್ಲಿ ಜೆ.ಬಾಲಕೃಷ್ಣ ಶೆಟ್ಟಿ, ಲೋಕಯ್ಯ-ಅಬ್ರಹಂ ಕರ್ಕಡ, ರಾಮಚಂದ್ರ ಉಚ್ಚಿಲ, ವಸಂತ ಆಚಾರಿ ಮತ್ತಿತರರು ಮತ್ತು ನೂರಾರು ಕಾರ್ಯಕರ್ತರು ಭಾಗವಹಿಸಿದ್ದರು.

ಕುಂದಾಪುರ : ಪಕ್ಷದ ತಾಲೂಕು ಸಮಿತಿ ನೇತೃತ್ವದಲ್ಲಿ 9.9.05ರಂದು ಶಾಸ್ತ್ರಿ ಸರ್ಕಲ್ ಬಳಿ ನಡೆದ ಪ್ರತಿಭಟನೆಯಲ್ಲಿ ಕೇಂದ್ರ ಸಚಿವ ಮಣಿ ಶಂಕರ್ ಅಯ್ಯರ್ ಪ್ರತಿಕೃತಿ ಸುಡಲಾಯಿತ. ಸಭೆಯನ್ನುದ್ದೇಶಿಸಿ ಜಿಲ್ಲಾ ಕಾರ್ಯದರ್ಶಿ ಕೆ.ಶಂಕರ್‌ರವರು ಮಾತನಾಡಿದರು. ಹೆಚ್ಚು ಸಂಖ್ಯೆಯಲ್ಲಿ ಕಾರ್ಯಕರ್ತರು, ಯುವಕರು ಭಾಗವಹಿಸಿದ್ದರು. ಪ್ರತಿಭಟನೆಯ ನೇತೃತ್ವವನ್ನು ಕಾರ್ಯದರ್ಶಿ ಮಹಾಬಲ ವಡೇರ ಹೋಬಳಿ, ಸಿ.ನಾರಾಯಣ, ಮುತ್ತಯ್ಯ ಕನ್ನಾಣ, ಚಂದ್ರಶೇಖರ ವಿ., ಅಶ್ವತ್ ಕುಮಾರ, ದಾಸ್ ಭಂಡಾರಿ, ಲಕ್ಷ್ಮಣ, ರಮಾನಾಥ ಭಂಡಾರಿ ವಹಿಸಿದ್ದರು.

ಉಡುಪಿ : ತಾಲೂಕು ಕಛೇರಿ ಮುಂದೆ 9.9.2005ರಂದು ಪ್ರತಿಭಟನೆ ನಡೆಸಲಾಯಿತು. ಸಭೆಯನ್ನುದ್ದೇಶಿಸಿ ಪಿ.ವಿಶ್ವನಾಥ ರೈ, ಮತ್ತು ಡೇವಿಡ್ ಎ. ಕರ್ಕಡ ಮಾತನಾಡಿದರು. ನೂರಾರು ಜನರ ಪ್ರತಿಭಟನೆಯು ಅದಮಾರು ಶ್ರೀಪತಿ ಆಚಾರ್ಯ, ಡೆಂಕ್ ರೆಬೆಲ್ಲೊ ಪ್ರಭಾಕರ ಕುಂದರ್, ಹೆಚ್.ವಿಠಲ, ರಮೇಶ್ ಮೆಂಡನ್, ದೋಗು ಸುವರ್ಣ ಮುಂತಾದವರ ನೇತೃತ್ವದಲ್ಲಿ ನಡೆಯಿತು.

ಬಳ್ಳಾರಿ : ಪಕ್ಷದ ಬಳ್ಳಾರಿ ಜಿಲ್ಲಾ ಸಮಿತಿಯು ಕೇಂದ್ರದ ಕಾಂಗ್ರೆಸ್ ನೇತೃತ್ವದಲ್ಲಿ ಯು.ಪಿ.ಎ. ಸರ್ಕಾರದ ಜನವಿರೋಧಿ ಪೆಟ್ರೋಲ್ ಡೀಸೆಲ್ ದರ ಏರಿಕೆ ನೀತಿಯ ವಿರುದ್ಧ ಬಳ್ಳಾರಿಯಲ್ಲಿ ರಸ್ತೆ ತಡೆ ಪ್ರತಿಭಟನೆ ನಡೆದಿದೆ. ತಾಲೂಕ ಕಛೇರಿಯಿಂದ ಮೆರವಣಿಗೆ ಹೊರಟು ನಗರದ ರಾಯಲ್ ಸರ್ಕಲ್‌ನಲ್ಲಿ ರಸ್ತೆ ತಡೆ ನಡೆಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕಾಂ. ಯು.ಬಸವರಾಜ್ ಕೇಂದ್ರದ ಯು.ಪಿ.ಎ. ಸರ್ಕಾರದ ಏಕ ಪಕ್ಷೀಯ ನೀತಿಯನ್ನು ಖಂಡಿಸಿದರು. ನಂತರ ಮೆರವಣಿಗೆ ಜಿಲ್ಲಾಧಿಕಾರಿ ಕಛೇರಿ ಹತ್ತಿರ ಕೊನೆಗೊಂಡಿತು. ಪ್ರತಿಭಟನೆಯಲ್ಲಿ ಸಿಪಿಐ(ಎಂ) ಕಾರ್ಯಕರ್ತರಾದ ಕಾಂ. ಚಂದ್ರಕುಮಾರಿ, ಬಿ.ಸುಜಾತ, ಮಂಜುಳಪ್ಪ, ಹುಳ್ಳಿ ಉಮೇಶ್, ಮತ್ತಿತರರು ಪಾಲ್ಗೊಂಡಿದ್ದರು.

ಗುಲ್ಬರ್ಗಾ ಜಿಲ್ಲೆಯ ಆಳಂದ, ಗುಲ್ಬರ್ಗಾಗಳಲ್ಲಿ ಪ್ರತಿಭಟನೆ ನಡೆದಿದ್ದು, ಮಾರುತಿ ಮಾನ್ಪಡೆ, ಕೆ.ನೀಲಾ ಮುಖಂಡತ್ವ ವಹಿಸಿದ್ದರು. ತುಮಕೂರು, ಕೋಲಾರಗಳಲ್ಲೂ ರಸ್ತೆ ತಡೆ ನಡೆದ ವರದಿಯಾಗಿದೆ. ಕ್ರಮವಾಗಿ ಸಯ್ಯದ್ ಮುಜೀಬ್, ನಾರಾಯಣಸ್ವಾಮಿ ನೇತೃತ್ವ ವಹಿಸಿದ್ದರು. ಮೈಸೂರಿನಲ್ಲಿ ನಡೆದ ಪ್ರತಿಭಟನೆಯ ನೇತೃತ್ವವನ್ನು ಕಾರ್ಯದರ್ಶಿ ಪ್ರಭಾಕರ್ ವಹಿಸಿದ್ದರು.











ಆಹಾರ, ಭೂಮಿ, ಉದ್ಯೋಗಕ್ಕಾಗಿ ಜನರ ನಡುವೆ ರಾಜ್ಯಾದ್ಯಂತ ಪ್ರಚಾರಾಂದೋಲನ ಜಾಥಾಗಳು





ಆಹಾರ, ಭೂಮಿ, ಉದ್ಯೋಗಕ್ಕಾಗಿ ಪಕ್ಷದ ಕರೆಯಂತೆ ಗುಲ್ಬರ್ಗಾ ಜಿಲ್ಲಾ ಮಟ್ಟದ ಸಮಾವೇಶವನ್ನು ಆಗಸ್ಟ್ 30 ರಂದು ನಡೆಸಲಾಯಿತು. ಎಲ್ಲಾ ವಿಭಾಗಗಳಿಂದ 1000 ಕ್ಕೂ ಹೆಚ್ಚು ಜನ ಪಾಲ್ಗೊಂಡ ಸಮಾವೇಶವನ್ನುದ್ದೇಶಿಸಿ ಕಾಂ. ನಿತ್ಯಾನಂದಸ್ವಾಮಿ, ಕಾಂ. ನೀಲಾ, ಕಾಂ.ಮಾರುತಿ ಮಾನ್ಪಡೆ ಮುಂತಾದವರು ಮಾತನಾಡಿದರು.

ಗುಲ್ಬರ್ಗಾ ನಗರದಲ್ಲಿ 2 ದಿನಗಳ ಆಟೋ ಪ್ರಚಾರ ಮತ್ತು ಸಭೆಗಳನ್ನು ಸ್ಲಂ ಏರಿಯಾ ಮತ್ತು ಇತರ ಕಡೆಗಳಲ್ಲಿ ನಡೆಸಿದ್ದಾರೆ. ಸಭೆಯಲ್ಲಿ ಮಹಿಳೆಯರು ಹೆಚ್ಚು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದಾರೆ. 16 ಕ್ಕೂ ಹೆಚ್ಚು ಸಭೆಗಳಿಂದ ಸಂಪರ್ಕ ಕಡಿದುಹೋಗಿದ್ದ ಹಲವಾರು ಪ್ರದೇಶಗಳ ಜನರು ಪುನಃ ಚಳುವಳಿಗೆ ಬರಲು ಸಾಧ್ಯವಾಗಿದೆ. ಇಲ್ಲಿ ಮನೆ-ನಿವೇಶನದ ಪ್ರಶ್ನೆ ಮಹತ್ವದ್ದಾಗಿದೆ. ಈ ಜಾಥಾ ಮೇಘರಾಜ, ಗಂಗಮ್ಮ ಜಗದೇವಿ, ಈರಮ್ಮ ಬಂಗಾರ ಕಿರಾಣಿ, ಜೈಲಾಲ ನಡೆಸಿಕೊಟ್ಟರು.

ಕಾರ್ಮಿಕ ಸಂಘಟನೆಗಳ ಗುಲ್ಬರ್ಗಾಜಿಲ್ಲಾ ಮಟ್ಟದ ಸಮಾವೇಶವನ್ನು ಯಶಸ್ವಿಯಾಗಿ ನಡೆಸಲಾಗಿದೆ ಮತ್ತು ಆಗಸ್ಟ್ 29 ರಂದು ಧರಣಿ ನಡೆಸಲಾಗಿದೆ.

ಪಕ್ಷದ ಶಹಾಪುರ ತಾಲ್ಲೂಕು ಸಮಿತಿಯಿಂದ 49 ಹಳ್ಳಿಗಳಲ್ಲಿ ಜೀಪ್ ಜಾಥಾ ನಡೆಸಿ ಕರಪತ್ರ ವಿತರಿಸಲಾಗಿದೆ. ಮತ್ತು 29 ಹಳ್ಳಿಗಳಲ್ಲಿ ಸಭೆ ನಡೆಸಲಾಗಿದೆ. ಮತ್ತು ಸುರಪುರ-ಶಹಾಪುರ ತಾಲ್ಲೂಕುಗಳಲ್ಲಿ 6 ದಿನಗಳ ಜೀಪ್ ಜಾಥಾವನ್ನು ನಡೆಸಲಾಗಿದೆ.

ವಿರಾಜಪೇಟೆ: ತಹಶೀಲ್ದಾರ್ ಕಛೇರಿ ಮುಂದೆ ಆಗಸ್ಟ್ 31 ರಂದು ಧರಣಿ. ಸುಮಾರು 300 ಕ್ಕೂ ಹೆಚ್ಚು ಕಾರ್ಯಕರ್ತರು ಭಾಗವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿ ಪೀಟರ್ ಲೋಬೋ, ಭರತ್ ರಾಮನಾಥ ಜೋಸ್, ಮಹಾದೇವ, ದುರ್ಗಾ ಪ್ರಸಾದ್, ಎ.ಆರ್.ಕೃಷ್ಣಕುಮಾರ್ ಭಾಗವಹಿಸಿದ್ದರು.



ಪಶ್ಚಿಮ ಬಂಗಾಳದಲ್ಲೊಂದು ನೀತಿ ರಾಷ್ಟ್ರಮಟ್ಟದಲ್ಲಿ ಇನ್ನೊಂದು ನೀತಿಯೇ?

ಸಿಪಿಐ(ಎಂ) ರಾಷ್ಟ್ರ ಮಟ್ಟದಲ್ಲಿ ಉದಾರೀಕರಣ ಹಾಗೂ ಅದಕ್ಕೆ ಸಂಬಂಧಪಟ್ಟ ಎಫ್.ಡಿ.ಐ. ಇತ್ಯಾದಿ ಪ್ರಶ್ನೆಗಳ ಮೇಲೆ ಒಂದು ನೀತಿ ಹೊಂದಿದ್ದು ತನ್ನ ಆಳ್ವಿಕೆಯ ಪಶ್ಚಿಮ ಬಂಗಾಳದಲ್ಲಿ ಇನ್ನೊಂದು ಬೇರೆಯದೇ ನೀತಿ ಅನುಸರಿಸುತ್ತಿದೆ, ಇತರ ಪಕ್ಷಗಳ ಸರಕಾರಗಳಂತೆಯೇ ನಡೆದುಕೊಳ್ಳುತ್ತಿದೆ ಎಂದು ಇತ್ತೀಚೆಗೆ ಪತ್ರಿಕೆಗಳಲ್ಲಿ ಭಾರೀ ಅಪಪ್ರಚಾರ ನಡೆದಿದೆ. ಪಶ್ಚಿಮ ಬಂಗಾಳದಲ್ಲಿ ವಿಧಾನಸಭೆ ಭೂಸುಧಾರಣೆ ಕಾನೂನಿಗೆ ತಂದ ತಿದ್ದುಪಡಿಯ ಹಿನ್ನೆಲೆಯಲ್ಲಿ ಈ ಅಪಪ್ರಚಾರ ನಡೆದಿದೆ. ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಂ. ಪ್ರಕಾಶ್ ಕಾರಟ್ ಈ ಅಪಪ್ರಚಾರಕ್ಕೆ ಇಲ್ಲಿ ಉತ್ತರ ನೀಡಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಕಳೆದ ವಿಧಾನಸಭಾ ಅಧಿವೇಶನದಲ್ಲಿ ಭೂಸುಧಾರಣಾ ಕಾನೂನಿಗೆ ಕೆಲವು ತಿದ್ದುಪಡಿಗಳನ್ನು ತರಲಾಯಿತು. ಇದು ದೇಶಾದ್ಯಂತ ವಿವಾದವನ್ನೇ ಎಬ್ಬಿಸಿತು. ಇದಕ್ಕೆ ಮುಖ್ಯ ಕಾರಣ ಮಾಧ್ಯಮದಲ್ಲಿ ಇದನ್ನು ತಿರುಚಿ ನೀಡಿದ ವಿವರಣೆ. ಭೂಮಿತಿ ಕಾನೂನುಗಳನ್ನು ದುರ್ಬಲಗೊಳಿಸಲಾಗುತ್ತಿದೆ, ಕೃಷಿ ಭೂಮಿಯನ್ನು ದೊಡ್ಡ ಪ್ರಮಾಣದಲ್ಲಿ ಕೈಗಾರಿಕಾ ಮತ್ತು ಇತರ ಕೃಷಿಯೇತರ ಉದ್ದೇಶಗಳಿಗೆ ಬಳಸಲಾಗುತ್ತಿದೆ, ಸಿಪಿಐ(ಎಂ)ನಲ್ಲಿ ಈ ಬಗ್ಗೆ ಭಿನ್ನಾಭಿಪ್ರಾಯಗಳಿವೆ, ಮುಖ್ಯಮಂತ್ರಿಗಳು ತಮ್ಮ ಪಕ್ಷದೊಳಗೇ ಸಮರ ನಡೆಸಬೇಕಾಗಿದೆ ಎಂದೆಲ್ಲಾ ಚಿತ್ರಿಸಲಾಯಿತು.

ದೇಶಾದ್ಯಂತ ಈ ರೀತಿ ತಮ್ಮದೇ ಬಣ್ಣ ತುಂಬಿದ ವರದಿಗಳನ್ನು ಮಾಧ್ಯಮಗಳು ಪ್ರಕಟಿಸಿದವು. "ಸುಧಾರಣಾವಾದಿ" ಮುಖ್ಯಮಂತ್ರಿ ದೊಡ್ಡ ಪ್ರಮಾಣದಲ್ಲಿ ಪ್ರಮುಖ ಕೃಷಿ ಭೂಮಿಯನ್ನು ದೊಡ್ಡ ಕೈಗಾರಿಕಾ ಗುಂಪುಗಳಿಗೆ ಹಾಗೂ ವಿದೇಶಿ ಕಂಪನಿಗಳಿಗೆ ವಹಿಸಿಕೊಡುವ ಪಣತೊಟ್ಟಿದ್ದಾರೆ ಎಂದು ಚಿತ್ರಿಸುವ ಪ್ರಯತ್ನ ಇದು. ಸಿಪಿಐ(ಎಂ)ಗೆ ಭೂಸುಧಾರಣೆಗಳನ್ನು ಕೈಗೊಳ್ಳುವಲ್ಲಿ ಎಡರಂಗ ಸರಕಾರದ ಸಾಧನೆಗಳ ಬಗ್ಗೆ ಸಹಜವಾಗಿಯೇ ಬಹಳ ಹೆಮ್ಮೆಯಿದೆ. ದೇಶದಲ್ಲಿಯೇ ಅತ್ಯಂತ ಪ್ರಗತಿಪರವಾದ ಈ ಸುಧಾರಣೆಗಳಿಂದಾಗಿಯೇ ಕೃಷಿ ಉತ್ಪಾದನೆಯ ವಿಸ್ತರಣೆಗೆ ಆಧಾರ ಕಲ್ಪಿಸಲು ಸಾಧ್ಯವಾದದ್ದು. ಇದರಿಂದಾಗಿಯೇ ಪಶ್ಚಿಮ ಬಂಗಾಳ ದೇಶದಲ್ಲಿಯೇ ಅತಿ ದೊಡ್ಡ ಭತ್ತ ಉತ್ಪಾದಕ ರಾಜ್ಯವಾಯಿತು. ಈ ರಾಜ್ಯ ವಾರ್ಷಿಕ 1.5 ಕೋಟಿ ಟನ್ ಭತ್ತ ಬೆಳೆಯುತ್ತದೆ. ಸುಮಾರು 11 ಲಕ್ಷ ಎಕರೆ ಮಿಗುತೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಹಂಚಲಾಗಿದೆ. ಇದು ಇಡೀ ದೇಶದಲ್ಲಿ ಪುನರ್‌ವಿತರಿಸಿದ ಭೂಮಿಯ ಶೇ.20 ರಷ್ಟಾಗುತ್ತದೆ. ಅಲ್ಲದೆ 14 ಲಕ್ಷ ಬರ್ಗಾದಾರ(ಭಾಗ ಬೆಳೆಗಾರರ) ದಾಖಲಾತಿ ನಡೆಸಿ ಅವರಿಗೆ ಹಿಡುವಳಿಯ ಭದ್ರತೆಯನ್ನು ನೀಡಲಾಯಿತು.

ಪಶ್ಚಿಮ ಬಂಗಾಳದಲ್ಲಿ 1.35 ಕೋಟಿ ಎಕ್ರೆ ಕೃಷಿ ಭೂಮಿಯಿದೆ. ಅದರಲ್ಲಿ 72 ಶೇಕಡಾವನ್ನು ಸಣ್ಣ ಮತ್ತು ಅಂಚಿನಲ್ಲಿರುವ ರೈತರು ಸಾಗುವಳಿ ಮಾಡುತ್ತಿದ್ದಾರೆ. ಅಲ್ಲಿ ಭೂಹಿಡುವಳಿ ಮಿತಿ ನೀರಾವರಿ ಜಮೀನಿಗಾಗಲೆ 12.5 ಎಕ್ರೆ ಹಾಗೂ ನೀರಾವರಿಯಿಲ್ಲದ ಜಮೀನಿಗೆ 17.5 ಎಕ್ರೆ. ಭೂಸುಧಾರಣೆಗಳ ಈ ಮಹತ್ವದ ಸಾಧನೆಯನ್ನು ಬುಡಮೇಲು ಮಾಡುವ ಯಾವುದೇ ಆಶಯ ಎಡರಂಗ ಸರಕಾರಕ್ಕಾಗಲೀ ಸಿಪಿಐ(ಎಂ) ಗಾಗಲೀ ಇಲ್ಲ.

ನಿರುಪಯೋಗಿಯಾಗುಳಿದ ಜಮೀನಿನ ಬಳಕೆಗಾಗಿ

ಪಶ್ಚಿಮ ಬಂಗಾಳ ವಿಧಾನಸಭೆ ಪಾಸು ಮಾಡಿದ ಭೂಸುಧಾರಣಾ ತಿದ್ದುಪಡಿ ಮಸೂದೆಯಲ್ಲಿನ ಕೆಲವು ಅಂಶಗಳು ಕೇವಲ ತಾಂತ್ರಿಕ ಸ್ವರೂಪದವು. ಇವುಗಳಲ್ಲಿ ಕೆಲವು ಭೂಮಿಯ ಉತ್ತಮ ನಿರ್ವಹಣೆಗಾಗಿ ಆಡಳಿತದ ಅಗತ್ಯಗಳಿಗೆ ಸಂಬಂಧಿಸಿದ್ದರೆ, ಇನ್ನು ಕೆಲವು ಜನಗಳಿಗೆ ಪ್ರಯೋಜನವಾಗುವಂತೆ ಭೂತೆರಿಗೆಗಳನ್ನು ತರ್ಕಬದ್ಧಗೊಳಿಸುವುದಕ್ಕೆ ಸಂಬಂಧಪಟ್ಟಿದ್ದು. ಕೇವಲ ಒಂದು ತಿದ್ದುಪಡಿಯಲ್ಲಿ ಮಾತ್ರವೇ ಧೋರಣೆಯ ಪ್ರಶ್ನೆಯಿತ್ತು. ಇದು ಮೂಲ ಕಾನೂನಿನ ವಿಭಾಗ 14(2)ರ ತಿದ್ದುಪಡಿ. ಈ ತಿದ್ದುಪಡಿಯ ಉದ್ದೇಶ ಮುಚ್ಚಿದ ಗಿರಣಿಗಳು, ಕಾರ್ಖಾನೆಗಳು ಮತ್ತು ಉದ್ದಿಮೆಗಳಲ್ಲಿ ನಿರುಪಯೋಗಿಯಾಗಿ ಉಳಿದುಕೊಂಡ ಭೂಮಿಯ ಬಳಕೆಗೆ ಇರುವ ಕಾನೂನಿನ ತೊಡಕುಗಳನ್ನು ನಿವಾರಿಸುವುದು. ಒಂದು ಅಧ್ಯಯನದ ಪ್ರಕಾರ ಕೊಲ್ಕತ್ತಾದ ಸುತ್ತಲಿನ ಐದು ಜಿಲ್ಲೆಗಳಲ್ಲಿ 41,000 ಎಕ್ರೆ ಜಮೀನು ಈ ರೀತಿ ಕೈಗಾರಿಕಾ ಬಳಕೆಯಲ್ಲಿಯೂ ಇಲ್ಲದೆ ನಿರುಪಯೋಗಿಯಾಗಿ ಬಿದ್ದಿದೆ. ಇವನ್ನು ಬಿಡಿಸಿಕೊಂಡರೆ ಹಲವು ಉದ್ದೇಶಗಳು ಈಡೇರಬಹುದು. ಭೂಮಿಯ ಒಂದು ಭಾಗವನ್ನು ಮಾರಿ ಕೆಲವು ರೋಗಗ್ರಸ್ತ ಘಟಕಗಳನ್ನು ಪುನರುಜ್ಜೀವನಗೊಳಿಸಬಹುದು. ಅಥವಾ ನೌಕರರಿಗೆ ತೆರಬೇಕಾದ ಬಾಕಿಯನ್ನು ಇತ್ಯರ್ಥ ಮಾಡಬಹುದು. ಅಲ್ಲದೆ ಇಂತಹ ಜಮೀನನ್ನು ಸಣ್ಣ ಪ್ರಮಾಣದ ಉದ್ದಿಮೆಗಳಿಗೆ ಅಥವಾ ಇತರ ಕೈಗಾರಿಕಾ ಘಟಕಗಳಿಗೆ ನೀಡಬಹುದು. ಇಂತಹ ಜಮೀನು ಕಾನೂನಿನ ತೊಡಕು ಗಳಿಂದಾಗಿ ದಶಕಗಳಿಂದ ನಿರುಪಯೋಗಿಯಾಗಿ ಬಿದ್ದಿದೆ. ಈ ತಿದ್ದುಪಡಿಯ ಮೂಲಕ ರಾಜ್ಯ ಸರಕಾರ ಒಂದು ಲಿಖಿತ ಆದೇಶ ಹೊರಡಿಸಿ ಬಹಿರಂಗ ಹರಾಜಿನ ಮೂಲಕ ಇಂತಹ ಜಮೀನನ್ನು ವರ್ಗಾಯಿಸಲು ಸಾಧ್ಯವಾಗುತ್ತದೆ. ಇದರ ಬೆಲೆ ಕಲೆಕ್ಟರ್ ನಿರ್ಧರಿಸಿದ ಮೀಸಲು ಬೆಲೆಗಿಂತ ಕಡಿಮೆಯಿರಬಾರದು. ಈ ಮೀಸಲು ಬೆಲೆ "ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ಗಿರಣಿಗಳ, ಕಾರ್ಖಾನೆ ಗಳ ಅಥವಾ ವರ್ಕ್‌ಶಾಪ್‌ಗಳ ಪುನರುಜ್ಜೀವನಕ್ಕೆ, ಇಂತಹ ಗಿರಣಿಗಳ, ಕಾರ್ಖಾನೆಗಳ ಅಥವಾ ವರ್ಕ್‌ಶಾಪ್‌ಗಳ ನೌಕರರಿಗೆ ತೆರಬೇಕಾದ ಬಾಕಿ ಪಾವತಿಗೂ ಸೇರಿದಂತೆ ಬೇಕಾದ ಹಣ" ಇಂತಹ ಹರಾಜಿನಿಂದ ಬಂದ ಹಣವನ್ನು ಇಂತಹ ರೀತಿಯಲ್ಲಿ ಬಳಸಬೇಕು ಎಂದು ತಿದ್ದುಪಡಿಯಲ್ಲಿ ಹೇಳಲಾಗಿದೆ.

ಈ ತಿದ್ದುಪಡಿಯನ್ನು ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿಯಲ್ಲಿ ಚರ್ಚಿಸಲಾಗಿದ್ದು ಈ ಬಗ್ಗೆ ಪಕ್ಷದೊಳಗೆ ಯಾವುದೇ ವಿವಾದ ಅಥವಾ ಭಿನ್ನಾಭಿಪ್ರಾಯವಿಲ್ಲ.

ಇನ್ನೊಂದು ತಿದ್ದುಪಡಿ ಭೂಮಿತಿಗೆ ಮೀರಿದ ಜಮೀನನ್ನು ವೃತ್ತಿಪರ ಕಾಲೇಜುಗಳು, ವಿಶ್ವವಿದ್ಯಾಲಯಗಳು, ಬೀಳುಭೂಮಿಯ ಅಭಿವೃದ್ಧಿ, ಪ್ರವಾಸೋದ್ಯಮ ಅಭಿವೃದ್ಧಿ, ಔಷಧಿ ಗಿಡಗಳ ಮತ್ತು ಇತರ ಪ್ರಮುಖ ಬೆಳೆಗಳ ಯೋಜನೆಗಳಿಗೆ ಸ್ವಾಧೀನಪಡಿಸಿಕೊಳ್ಳಲು ಅವಕಾಶ ನೀಡುವಂತದ್ದು. ಇದನ್ನು ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿಯಲ್ಲಾಗಲಿ, ಎಡರಂಗದಲ್ಲಾಗಲೀ ಚರ್ಚೆ ನಡೆಸಿ ನಿರ್ಧರಿಸಿಲ್ಲವಾದ್ದರಿಂದ ಹಿಂತೆಗೆದುಕೊಳ್ಳಲಾಯಿತು.

ಇತ್ತೀಚಿನ ವರ್ಷಗಳಲ್ಲಿ ಎಡರಂಗವು ಕೈಗಾರಿಕೆಗಳನ್ನು ಬೆಳೆಸುವ ಹಾಗೂ ಕೃಷಿಯೇತರ ಉದ್ಯೋಗಾವಕಾಶಗಳನ್ನು ಒದಗಿಸುವಲ್ಲಿ ಅಧಿಕಾರ ವಲಯಗಳನ್ನು ಬಳಸುವ ಕೆಲಸವನ್ನು ಗಂಭೀರವಾಗಿ ಕೈಗೆತ್ತಿಕೊಂಡಿದೆ. ಇದಕ್ಕೆ ಮೂಲರಚನೆ ಮತ್ತು ಸಂಪರ್ಕ ಸೌಲಭ್ಯಗಳನ್ನು ಬೆಳೆಸಲು ಒಂದು ಪ್ರಮುಖ ಪ್ರಯತ್ನದ ಅಗತ್ಯವಿದೆ. ಇವುಗಳೊಂದಿಗೆ ಹೆಚ್ಚುತ್ತಿರುವ ನಗರೀಕರಣ, ಆರೋಗ್ಯ, ಶಿಕ್ಷಣ ಮತ್ತು ಸೇವೆಗಳ ಬೆಳವಣಿಗೆಯ ಅಗತ್ಯಕ್ಕಾಗಿಯೇ ಕೃಷಿ ಉದ್ದೇಶಗಳ ಆಚೆಗೆ ಭೂಮಿಯ ಅಗತ್ಯ ಬಂದಿದೆ.



ಎಡರಂಗ ಸರಕಾರದ ಭೂಬಳಕೆ ನೀತಿ ಭೂಸುಧಾರಣೆ ಮತ್ತು ಈಗಿರುವ ಕೃಷಿಯೇತರ ಜಮೀನಿನ ಮಾಲಕತ್ವ ಸಂರಚನೆಯ ಮೇಲಿನ ಒತ್ತನ್ನು ಉಳಿಸಿಕೊಳ್ಳುತ್ತದೆ. ಪಶ್ಚಿಮ ಬಂಗಾಳದಲ್ಲಿ ಭೂಸುಧಾರಣೆಯನ್ನಾಗಲಿ, ಆಹಾರಭದ್ರತೆಯನ್ನಾಗಲೀ ಬುಡಮೇಲು ಮಾಡುವ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ.

ಭೂಬಳಕೆ ನೀತಿ

ಮೂಲರಚನೆ ಬೆಳವಣಿಗೆ, ಕೈಗಾರಿಕೆ, ಯೋಜಿತ ನಗರೀಕರಣ ಮತ್ತು ಇತರ ವಲಯಗಳ ಅಗತ್ಯಗಳಿಗಾಗಿ ಭೂಮಿಯನ್ನು ಗುರುತಿಸಿ ಸ್ವಾಧೀನಪಡಿಸಿಕೊಳ್ಳಬೇಕಾಗುತ್ತದೆ. ಬೀಳುಭೂಮಿ ಮತ್ತು ಸಾಗುವಳಿ ಯೋಗ್ಯವಲ್ಲದ ಭೂಮಿಯೇ ಇಂತಹ ಬಳಕೆಗೆ ಮುಖ್ಯ ಮೂಲವಾಗುತ್ತವೆ. ಕೆಲವು ದೊಡ್ಡ ಯೋಜನೆಗಳಲ್ಲಿ ಅಕ್ಕಪಕ್ಕದ ಕೃಷಿಯೋಗ್ಯ ಜಮೀನನ್ನು ಸ್ವಾಧೀನಪಡಿಸಿ ಕೊಳ್ಳಬೇಕಾಗಬಹುದು. ಇಂತಹ ಸಂದರ್ಭಗಳಲ್ಲಿ ಬಹುಬೆಳೆ ಜಮೀನುಗಳ ಬದಲು ಏಕಬೆಳೆ ಭೂಮಿಯನ್ನೇ ಕೊಡಲಾಗುವುದು. ಇಂತಹ ಕ್ರಮಗಳ ಬಗ್ಗೆ ಟೀಕೆ ಒಂದೋ ಸರಿಯಾದ ಮಾಹಿತಿಯಿಲ್ಲದ್ದು ಅಥವಾ ಎಡರಂಗ ಸರಕಾರದ ಬಗ್ಗೆ ಕೆಟ್ಟ ಭಾವನೆ ಹರಡುವ ರಾಜಕೀಯ ಉದ್ದೇಶದಿಂದ ಕೂಡಿದ್ದು. ಈಗಾಗಲೇ ರಾಜಹಾಟ್, ಹೌರಾ, ಸಿಲಿಗುರಿ ಮತ್ತು ಇತರ ಕಡೆಗಳಲ್ಲಿ ನಗರ ವಸತಿ ಯೋಜನೆಗಾಗಿ ಮತ್ತು ಇತರ ಯೋಜನೆಗಳಿಗಾಗಿ ಭೂಮಿಯನ್ನು ವಶಪಡಿಸಿಕೊಂಡ ಉದಾಹರಣೆಗಳಿವೆ. ಇವಕ್ಕೆ ಕೆಲವು ಕಾನೂನುಗಳು, ಹಾಗೂ ಕಟ್ಟುನಿಟ್ಟಾದ ಸಾರ್ವಜನಿಕ ಪರೀಕ್ಷಣೆಗೆ ಒಳಗಾದ ವಿಧಾನಗಳಿವೆ.

ಭೂಮಿಯ ವೈಜ್ಞಾನಿಕ ಬಳಕೆಯ ಪ್ರಶ್ನೆ ಪಶ್ಚಿಮ ಬಂಗಾಳದಲ್ಲಿ ಮಾತ್ರವಲ್ಲ, ದೇಶಾದ್ಯಂತವೂ ಏಳುತ್ತದೆ. ಪಶ್ಚಿಮ ಬಂಗಾಳದಲ್ಲಿ ತಾರತಮ್ಯ ಜ್ಞಾನವಿಲ್ಲದೆ ಕೃಷಿ ಭೂಮಿಯನ್ನು ವರ್ಗಾಯಿಸಬಾರದು ಎಂಬ ಪ್ರಜ್ಞೆ ಎಡರಂಗಕ್ಕಿದೆ.

ಎಫ್‌ಡಿಐ ವಿವಾದ

ಮಾಧ್ಯಮದಲ್ಲಿ ಎಬ್ಬಿಸಿದ ಇನ್ನೊಂದು ವಿವಾದ ಭೂಮಿಯ ಸ್ವಾಧೀನ ಪ್ರಶ್ನೆಗೆ ಸಂಬಂಧಪಟ್ಟಿದ್ದು. ಇದು ವಿದೇಶೀ ನೇರ ಹೂಡಿಕೆ (ಎಫ್.ಡಿ.ಐ.) ಮತ್ತು ಅಂತಹ ಯೋಜನೆಗಳಿಗೆ ಅಗತ್ಯವಾದ ಭೂಮಿಗೆ ಸಂಬಂಧಪಟ್ಟಿದ್ದು. ಎಲ್ಲಾ ಎಫ್‌ಡಿಐ ಪ್ರಸ್ತಾಪಗಳನ್ನು ಪಕ್ಷದ 18ನೇ ಮಹಾಧಿವೇಶನ ಅಂಗೀಕರಿಸಿದ ನೀತಿ ದಸ್ತಾವೇಜಿನ ಬೆಳಕಿನಲ್ಲಿ ನೋಡಬೇಕು ಎಂಬ ಸ್ಪಷ್ಟತೆ ಸಿಪಿಐ(ಎಂ)ಗಿದೆ. ಎಫ್‌ಡಿಐಯನ್ನು ಹೇಗೆ ಕಾಣಬೇಕು ಎಂಬುದನ್ನು ಆ ದಸ್ತಾವೇಜಿನಲ್ಲಿ ವಿವರಿಸಲಾಗಿದೆ. ವಿದೇಶೀ ನೇರ ಹೂಡಿಕೆಯ ಹರಿವು ಈ ಕೆಳಗಿನ ಶರತ್ತುಗಳನ್ನು ಪೂರೈಸಬೇಕು : 1) ಇಂತಹ ಬಂಡವಾಳ ನಮ್ಮ ಆರ್ಥಿಕತೆಯ ಸದ್ಯದ ಉತ್ಪಾದಕ ಸಾಮರ್ಥ್ಯಗಳನ್ನು ಹೆಚ್ಚಿಸಬೇಕು.

2) ವಿದೇಶೀ ಬಂಡವಾಳ ತಂತ್ರಜ್ಞಾನದ ದೃಷ್ಟಿಯಿಂದ ಆರ್ಥಿಕವನ್ನು ಮೇಲಟ್ಟಕ್ಕೆ ಒಯ್ಯಬೇಕು ಹಾಗೂ

3) ಇಂತಹ ಬಂಡವಾಳದಿಂದ ಉದ್ಯೋಗಾವಕಾಶ ನಿರ್ಮಾಣವಾಗಬೇಕು.

ಎಡರಂಗ ಸರಕಾರ ಪ್ರತಿಯೊಂದು ಎಫ್‌ಡಿಐ ಪ್ರಸ್ತಾವವನ್ನು ಪ್ರತ್ಯೇಕವಾಗಿ ವಿವರವಾಗಿ ಪರಿಶೀಲಿಸುತ್ತದೆ. ಎಲ್ಲಾ ಎಫ್‌ಡಿಐ ಪ್ರಸ್ತಾಪಗಳನ್ನು ವಿರೋಧಿಸಬೇಕೆಂಬ ಸೈದ್ಧಾಂತಿಕ ಕುರುಡತನ ಸಿಪಿಐ(ಎಂ)ಗಿಲ್ಲ. ಅದೇ ವೇಳೆಗೆ ಎಫ್‌ಡಿಐನ ಹರಿವು ಒಟ್ಟಾರೆಯಾಗಿ ಪಕ್ಷದ ನೀತಿ ದಸ್ತಾವೇಜಿನಲ್ಲಿ ವಿವರಿಸಿದ ನಿಲುವಿಗೆ ಅನುಗುಣವಾಗಿರಬೇಕು. ಪಶ್ಚಿಮ ಬಂಗಾಳದಲ್ಲಿ ನಿರ್ಮಿಸಬೇಕಾದ ಸ್ಥಳೀಯ ಅಥವಾ ವಿದೇಶೀ ಹಣಕಾಸಿನ ಯಾವುದೇ ಪ್ರಮುಖ ಉದ್ದಿಮೆಗೆ ಭೂಮಿ ಬೇಕಾಗುತ್ತದೆ. ಸರಕಾರ ಮೇಲೆ ಹೇಳಿದ ಭೂಬಳಕೆ ನೀತಿಯ ಪ್ರಕಾರ ಭೂಮಿಯನ್ನು ಗುರುತಿಸಿ ನೀಡುತ್ತದೆ.

ಸಿಪಿಐ(ಎಂ) ತನ್ನ ಇತ್ತೀಚಿನ ಕೇಂದ್ರ ಸಮಿತಿ ಸಭೆಯಲ್ಲಿ ಈ ಪ್ರಶ್ನೆಗಳನ್ನು ಪಶ್ಚಿಮ ಬಂಗಾಳ ಮುಖಂಡತ್ವ ಸಲ್ಲಿಸಿದ ವರದಿಯ ಆಧಾರದಲ್ಲಿ ಚರ್ಚಿಸಿತು. ಕೃಷಿ ಬೆಳವಣಿಗೆಯನ್ನು ಉಳಿಸಿಕೊಳ್ಳುವ ಮತ್ತು ಕೈಗಾರಿಕಾ ಬೆಳವಣಿಗೆ ಹಾಗೂ ಕೈಗಾರಿಕೀಕರಣವನ್ನು ಪ್ರೋತ್ಸಾಹಿಸುವ ಎಡರಂಗದ ಪ್ರಯತ್ನಗಳನ್ನು ಪಕ್ಷ ಬೆಂಬಲಿಸಿದೆ. ಪಶ್ಚಿಮ ಬಂಗಾಳಕ್ಕೆ ಒಂದು ನಿಲುವು, ರಾಷ್ಟ್ರೀಯ ಮಟ್ಟದಲ್ಲಿ ಇನ್ನೊಂದು ನಿಲುವು ಎಂಬ ದುರುದ್ದೇಶಪೂರಿತ ಅಪಪ್ರಚಾರವನ್ನು ಕೇಂದ್ರ ಸಮಿತಿ ಆಧಾರ ರಹಿತ ಎಂದು ಖಂಡಿಸಿದೆ.

ದಲಿತರ ಮನೆಗಳಿಗೆ ಬೆಂಕಿ: ಸಂಘ ಪರಿವಾರದ ದೌರ್ಜನ್ಯ ಖಂಡಿಸಿ ಸಿಪಿಐ(ಎಂ) ಪ್ರತಿಭಟನೆ

ಹರ್‍ಯಾಣ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಇತ್ತೀಚೆಗೆ ಬಿಜೆಪಿ ಮತ್ತು ಸಂಘ ಪರಿವಾರದ ಮುಖಂಡರ ನೇರ ಕುಮ್ಮಕ್ಕಿನಿಂದ ದಲಿತರ ಮನೆಗಳಿಗೆ ಕೊಳ್ಳಿ ಇಟ್ಟ ದುಷ್ಕೃತ್ಯಗಳು ನಡೆದಿರುವುದನ್ನು ಖಂಡಿಸಿ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಬೆಂಗಳೂರು ಜಿಲ್ಲಾ ಸಮಿತಿಯು ಮಹಾತ್ಮಗಾಂಧಿ ಪ್ರತಿಮೆ ಮುಂದೆ ಪ್ರತಿಭಟನಾ ಧರಣಿಯನ್ನು ಸಂಘಟಿಸಿತ್ತು. ನೂರಾರು ಜನ ಪಕ್ಷದ ಕಾರ್ಯಕರ್ತರಲ್ಲದೆ ಹಲವು ಬುದ್ಧಿಜೀವಿ-ಚಿಂತಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಹರ್ಯಾಣದಲ್ಲಿ ಸೋನಾಪೇಟ್ ಕ್ಷೇತ್ರದ ಬಿಜೆಪಿ ಸಂಸದ ಕೃಷ್ಣಸಿಂಗ್ ಸಾಂಗ್ವಾನರ ಮಗನೇ ದುಷ್ಕರ್ಮಿಗಳ ತಂಡದ ನೇತೃತ್ವ ವಹಿಸಿದ್ದರು. ಮಹಾರಾಷ್ಟ್ರದ ಅಕೋಲಾದಲ್ಲಿ ಭಜರಂಗದಳದ ಮುಖಂಡರು ಈ ಕೃತ್ಯವೆಸಗಿದ್ದಾರೆ. ದಲಿತರು ಎಲ್ಲರಂತೆ ಸ್ವಾಭಿಮಾನ ಆತ್ಮಗೌರವದ ಬದುಕನ್ನು ರೂಪಿಸಿಕೊಳ್ಳಲು ಮಾಡುವ ಪ್ರಯತ್ನಗಳೇ ಈ ಅವಮಾನವೀಯ ದೌರ್ಜನ್ಯಗಳ ಮೂಲ ಕಾರಣವಾಗಿದೆ. ಇದು ಖಂಡನಾರ್ಹ ಎಂದು ಈ ಸಂದರ್ಭದಲ್ಲಿ ಮಾತನಾಡಿದ ಮುಖಂಡರು ತಿಳಿಸಿದರು. ಅಲ್ಲದೆ ಮನುವಾದಿ ಸಂಘ ಪರಿವಾರದ ದಲಿತ ವಿರೋಧಿ ನೀತಿಗಳನ್ನು ಅವರು ಖಂಡಿಸಿದರು.

ಪ್ರತಿಭಟನೆಯಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್, ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್, ಜಿಲ್ಲಾ ಮುಖಂಡರಾದ ಗೋಪಾಲಕೃಷ್ಣ, ಸ್ವಾತಂತ್ರ್ಯ ಹೋರಾಟಗಾರರೂ, ಯೋಜನಾ ಆಯೋಗದ ಮಾಜಿ ಸದಸ್ಯರಾದ ಎಲ್.ಸಿ.ಜೈನ್, ಖ್ಯಾತ ಸಾಮಾಜಿಕ ಕಾರ್ಯಕರ್ತೆ ದೇವಕಿ ಜೈನ್ ಮುಂತಾದವರು ಪಾಲ್ಗೊಂಡಿದ್ದರು.

ಐತಿಹಾಸಿಕ ಪ್ರಾಮುಖ್ಯತೆಯ ಸೆಪ್ಟೆಂಬರ್ 29,2005ರ ಸಾರ್ವತ್ರಿಕ ಮುಷ್ಕರ ಸಮೀಪಿಸುತ್ತಿದೆ. ಈ ಮುಷ್ಕರದ ಮಹತ್ವವನ್ನು ಕುರಿತು ವಿವರಿಸಿದ್ದಾರೆ ರಾಜ್ಯದ ಹಿರಿಯ ಕಾರ್ಮಿಕ ಮುಖಂಡರೂ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿಗಳೂ ಆದ
ಕಾಂ.ವಿ.ಜೆ.ಕೆ. ನಾಯರ್‌ರವರು.

ಸೆಪ್ಟೆಂಬರ್ 29 ರ ಸಾರ್ವತ್ರಿಕ ಮುಷ್ಕರ

ಸಮಸ್ತ ಜನಗಳಿಗಾಗಿ ಕಾರ್ಮಿಕ ವರ್ಗದ ಕಾರ್ಯಾಚರಣೆ

ಕಾರ್ಮಿಕ ಸಂಘಗಳ ಪ್ರಾಯೋಜಕ ಸಮಿತಿಯ ರಾಷ್ಟ್ರೀಯ ಸಮಾವೇಶ ಕರೆ ನೀಡಿರುವ ಮುಂಬರಲಿರುವ ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ನಿಜವಾಗಿಯೂ ಜನಗಳಿಗಾಗಿ ಜನಗಳ ಹಾಗೂ ಕಾರ್ಮಿಕ ವರ್ಗದ ನೇತೃತ್ವದ ಒಂದು ಕಾರ್ಯಾಚರಣೆಗೆ ಅಡಿಗಲ್ಲು ಹಾಕುವಂತದ್ದು. ಆ ಮುಷ್ಕರದ ಹದಿನಾರು ಬೇಡಿಕೆಗಳು ಸಮಸ್ತ ಜನಗಳ ತಕ್ಷಣದ ಅಗತ್ಯಗಳಿಗೆ, ಅನಿವಾರ್ಯ ಅವಶ್ಯಕತೆಗಳಿಗೆ ಸಂಬಂಧಪಟ್ಟವುಗಳು. ಕ್ರಿಯೆಗಿಳಿಸಿದಾಗ ಇದು ಖಂಡಿತಾ ಒಂದು ಉತೃಷ್ಟ ಕಾರ್ಯಾಚರಣೆಯಾಗುತ್ತದೆ.

ಇಲ್ಲಿ ನಮ್ಮ ರಾಜ್ಯದಲ್ಲಿ ಆಗಸ್ಟ್ 25, 2005 ರಂದು ಕಾರ್ಮಿಕ ಸಂಘಗಳ ಜಂಟಿ ಸಮಿತಿ(ಜೆಸಿಟಿಯು)ಯ ನೇತೃತ್ವದಲ್ಲಿ ನಡೆದ ಕರ್ನಾಟಕ ರಾಜ್ಯ ಸಮಾವೇಶ-ಮುನ್ನಡೆಯಿರಿ, ರಾಜ್ಯಾದ್ಯಂತ ಸಂಪೂರ್ಣ ಹರತಾಳ ಆಚರಿಸಿ ಎಂದು ನಮ್ಮ ಜನಗಳಿಗೆ ಕರೆ ನೀಡಿದೆ. ಕಾರ್ಮಿಕ ವರ್ಗ ಸಮಸ್ತ ಜನತೆಯ ಪರವಾಗಿ ನಡೆಸಲಿರುವ, ಇತರ ಜನವಿಭಾಗಗಳು ಬೆಂಬಲಿಸುವ ಈ ಕಾರ್ಯಾಚರಣೆಯ ಕಾರ್ಯಕ್ರಮ ಒಂದು ಜನತಾ ಕಾರ್ಯಾಚರಣೆಯಾಗಲಿದೆ, ರಾಜ್ಯದಲ್ಲಿ ಒಂದು ಬಂದ್‌ನಂತಹ ಸನ್ನಿವೇಶವನ್ನು ತರಲಿದೆ.

ಈ ಕಾರ್ಯಕ್ರಮದ ಸಂಪೂರ್ಣ ಯಶಸ್ಸಿಗಾಗಿ ಎಲ್ಲಾ ಮುಖಂಡರು, ಕಾರ್ಯಕರ್ತರು ತಮ್ಮ ತನು-ಮನಗಳನ್ನು ಅರ್ಪಿಸಬೇಕಾದ ಸಮಯವಿದು.

ಬೇಡಿಕೆಗಳ ವಿಶಾಲವ್ಯಾಪ್ತಿ

ಪ್ರಾಯೋಜಕ ಸಮಿತಿಯ ನೇತೃತ್ವದ ರಾಷ್ಟ್ರೀಯ ಸಮಾವೇಶ ಹಾಗೂ ಜೆಸಿಟಿಯು ನೇತೃತ್ವದ ರಾಜ್ಯ ಸಮಾವೇಶ ವಿಶಾಲ ಜನವಿಭಾಗಗಳ ಬೇಡಿಕೆಗಳನ್ನು, ಸಮಸ್ತ ಜನತೆಯ ನೈಜ ಆತಂಕಗಳನ್ನು ಮೊದಲಬಾರಿಗೆ ಮುಂದಿಟ್ಟಿದೆ. ಉದಾರೀಕರಣ ಕಾರ್ಯಕ್ರಮ ಆರಂಭವಾದಂದಿನಿಂದ ನಡೆದಿರುವ ಹಿಂದಿನ ಕಾರ್ಯಾಚರಣೆಗಳು ಇಷ್ಟೊಂದು ವ್ಯಾಪಕವಾದ ಹಾಗೂ ಸರಿಯಾದ ಹರಹು ಹೊಂದಿರಲಿಲ್ಲ.

ಈ ಹದಿನಾರು ಬೇಡಿಕೆಗಳನ್ನು ಹೇಗೆ ಹೆಣೆಯಲಾಗಿದೆಯೆಂದರೆ ಈ ಕಾರ್ಯಾಚರಣೆಗೆ ನೇತೃತ್ವ ನೀಡುವ ಕಾರ್ಮಿಕ ವರ್ಗದ ಪ್ರತಿಯೊಂದು ವಿಭಾಗವನ್ನು ಅವು ತಟ್ಟುತ್ತವೆ. ಮೊದಲ ಬೇಡಿಕೆಯನ್ನು, ಅಸಂಘಟಿತ ಶ್ರಮಜೀವಿಗಳಿಗೆ ಒಂದು ಸಮಗ್ರ ಶಾಸನದ ಬೇಡಿಕೆಯನ್ನು ಸಮಸ್ತ ಕಾರ್ಮಿಕ ವರ್ಗದ ಮತ್ತು ಜನತೆಯ ಹಿತದೃಷ್ಟಿಯಿಂದ ಗೆಲ್ಲಬೇಕಾಗಿದೆ. ಉದಾರೀಕರಣ ಪ್ರಕ್ರಿಯೆ ಸಂಘಟಿತ ಶ್ರಮಜೀವಿಗಳನ್ನೇ ಅಸಂಘಟಿತರಾಗಿಸುತ್ತಿದೆ. ಅಸಂಘಟಿತ ಶ್ರಮಜೀವಿಗಳ ಸಂಖ್ಯೆ ವಯಸ್ಕ ಜನಸಂಖ್ಯೆಯ ಶೇ 25 ಆಗುತ್ತದೆಯಷ್ಟೇ ಅಲ್ಲ, ಅವರ ಕುಟುಂಬಗಳನ್ನು ಸೇರಿಸಿದರೆ ಇದರ ಪ್ರಮಾಣ ದೇಶದ ಇಡಿ ಜನಸಂಖ್ಯೆಯ ಅರ್ಧಕ್ಕಿಂತಲೂ ಹೆಚ್ಚು. ಕಾರ್ಮಿಕ ವರ್ಗದಲ್ಲಂತೂ ಇವರ ಸಂಖ್ಯೆ ಶೇ 90 ರಷ್ಟಾಗುತ್ತದೆ ಎಂದು ಬೇರೆ ಹೇಳಬೇಕಾಗಿಲ್ಲ. ತಮ್ಮ ಹಿತಾಸಕ್ತಿಗಳ ರಕ್ಷಣೆಗಾಗಿ ಕೇವಲ ಅವರಷ್ಟೇ ಹೋರಾಡಲು ಸಾಧ್ಯವಿಲ್ಲ ಎಂದೂ ಹೇಳಬೇಕಾಗುತ್ತದೆ. ಈ ಕಾರ್ಯಾಚರಣೆಗೆ ಸಮಸ್ತ ಕಾರ್ಮಿಕವರ್ಗ ನೇತೃತ್ವ ನೀಡಬೇಕಾಗುತ್ತದೆ. ಸಂಘಟಿತ ವಿಭಾಗಗಳು ಅಸಂಘಟಿತ ವಿಭಾಗಗಳ ಹಾಗೂ ಇಡೀ ಜನತೆಯ ಹಿತದೃಷ್ಟಿಯಿಂದ ಕಾರ್ಯಾಚರಣೆಗಿಳಿದರೆ ಮಾತ್ರ ಕಾರ್ಮಿಕವರ್ಗದ ಏಕೀಕರಣ ಮತ್ತು ಕ್ರೋಢೀಕರಣ ಸಾಧ್ಯ.

ಇಡೀ ವರ್ಗದ ಐಕ್ಯ ಕಾರ್ಯಾಚರಣೆ

ಈ ಕಾರ್ಯಾಚರಣೆಯ ಕರೆ ಸಂಘಟಿತ ಕಾರ್ಮಿಕ ವರ್ಗಕ್ಕೆ ಅಸಂಘಟಿತ ವಲಯದ ಬೇಡಿಕೆಗಳಿಗಾಗಿ ತಮ್ಮ ಸ್ವಂತ ಹಿತಾಸಕ್ತಿಯಿಂದಲೇ ಕಾರ್ಯಾಚರಣೆಗಿಳಿಯಲು ಅವಕಾಶ ಒದಗಿಸಿದೆಯಷ್ಟೇ ಅಲ್ಲ, ಹಣಕಾಸು ಸೇವೆಗಳ ನೌಕರರು, ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರು ಇತ್ಯಾದಿ ಸಮಸ್ತ ಕಾರ್ಮಿಕ ವರ್ಗ ಜತೆಗೂಡಿ ಕಾರ್ಯಾಚರಣೆಗಿಳಿಯಲು ಅವಕಾಶ ಒದಗಿಸಿದೆ. ಹೀಗೆ ಇದು ದುಡಿಯುವ ಜನಗಳ ಪ್ರತಿಯೊಂದು ವಿಭಾಗಕ್ಕೂ ತನ್ನದೇ ಸ್ವಂತ ಹಿತಾಸಕ್ತಿಯಿಂದ, ಐಕ್ಯ ಕಾರ್ಯಾಚರಣೆಗಿಳಿಯಲು, ಆ ಮೂಲಕ ಖಂಡಿತವಾಗಿಯೂ ಇಡೀ ಜನತೆಯ ಹಿತಾಸಕ್ತಿಗಳನ್ನು ಸಾಧಿಸಲು ಅವಕಾಶ ಒದಗಿಸಿದೆ.

ಜನತೆಯ ಬೇಡಿಕೆಗಳು

ಸಾರ್ವಜನಿಕ ವಿತಾರಣಾ ವ್ಯವಸ್ಥೆಯನ್ನು ಬಲಪಡಿಸಬೇಕೆಂಬ ಬೇಡಿಕೆ, ಬ್ಯಾಂಕುಗಳ 'ಕಾರ್ಯನಿರ್ವಹಿಸದ ಆಸ್ತಿ' ಗಳ ವಸೂಲಿ ಮತ್ತು ತೆರಿಗೆ ಬಾಕಿ ವಸೂಲಿ ಇಡೀ ಜನತೆಯ ಹಿತ ಸಾಧಿಸುವ ಬೇಡಿಕೆಗಳು. ಬ್ಯಾಂಕುಗಳು, ಹಣಕಾಸು ಸಂಸ್ಥೆಗಳು ದೊಡ್ಡ ಬಂಡವಾಳಶಾಹಿಗಳಿಗೆ ಕೊಟ್ಟ ಸಾಲಗಳ ಮರುಪಾವತಿಯಲ್ಲಿ 45,000 ಕೋಟಿ ರೂ.ಗಳಷ್ಟು ಬಾಕಿಯಿದೆ. ಅದನ್ನು ವಸೂಲಿ ಮಾಡಿಲ್ಲ. ಇದನ್ನು 'ಕಾರ್ಯನಿರ್ವಹಿಸದ ಆಸ್ತಿ' ಎಂದಷ್ಟೇ ಹೇಳಲಾಗುತ್ತಿದೆ. ಬ್ಯಾಂಕುಗಳು, ಹಣಕಾಸು ಸಂಸ್ಥೆಗಳು ಜನಸಾಮಾನ್ಯರು ಕೊಂಡ ಸಾಲವನ್ನು ತೀರಿಸದಿದ್ದರೆ ಜಪ್ತಿ ಮಾಡುತ್ತವೆ, ಅವರ ಆಸ್ತಿಗಳನ್ನು ಮಾರಾಟ ಮಾಡುತ್ತವೆ. ಆದರೆ ದೊಡ್ಡ ಬಂಡವಾಳಶಾಹಿಗಳು ಸಾಲ ಹಿಂದಿರುಗಿಸದಿದ್ದರೆ ಕಣ್ಣುಮುಚ್ಚಿ ಕುಳಿತುಕೊಳ್ಳುತ್ತವೆ. ಅವರ ಹೆಸರುಗಳನ್ನೂ ಪ್ರಕಟಿಸುವುದಿಲ್ಲ. ಇದನ್ನು ವಸೂಲಿ ಮಾಡಬೇಕೆಂಬ ಬೇಡಿಕೆ ಹಣಕಾಸು ವಲಯದ ಬೇಡಿಕೆ ಎಂದೂ ಕಾಣಬಹುದು. ನಿಜ, ಈ ಬೇಡಿಕೆಯನ್ನು ಸದಾ ಎತ್ತುತ್ತಾ ಬಂದಿರುವುದು ಬ್ಯಾಂಕ್ ನೌಕರರು.



ಅದೇ ರೀತಿ ದೂರಸಂಪರ್ಕ ವಲಯದಲ್ಲಿ ಎಫ್‌ಡಿಐ ಕ್ರಮಗಳನ್ನು ಹಿಂತೆಗೆದುಕೊಳ್ಳಬೇಕೆಂಬ ಬೇಡಿಕೆ ಕೂಡಾ ಜನರ ಹಿತ ಕಾಯುವಂತಹದ್ದು. ವಿದ್ಯುಚ್ಛಕ್ತಿ ಕಾನೂನು, 2003 ರ ಪರಾಮರ್ಶೆ ನಡೆಸಬೇಕೆಂಬ ಬೇಡಿಕೆಯಂತೂ ಇಡೀ ಜನತೆಯ ಹಿತದೃಷ್ಟಿಯಿಂದ ಇಟ್ಟಿರುವ ಬೇಡಿಕೆ. ವಿಶೇಷವಾಗಿ ಇದು ರೈತರ ತಕ್ಷಣದ ಹಿತಾಸಕ್ತಿ ಈಡೇರಿಸುವಂತದ್ದು. ಏಕೆಂದರೆ ಅವರ ಪಂಪ್‌ಸೆಟ್‌ಗಳಿಗೆ ಸಾಕಷ್ಟು ವಿದ್ಯುತ್ ಸಿಗುತ್ತಿಲ್ಲ. ಅದೇ ರೀತಿ ಸಣ್ಣ ಪ್ರಮಾಣದ ಉದ್ಯಮಿಗಳು ಮತ್ತು ಕಸುಬುದಾರರ ತಕ್ಷಣದ ಹಿತಾಸಕ್ತಿಯನ್ನು ಇದು ತಟ್ಟುವಂತದ್ದು. ಅವರೂ ವಿದ್ಯುತ್ ಪೂರೈಕೆ ಕಂಪನಿಗಳ ಮರ್ಜಿಗೆ ಒಳಪಟ್ಟಿದ್ದಾರೆ.

ರೈತರ ಬೇಡಿಕೆಗಳೂ ಸೇರಿವೆ

ನೈಜ ಭೂ ಸುಧಾರಣೆಗಳನ್ನು ಜಾರಿಗೊಳಿಸಬೇಕು, ಮಿಗುತೆ ಮತ್ತು ಸಾಗುವಳಿ ಯೋಗ್ಯ ಭೂಮಿಯನ್ನು ಹಂಚಬೇಕು ಎಂಬ ರೈತಾಪಿ ಜನಗಳ ಬೇಡಿಕೆಯೂ ಈ ಹೋರಾಟದಲ್ಲಿದೆ. ಇದರೊಂದಿಗೇ ನಗರಗಳಲ್ಲಿ, ಪಟ್ಟಣಗಳಲ್ಲಿ ಹಾಗೂ ಅಂಚಿನಲ್ಲಿರುವ ಸ್ಥಳಗಳಲ್ಲಿ ವಸತಿ ನಿವೇಶನಗಳ ಬೇಡಿಕೆಯೂ ಇದೆ. ನಿವೇಶನ ಮಂಜೂರಾದವರಿಗೆ ಸರಿಯಾದ ದಾಖಲೆಗಳನ್ನು, ಮಾರಾಟ ಕ್ರಯಪತ್ರ ಇತ್ಯಾದಿಗಳನ್ನು ಕೊಟ್ಟಿಲ್ಲ. ತಮ್ಮದೇ ಆದ ಸಮಸ್ಯೆಗಳು ಈ ಜನರಿಗಿದೆ. ಸಾರ್ವತ್ರಿಕ ಮುಷ್ಕರ ಮತ್ತು ಹರತಾಳ ಅವರ ಬೇಡಿಕೆಗಳ ಈಡೇರಿಕೆಗಾಗಿಯೂ ಒಂದು ಬಂದ್ ರೀತಿಯ ಸನ್ನಿವೇಶ ನಿರ್ಮಿಸುವ ನಿರೀಕ್ಷೆಯಿದೆ.

ಸರ್ಕಾರಿ ನೌಕರರು

ಉದಾರೀಕರಣ ಪ್ರಕ್ರಿಯೆ ಇವರಿಗೂ ಒಂದು ದೊಡ್ಡ ಸವಾಲೊಡ್ಡಿದೆ. ಅವರ ಲಕ್ಷಾಂತರ ಉದ್ಯೋಗಾವಕಾಶಗಳು ರದ್ದಾಗುತ್ತಿವೆ. ಸರ್ಕಾರಿ ನೌಕರರ ಬದಲು ಕಾಂಟ್ರಾಕ್ಟ್ ಕಾರ್ಮಿಕರು, ಸ್ವಯಂಸೇವಾ ಕಾರ್ಮಿಕರು ಮುಂತಾದವರನ್ನು ಕೆಲಸಕ್ಕೆ ಹಚ್ಚಲಾಗುತ್ತಿದೆ. ನಗರಸಭೆಗಳು, ಮಹಾನಗರ ಪಾಲಿಕೆಗಳಲ್ಲಿ, ವಿದ್ಯುತ್ ಪೂರೈಕೆ, ಸಾರಿಗೆ ಮುಂತಾದ ಶಾಸನಬದ್ಧ ನಿಗಮಗಳಲ್ಲಿ ಇದು ನಡೆಯುತ್ತಿದೆ.

ಎಲ್ಲರಿಗೂ ಮರ್ಯಾದೆಪೂರ್ಣ ಕೆಲಸ ಒದಗಿಸಬೇಕು ಎಂಬುದಕ್ಕೆ ಅಂತರ‍್ರಾಷ್ಟ್ರೀಯ ಕಾರ್ಮಿಕ ಸಂಘಟನೆ ಬದ್ಧವಾಗಿದೆ. ಆದರೆ ಅದರ ಬದಲು ಸರ್ಕಾರ ತನ್ನ ಖರ್ಚುಗಳನ್ನು ಕಡಿತ ಮಾಡಲು ದೇಶಾದ್ಯಂತ ಲಕ್ಷಾಂತರ ಕಾರ್ಮಿಕರಿಗೆ ಒದಗಿಸುತ್ತಿರುವುದು ಅಸಭ್ಯ ಜೀವನ ಪರಿಸ್ಥಿತಿಗಳನ್ನು.

ಆರನೇ ವೇತನ ಆಯೋಗವನ್ನು ನೇಮಿಸಬೇಕೆಂಬ ಕೇಂದ್ರ ಸರ್ಕಾರಿ ನೌಕರರ ಬೇಡಿಕೆ, ಬೆಂಗಳೂರಿಗೆ 'ಎ1' ಸ್ಥಾನಮಾನ ನೀಡಬೇಕೆಂಬ ಬೇಡಿಕೆಯೂ ಇದೆ. ಇದು ಸಾರ್ವಜನಿಕ ವಲಯದ ಕಾರ್ಮಿಕರ ಬೇಡಿಕೆ ಕೂಡಾ. ಏಕೆಂದರೆ ಅವರಿಗೆ ಕೈಗಾರಿಕಾ ತುಟ್ಟಿಭತ್ಯೆಯ ವ್ಯವಸ್ಥೆಯಿದೆ. ಈ ಬೇಡಿಕೆಗಳಿಗೆ ಎಲ್ಲರ ಬೆಂಬಲ ಇದೆ.

ಬ್ಯಾಂಕ್ ಮತ್ತು ವಿಮಾ ನೌಕರರು ಸತತವಾಗಿ ಖಾಸಗೀಕರಣದ ವಿರುದ್ಧ ಹೋರಾಡುತ್ತಿದ್ದಾರೆ. ಈ ಖಾಸಗೀಕರಣ ನೀತಿಗಳು ವಿದೇಶಿ ಹಣಕಾಸು ಬಂಡವಾಳಿಗರ ಹಿತಾಸಕ್ತಿಗಳನ್ನಲ್ಲದೆ ಬೇರೆ ಯಾರ ಹಿತವನ್ನೂ ಸಾಧಿಸುವಂತದ್ದಲ್ಲ. ಅಷ್ಟೇ ಅಲ್ಲ, ಜನಗಳಿಗೆ ಅಹಿತವುಂಟುಮಾಡುವಂತದಾದ್ದರಿಂದ ಖಾಸಗೀಕರಣಕ್ಕೆ ಪ್ರತಿರೋಧ ಬಂದಿದೆ.

ಮುಚ್ಚಿದ ಕಾರ್ಖಾನೆಗಳ ಕಾರ್ಮಿಕರು

ಸಮರ್ಥವಾಗಿ ಕೆಲಸ ಮಾಡಬಲ್ಲ ಸಾರ್ವಜನಿಕ ವಲಯದ ಘಟಕಗಳನ್ನು ಪುನರುಜ್ಜೀವನಗೊಳಿಸಲು ನಿರಾಕರಿಸುವುದರ ಮುಖ್ಯಉದ್ದೇಶ ಈ ಸಾರ್ವಜನಿಕ ಆಸ್ತಿಗಳ ಲೂಟಿ. ಕೆಜಿಎಫ್ ನ ಬಿಜಿಎಂಎಲ್, ಬೆಂಗಳೂರಿನ ಎನ್‌ಜಿಇಎಫ್ ಮತ್ತು ಮೈಸೂರು ಲ್ಯಾಂಪ್ಸ್‌ನ ಉದಾಹರಣೆ ನಮ್ಮ ಕಣ್ಣಮುಂದಿದೆ. ಸುಮಾರು ಮೂರು ಸಾವಿರ ಕಾರ್ಮಿಕರಿಗೆ 100-120 ಕೋಟಿ ರೂ.ಗಳ ಅಂತಿಮ ಸೌಲಭ್ಯ ನೀಡಿ ಚಿನ್ನದ ಗಣಿಗಳನ್ನು ಪುನರುಜ್ಜೀವನಗೊಳಿಸುವ ಬದಲು ಕೇಂದ್ರ ಸರ್ಕಾರ ಆಸಕ್ತಿವಹಿಸಿರುವ ಇತ್ತೀಚಿನ ಪ್ರಸ್ತಾಪವೆಂದರೆ ಇಡೀ ಗಣಿಯನ್ನು ವಿದೇಶಿ ಕಂಪನಿಗಳ ಒಂದು ಕೂಟಕ್ಕೆ ಪುಕ್ಕಟೆಯಾಗಿ ನೀಡುವುದು, ಆ ಕೂಟ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸುತ್ತದೆ ಎಂಬ ತಪ್ಪು ನಿರೀಕ್ಷೆಯಿಂದ. ಕೆಜಿಎಫ್‌ನಲ್ಲೇ ಮತ್ತೆ ಸಂಸ್ಕರಿಸಬಹುದಾದ 3.4 ಕೋಟಿ ಟನ್, ಟೇಲಿಂಗ್‌ನಲ್ಲಿ 15000 ಕೋಟಿ ರೂ.ಗಳಷ್ಟು ಬೆಲೆ ಬಾಳುವ ಚಿನ್ನವಿದೆ. ಅಲ್ಲದೆ ಕೆಜಿಎಫ್, ಆಂಧ್ರಪ್ರದೇಶದ ಕುಪ್ಪಂ ಜಿಲ್ಲೆಯಲ್ಲಿ ಚಿಗರಿಗುಂಟ ಮತ್ತು ಬಿಸನಾತಂನಲ್ಲಿ ಚಿನ್ನದ ಗಣಿಗಾರಿಕೆಯ ಸಾಧ್ಯತೆಗಳಿವೆ. ಕಾರ್ಮಿಕರಿಗೆ ಕೊಡಬೇಕಾದ ಬಾಕಿಗಳನ್ನು ಕೊಡಿ, ನಂತರ ಅವರು ತಮ್ಮದೇ ಸಹಕಾರಿಗಳನ್ನು ಸಂಘಟಿಸಿ ಗಣಿಗಳನ್ನು ಪುನರುಜ್ಜೀವನಗೊಳಿಸಲು ಅವಕಾಶ ನೀಡಿ ಎಂಬುದು ಕಾರ್ಮಿಕ ಸಂಘಗಳ ಬೇಡಿಕೆ. ಸರ್ಕಾರ ಮುಂದೆಯೂ ಆಸಕ್ತಿ ತೋರಿಸಿದರೆ ಕಾರ್ಮಿಕರು ತಮ್ಮ ಭಾಗದ ಆದಾಯಗಳನ್ನು ತೆರಲು ಸಿದ್ಧರಾಗಿದ್ದಾರೆ. ಕಾರ್ಮಿಕರು ವಿದೇಶಿ ಬಂಡವಾಳ ಮತ್ತು ತಾಂತ್ರಿಕ ಜ್ಞಾನಕ್ಕೆ ವಿರುದ್ಧವಾಗಿಲ್ಲ. ಆದರೆ ಅದಕ್ಕಾಗಿ ಸಾವಿರಾರು ಕೋಟಿ ರೂ.ಗಳ ಮೌಲ್ಯದ ಸಾರ್ವಜನಿಕ ಆಸ್ತಿಯನ್ನು ವಿದೇಶೀ ಕಂಪನಿಗಳಿಗೆ ಆರತಿಯೆತ್ತಿ ತಟ್ಟೆಯಲ್ಲಿಟ್ಟು ಕೊಡಬೇಕಾಗಿಲ್ಲ. ವಿದೇಶೀ ಬಂಡವಾಳ ಮತ್ತು ತಾಂತ್ರಿಕ ಸಹಕಾರ ನೀಡುವವರಿಗೆ ಬಹುಪಾಲಲ್ಲದ, ತರ್ಕಬದ್ಧ ಪಾಲು ಕೊಡುವುದಕ್ಕೆ ಕಾರ್ಮಿಕರು ಸಿದ್ಧವಾಗಿದ್ದಾರೆ. ಆದರೆ ಸರ್ಕಾರದ ಈಗಿನ ಪ್ರಯತ್ನಕ್ಕೆ ಅವರ ವಿರೋಧವಿದೆ.

ರೋಗಗ್ರಸ್ತ ಘಟಕಗಳ ಪುನರುಜ್ಜೀವನ ಮತ್ತು ಇಂತಹ ರೋಗಗ್ರಸ್ತತೆ ಅಥವಾ ಕ್ಲೋಶರ್‌ಗಳಿಂದ ಉದ್ಯೋಗವಿಲ್ಲದಂತಾಗಿರವ ಕಾರ್ಮಿಕರ ಮರುವಸತಿ ಈ ಕಾರ್ಯಾಚರಣೆಯ ಬೇಡಿಕೆಗಳಲ್ಲಿ ಸೇರಿದೆ.

ದುಡಿಯುವ ಮಹಿಳೆಯರ ಬೇಡಿಕೆಗಳು

ರಾಷ್ಟ್ರೀಯ ಬೇಡಿಕೆಗಳಲ್ಲಿ ಮಹಿಳಾ ನೌಕರರಿಗೆ ಲೈಂಗಿಕ ಕಿರುಕುಳಗಳಿಂದ ರಕ್ಷಣೆಗಾಗಿ ಶಾಸನ ತರಬೇಕೆಂಬ ಬೇಡಿಕೆಯಷ್ಟೇ ಇದ್ದರೆ, ರಾಜ್ಯದ ಬೇಡಿಕೆಗಳಲ್ಲಿ ಸುಪ್ರೀಂಕೋರ್ಟ್ ತೀರ್ಪಿನಂತೆ ತಕ್ಷಣವೇ ಸಮಿತಿಗಳನ್ನು ನೇಮಿಸಬೇಕೆಂಬ

ಪುಟ 8 ನೋಡಿ

ಆಧುನಿಕ ಜೀವನದ ಜೀವನಾಡಿಯಾದ ಸಾರಿಗೆ ವೆಚ್ಚವನ್ನು ತೀವ್ರವಾಗಿ ಏರಿಸುವ ಮೂಲಕ ಸಮಾಜದ ಮೇಲೆ ಅದರಲ್ಲಿಯೂ ದುಡಿಯುವ ವರ್ಗದ ಜನರ ಮೇಲೆ ಗಂಭೀರ ದುಷ್ಪರಿಣಾಮಗಳನ್ನು ಬೀರುವ ಪೆಟ್ರೋಲ್ -ಡೀಸೆಲ್ ಬೆಲೆ ಏರಿಕೆಯನ್ನು ಸಿಪಿಐ(ಎಂ) ಮತ್ತು ಎಡಪಕ್ಷಗಳು ತೀವ್ರವಾಗಿ ವಿರೋಧಿಸಿದವು. ಬಿಜೆಪಿ, ಎನ್‌ಡಿಎಗಳು ಪೆಟ್ರೋಲಿಯಂ ಬೆಲೆ ಏರಿಕೆಯನ್ನು ವಿರೋಧಿಸುವುದಾಗಿ ಹೇಳುತ್ತಿವೆ. ಅವುಗಳ ಗೋಸುಂಬೆತನಕ್ಕಿಂತ ಭಿನ್ನವಾಗಿ ಎಡಪಕ್ಷಗಳ ವಿರೋಧವು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿನ ತೈಲ ಬೆಲೆ ಏರಿಕೆ ಪರಿಣಾಮಗಳನ್ನು ನಿವಾರಿಸುವ ಸ್ಪಷ್ಟ - ಜನಪರ ಪರ್ಯಾಯವನ್ನು ಅವಲಂಬಿಸಿವೆ. ಬಿಜೆಪಿ ಕೂಟಕ್ಕೆ ತೋರಿಕೆಗಾಗಿಯಾದರೂ ಇಂತಹ ಪರ್ಯಾಯ ಎಲ್ಲಿದೆ. ಎಡಪಕ್ಷಗಳ ಪರ್ಯಾಯ ಧೋರಣೆಗಳ ಕುರಿತು ಈ ಲೇಖನ.

ಪೆಟ್ರೋಲ್ - ಡೀಸೆಲ್ ಬೆಲೆ ಏರಿಕೆ ಗಾಯದ ಮೇಲೆ ಮತ್ತೊಂದು ಬರೆ

ಬಾಲಕೃಷ್ಣ ಶೆಟ್ಟಿ

ಕೇವಲ ಎರಡೂವರೆ ತಿಂಗಳ ಹಿಂದೆ, ಅಂದರೆ, ಜೂನ್ 20 ರಂದು ಪೆಟ್ರೋಲ್ ಲೀಟರಿಗೆ ರೂ. 2.50 ಮತ್ತು ಡೀಸೆಲ್ ಲೀಟರಿಗೆ ರೂ.2.00ರಂತೆ ದರ ಹೆಚ್ಚಿಸಿದ ಕಾಂಗ್ರೆಸ್(ಐ) ನೇತೃತ್ವದ ಯು.ಪಿ.ಎ. ಸರ್ಕಾರ, ಇನ್ನೊಮ್ಮೆ ರೂ. 3 ಮತ್ತು ರೂ. 2 ಹೆಚ್ಚಳ ಮಾಡುವ ಮೂಲಕ ಗಾಯದ ಮೇಲೆ ಬರೆ ಎಳೆದಿದೆ. ಮಾರಾಟ ತೆರಿಗೆ ಹೆಚ್ಚಿರುವ ಕರ್ನಾಟಕದಲ್ಲಿ ಪೆಟ್ರೋಲ್ ಲೀಟರಿಗೆ ರೂ. 3.36 ಹೆಚ್ಚಳವಾದರೆ, ಡೀಸೆಲ್‌ಗೆ ರೂ. 2.24 ಹೆಚ್ಚಳವಾಗಿದೆ.

ಯು.ಪಿ.ಎ. ಸರ್ಕಾರ ಅಧಿಕಾರಕ್ಕೆ ಬಂದ 16 ತಿಂಗಳ ಅವಧಿಯಲ್ಲಿ 5ನೇ ಬಾರಿಗೆ ಪೆಟ್ರೋಲ್, ಡೀಸೆಲ್ ದರ ಹೆಚ್ಚಳವಾಗುತ್ತಿದೆ.

ಸಿಪಿಐ(ಎಂ) ನೇತೃತ್ವದ ಎಡ ಪಕ್ಷಗಳ ತೀವ್ರ ಒತ್ತಡದಿಂದಾಗಿ ಅಡುಗೆ ಅನಿಲ ಮತ್ತು ಸೀಮೆ ಎಣ್ಣೆಯ ಬೆಲೆ ಹೆಚ್ಚಳವಾಗಿಲ್ಲದಿದ್ದರೂ, ತೈಲ ಬೆಲೆ ಹೆಚ್ಚಳದ ವಿರುದ್ಧ ದೇಶದಾದ್ಯಂತ ಪ್ರತಿಭಟನೆ ನಡೆಸಲು ಸಿಪಿಐ(ಎಂ) ಕರೆ ನೀಡಿದೆ. (ರಾಜ್ಯದಾದ್ಯಂತ ನಡೆದ ಪ್ರತಿಭಟನೆಯ ವರದಿ ನೀಡಲಾಗಿದೆ.)


ಹೆಚ್ಚಳ ಅನಿವಾರ್ಯವೇ?

ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಲೆ ಹೆಚ್ಚಳವಾಗುತ್ತಿದ್ದರೂ ದೇಶದೊಳಗಡೆ ತೈಲ ಬೆಲೆ ಹೆಚ್ಚಿಸದೆ ಇರಲು ಹಲವಾರು ಪರ್ಯಾಯ ಮಾರ್ಗಗಳಿವೆ. ಎಡಪಕ್ಷಗಳು ಬಹಳ ಹಿಂದೆಯೇ ಇದನ್ನು ಸರಕಾರದ ಗಮನಕ್ಕೆ ತಂದಿದ್ದರೂ, ಶ್ರೀಮಂತ ಬಂಡವಾಳಿಗರ ಪರವಾಗಿರುವ ಕೇಂದ್ರ ಸರಕಾರ ಇದನ್ನು ತಿರಸ್ಕರಿಸಿದೆ. ಖಾಸಗಿ ತೈಲ ಕಂಪೆನಿಗಳ ಹುನ್ನಾರಕ್ಕೆ ಬಲಿಯಾಗಿದೆ.

ಸೆಪ್ಟೆಂಬರ್ 5ನೇ ತಾರೀಖಿನಂದು ಸಿಪಿಐ(ಎಂ)ನ ಅಖಿಲ ಭಾರತ ಕಾರ್ಯದರ್ಶಿ ಪ್ರಕಾಶ್ ಕರಾಟ್ ಮತ್ತು ಪಾಲಿಟ್ ಬ್ಯೂರೋ ಸದಸ್ಯ ಸೀತಾರಾಂ ಯೆಚೂರಿಯವರು ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಿದ್ದು, ದರ ಹೆಚ್ಚಿಸುವ ಬದಲಾಗಿ, ಏಳು ಪರ್ಯಾಯ ಮಾರ್ಗಗಳನ್ನು ಸೂಚಿಸಿದ್ದು, ಅದರಲ್ಲಿ ಕೆಲವೇ ಕೆಲವು ಅಂಶಗಳನ್ನು ಸರಕಾರ ಪರಿಗಣಿಸಿದರೂ ದರ ಹೆಚ್ಚಳ ಮಾಡುವ ಅಗತ್ಯವಿರುವುದಿಲ್ಲ. ಈಗಾಗಲೇ ತಿಳಿದಿರುವಂತೆ ದೆಹಲಿಯಲ್ಲಿ ಮಾರಾಟವಾಗುವ ಪ್ರತಿ ಲೀಟರ್ ಪೆಟ್ರೋಲ್ ದರದಲ್ಲಿ ಶೇ.57 ರಷ್ಟು ಕಸ್ಟಂ ತೆರಿಗೆ, ಅಬಕಾರಿ ತೆರಿಗೆ ಮತ್ತು ಡೀಸೆಲ್ ಬೆಲೆಯಲ್ಲಿ ಶೇಕಡಾ 35 ರಷ್ಟು ಈ ತೆರಿಗೆಗಳು ಸೇರಿಕೊಂಡಿದೆ. ಕರ್ನಾಟಕದಲ್ಲಿ ಮಾರಾಟ ತೆರಿಗೆ ಜಾಸ್ತಿ ಇರುವುದರಿಂದ ಇಲ್ಲಿನ ಗ್ರಾಹಕರು ತೆರಿಗೆ ರೂಪದಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳಿಗೆ ನೀಡುತ್ತಿರುವ ಹಣ ಇನ್ನೂ ಜಾಸ್ತಿ. ಅಂದರೆ, ಬೆಂಗಳೂರಿನಲ್ಲಿ ನೀಡುತ್ತಿರುವ ರೂ. 50.66 ಪೆಟ್ರೋಲ್ ದರದಲ್ಲಿ ರೂ. 30ಕ್ಕಿಂತಲೂ ಹೆಚ್ಚು ತೆರಿಗೆ! ಹಾಗೆಯೇ ಒಂದು ಲೀಟರ್ ಡೀಸೆಲ್ ಬೆಲೆಯಲ್ಲಿ 35.26 ರೂ.ನಲ್ಲಿ ತೆರಿಗೆ ಅಂಶ ರೂ. 12.25! ಈ ಹಿನ್ನಲೆಯಲ್ಲಿ ತೆರಿಗೆ ದರದಲ್ಲಿ ಮಾರ್ಪಾಡು ಅಗತ್ಯ ಎಂದು ಸಿಪಿಐ(ಎಂ) ಹೇಳಿತ್ತು.

1. ಮೇಲು ತೆರಿಗೆಯಲ್ಲಿ ಕಡಿತ ಮಾಡಿ : ಬಿಜೆಪಿ ನೇತೃತ್ವದ ಎನ್.ಡಿ.ಎ. ಸರಕಾರ ಅಧಿಕಾರದಲ್ಲಿರುವಾಗ ರಸ್ತೆ ಅಭಿವೃದ್ಧಿಯ ಹೆಸರಿನಲ್ಲಿ 1 ಲೀಟರ್ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ರೂ. 1.50 ರಂತೆ ಮೇಲು ತೆರಿಗೆ(ಸೆಸ್) ಹಾಕಿತ್ತು. ಯು.ಪಿ.ಎ. ಸರಕಾರ ಅಧಿಕಾರಕ್ಕೆ ಬಂದ ನಂತರ 2005 ಫೆಬ್ರುವರಿ ತಿಂಗಳ ಬಜೆಟ್‌ನಲ್ಲಿ 50 ಪೈಸೆ ಪ್ರತಿ ಲೀಟರಿಗೆ ಮತ್ತೆ ಹೆಚ್ಚಳ ಮಾಡಿತು. ಇದರಿಂದ ವರ್ಷಕ್ಕೆ 3000 ಕೋಟಿ ರೂ. ಕೇಂದ್ರ ಸರ್ಕಾರಕ್ಕೆ ಸಿಗುತ್ತದೆ. ಅಂತರರಾಷ್ಟ್ರೀಯ ತೈಲ ಬೆಲೆ ಇಳಿಮುಖವಾಗಿ ನಿರ್ದಿಷ್ಟಗೊಳ್ಳುವವರೆಗೆ ಅಥವಾ ಏರುವ ಹಣ ಕಾಸು ವರ್ಷದವರೆಗೆ ರಸ್ತೆ ಅಭಿವೃದ್ಧಿ ಮೇಲು ತೆರಿಗೆಯನ್ನು ಲೀಟರಿಗೆ 50 ಪೈಸೆ ಕಡಿಮೆ ಮಾಡಿದರೆ, ಮುಂದಿನ 6 ತಿಂಗಳಲ್ಲಿ ಜನರ ಮೇಲೆ ಹೇರಲಾಗುವ 1500 ಕೋಟಿ ರೂ. ಹೊರೆ ಕಡಿಮೆಯಾಗುತ್ತದೆ.

2. ಕಸ್ಟಂಸ್ ತೆರಿಗೆ ಕಡಿತಗೊಳಿಸಿ: ಅಂತರರಾಷ್ಟ್ರೀಯ ತೈಲ ಬೆಲೆ ಹೆಚ್ಚಳದಿಂದ ಅದನ್ನು ಆಮದು ಮಾಡುವುದರ ಮೇಲೆ ಹಾಕುವ ಕಸ್ಟಂಸ್ ತೆರಿಗೆಯಲ್ಲಿ ಹೆಚ್ಚಳ ಉಂಟಾಗಿದೆ. ಇದರಿಂದ ಕೇಂದ್ರ ಸರಕಾರಕ್ಕೆ ಹೇರಳ ಆದಾಯ ಬಂದಿದೆ. ಅಂದರೆ ಫೆಬ್ರುವರಿ 2005ರಲ್ಲಿ ಬಜೆಟ್ ಮಂಡಿಸುವಾಗ ಕಚ್ಚಾ ತೈಲದ ಬೆಲೆ ಬ್ಯಾರೆಲ್‌ಗೆ 40 ಡಾಲರ್ ಇತ್ತು. ಈಗ ಅದು 60 ಡಾಲರ್‌ಗಿಂತ ಜಾಸ್ತಿಯಾಗಿದೆ. ಕಸ್ಟಂಸ್ ತೆರಿಗೆ ರೂಪದಲ್ಲಿ ಕೇಂದ್ರ ಸರಕಾರಕ್ಕೆ ಬರುವ ಆದಾಯ ಹೆಚ್ಚಾಗಿದೆ. ಶೇಕಡಾ 10ರ ಪ್ರಕಾರ ಕೇಂದ್ರ ಸರಕಾರಕ್ಕೆ ಫೆಬ್ರವರಿ ತಿಂಗಳಲ್ಲಿ ಕಚ್ಚಾ ತೈಲ ಬ್ಯಾರಲ್ 1ಕ್ಕೆ 4 ಡಾಲರ್ ತೆರಿಗೆ ಬಂದಿದ್ದರೆ, ಈಗ 6 ಡಾಲರ್‌ಗಳಿಗಿಂತಲೂ ಹೆಚ್ಚಾಗಿದೆ. ಈ ಮೂಲಕ ಕೇಂದ್ರ ಸರಕಾರಕ್ಕೆ ವರ್ಷಕ್ಕೆ 6,600 ಕೋಟಿ ರೂ. ಆದಾಯ ಹೆಚ್ಚಳವಾಗಿದೆ. ಆ ತೆರಿಗೆಯನ್ನು ಕಡಿಮೆ ಮಾಡಿದ್ದರೆ, ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚುತ್ತಿರಲಿಲ್ಲ.



3. ಅಬಕಾರಿ ಸುಂಕ : ಮೇಲೆ ಹೇಳಿದ ರೀತಿಯಲ್ಲೇ ಅಬಕಾರಿ ಸುಂಕದ ಮೂಲಕವೂ ಕೇಂದ್ರ ಸರಕಾರದ ಆದಾಯ ರೂ. 2000 ಕೋಟಿ ಹೆಚ್ಚುತ್ತಿದೆ. ಒಂದು ಅಂದಾಜಿನ ಪ್ರಕಾರ 2001-02ರಲ್ಲಿ ಒಟ್ಟು ಅಬಕಾರಿ ಸುಂಕದ ರೂಪದಲ್ಲಿ ಕೇಂದ್ರ ಸರಕಾರಕ್ಕೆ 28,013 ಕೋಟಿ ರೂ. ಆದಾಯ ಬಂದಿದ್ದರೆ, 2004-05ರಲ್ಲಿ 43,000 ಕೋಟಿ ರೂ.ಗಳಿಗಿಂತಲೂ ಹೆಚ್ಚು ತೆರಿಗೆ ರೂಪದಲ್ಲಿ ಬಂದಿದೆ.

4. ಬೆಲೆ ಸ್ಥಿರೀಕರಣ ನಿಧಿ ಕಾಯ್ದುಕೊಳ್ಳಿ : ಅಂತರರಾಷ್ಟ್ರೀಯ ಮಟ್ಟದಲ್ಲಿ ತೈಲ ಬೆಲೆ ಹೆಚ್ಚುವುದನ್ನು ಸರಿದೂಗಿಸಲು ಬೆಲೆ ಸ್ಥಿರೀಕರಣ ನಿಧಿಯನ್ನು ಸ್ಥಾಪಿಸಲು ಎಡಪಕ್ಷಗಳು ಬಹಳ ಹಿಂದೆಯೇ ಒತ್ತಾಯ ಮಾಡಿದ್ದವು.

ಇದು ಸಂಸತ್ತಿನ ಪೆಟ್ರೋಲಿಯಂ ಮತ್ತು ಅನಿಲ ವಿಭಾಗದ ಸ್ಥಾಯೀಯ ಸಮಿತಿಯ (Parliamentary Standing Committee) ಶಿಫಾರಸ್ಸುಗಳಿಗೆ ಅನುಗುಣವಾಗಿದೆ. ಇದಕ್ಕೆ ಬೇಕಾಗುವ ಆದಾಯದ ಮೂಲವನ್ನು ಕಂಡುಕೊಳ್ಳಲಾಗಿದೆ. 1974ರ ತೈಲ ಕೈಗಾರಿಕೆ ಅಭಿವೃದ್ಧಿ ಕಾನೂನಿನ ಪ್ರಕಾರ, ಸಾರ್ವಜನಿಕ ತೈಲ ಉದ್ದಿಮೆಗಳು ದೇಶದ ಒಳಗೆ ಉತ್ಪಾದಿಸಿದ ಕಚ್ಚಾ ತೈಲದ ಮೇಲೆ ಟನ್ನಿಗೆ 1800 ರೂಪಾಯಿ ಮೇಲು ತೆರಿಗೆಯನ್ನು ವಸೂಲಿ ಮಾಡಲಾಗುತ್ತದೆ. ಆ ಪ್ರಕಾರ ವರ್ಷಕ್ಕೆ 5400 ಕೋಟಿ ರೂ. ಸಂಗ್ರಹಿಸಲಾಗುತ್ತದೆ. ಅಂದರೆ ಮುಂದಿನ 6 ತಿಂಗಳಿಗೆ 2,700 ಕೋಟಿ ರೂ. ಕೇಂದ್ರ ಸರಕಾರಕ್ಕೆ ಸಿಗುತ್ತದೆ.

ಈ ಮೇಲು ತೆರಿಗೆ ಮೊದಲು ಟನ್ನಿಗೆ ರೂ. 900/- ಇದ್ದುದನ್ನು 2002ರಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ 1800ಕ್ಕೆ ಏರಿಸಿತು. ಈಗಾಗಲೇ ಐಕ್ಯರಂಗದಲ್ಲಿ ವರದಿಯಾಗಿರುವಂತೆ ಈ ತೆರಿಗೆ ಮೂಲಕ 1992ರಿಂದ ಇಲ್ಲಿಯವರೆಗೆ 51,000 ಕೋಟಿ ರೂ. ಸಂಗ್ರಹಿಸಲಾಗಿದೆ. 1974ರ ಕಾಯಿದೆ ಪ್ರಕಾರ ತೈಲ ಕ್ಷೇತ್ರವನ್ನು ಅಭಿವೃದ್ಧಿಗೊಳಿಸಲು ಇದನ್ನು ವಿನಿಯೋಗ ಮಾಡಬೇಕೆಂದು ನಿಬಂಧನೆ ಇದ್ದರೂ ಕೂಡಾ 1992ರಿಂದ ಇಲ್ಲಿಯವರೆಗೆ 1 ಪೈಸೆ ಕೂಡಾ ಸಾರ್ವಜನಿಕ ಉದ್ದಿಮೆಯ ತೈಲ ಕಂಪೆನಿಗಳಿಗೆ ನೀಡಿಲ್ಲ. ಕಾಂಗ್ರೆಸ್, ಬಿಜೆಪಿ ಮತ್ತಿತರ ಪಕ್ಷಗಳ ನೇತೃತ್ವದಲ್ಲಿ ಅಧಿಕಾರಕ್ಕೆ ಬಂದ ಕೇಂದ್ರ ಸರಕಾರ ತನ್ನ ಬಜೆಟ್ಟಿನ ಖರ್ಚುಗಳಿಗೆ ಈ ಹಣವನ್ನು ಬಳಸಿಕೊಂಡಿದ್ದವು.

ಈ ಹಣವನ್ನು ಬೆಲೆ ಸ್ಥಿರೀಕರಣ ನಿಧಿಗೆ ವರ್ಗಾಯಿಸಿದಲ್ಲಿ, ಆ ಮೂಲಕ ಅಂತರರಾಷ್ಟ್ರೀಯ ಬೆಲೆ ಹೆಚ್ಚಳವಾದಾಗ ಜನರ ಮೇಲೆ ಹೊರೆ ಹಾಕುವ ಅವಶ್ಯಕತೆ ಇರುವುದಿಲ್ಲ.

5. ರಫ್ತು ವ್ಯಾಪಾರಕ್ಕೆ ನೀಡುತ್ತಿರುವ ಸಹಾಯಧನ ರದ್ದು ಮಾಡಿ : ಕೇಂದ್ರ ಸರಕಾರವು ಪೆಟ್ರೋಲಿಯಂ ಉತ್ಪನ್ನಗಳ ರಫ್ತುದಾರರಿಗೆಂದು ವರ್ಷಕ್ಕೆ 1200 ಕೋಟಿ ರೂ. ನಿಂದ 2000 ಕೋಟಿ ರೂ. ವರೆಗೆ ಸಹಾಯಧನ ನೀಡುತ್ತಿದೆ. ಇದನ್ನು ಹೆಚ್ಚಾಗಿ ಬಳಸಿಕೊಳ್ಳುತ್ತಿರುವವರು ಖಾಸಗಿ ಕಂಪೆನಿಗಳಾದ ರಿಲೈಯನ್ಸ್ ಮತ್ತು ಎಸ್ಸಾರ್, ಬೆಲೆ ಹೆಚ್ಚುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ಈ ಸಹಾಯಧನವನ್ನು ನಿಲ್ಲಿಸಿ ಬೆಲೆ ಸ್ಥಿರೀಕರಣ ನಿಧಿಗೆ ವರ್ಗಾಯಿಸಿದಲ್ಲಿ ಜನರ ಮೇಲೆ ಹೊರೆ ಹಾಕುವ ಅವಶ್ಯಕತೆ ಇರುವುದಿಲ್ಲ.

ಇತ್ತೀಚೆಗೆ ಚೀನಾ ದೇಶದಲ್ಲಿ ಪೆಟ್ರೋಲ್ ಮತ್ತು ನಾಫ್ತಾ ರಫ್ತು ಮಾಡುವ ಶುದ್ಧೀಕರಣ ಕೇಂದ್ರಗಳಿಗೆ ನೀಡುತ್ತಿದ್ದ ಸಹಾಯಧನವನ್ನು ನಿಲ್ಲಿಸಲಾಗಿದೆ.

6. ಖಾಸಗಿ ಕಂಪನಿಗಳಿಗೆ ನೀಡುತ್ತಿರುವ ಮಾರಾಟ ತೆರಿಗೆ ರಿಯಾಯಿತಿ ನಿಲ್ಲಿ: ಖಾಸಗಿ ಕಂಪೆನಿಯಾದ ರಿಲೈಯನ್ಸ್‌ಗೆ ತೈಲ ಶುದ್ಧೀಕರಣಕ್ಕೆ ನಿಜವಾಗಿ ತಗಲುವ ವೆಚ್ಚ ಲೀಟರಿಗೆ 30 ಪೈಸೆಯಿಂದ 40 ಪೈಸೆ. ಆದರೆ ಈ ಕಂಪೆನಿಗೆ 2 ರಿಂದ 3 ರೂಪಾಯಿ ಲಾಭ ಸಿಗುತ್ತಿದೆ. ಆದರೂ ಈ ಕಂಪೆನಿಗೆ ಮಾರಾಟ ತೆರಿಗೆಯಲ್ಲಿ ರಿಯಾಯತಿಯನ್ನು ನೀಡಲಾಗಿದೆ. ಈ ಕಂಪೆನಿಯು 2003-04ರಲ್ಲಿ 5,160 ಕೋಟಿ ರೂ. ಲಾಭಗಳಿಸಿದ್ದರೆ, 2004-05ರಲ್ಲಿ 7,572 ಕೋಟಿ ರೂ. ಲಾಭ ಗಳಿಸಿದೆ. ಆದ್ದರಿಂದ ಈ ಕಂಪೆನಿಗೆ ಮಾರಾಟ ತೆರಿಗೆಯಲ್ಲಿ ರಿಯಾಯಿತಿ ನೀಡುವ ಯಾವುದೇ ಅವಶ್ಯಕತೆ ಇಲ್ಲ. ಜನರ ಮೇಲೆ ದರ ಹೆಚ್ಚಳದ ಹೊರೆಯನ್ನು ಹೇರುವ ಸರಕಾರ 1 ಲಕ್ಷ ಕೋಟಿ ರೂ. ಆಸ್ತಿ ಹೊಂದಿರುವ ರಿಲೈಯನ್ಸ್ ಸಮೂಹಕ್ಕೆ ರಿಯಾಯಿತಿ ನೀಡುತ್ತಿದೆ.

7. ರಿಲೈಯನ್ಸ್ ಕಂಪೆನಿಯಿಂದ 10,500 ಕೋಟಿ ರೂ. ತೆರಿಗೆ ಬಾಕಿ ವಸೂಲಿ ಮಾಡಿ : ಗುಜರಾತ್ ರಾಜ್ಯದ ಜಾಮ್ ನಗರದಲ್ಲಿ ರಿಲೈಯನ್ಸ್ ಇಂಡಸ್ಟ್ರೀಸ್‌ನ ತೈಲ ಶುದ್ಧೀಕರಣ ಕೇಂದ್ರವಿದೆ. ಇಲ್ಲಿಂದ ಪೆಟ್ರೋಲಿಯಂ ಉತ್ಪನ್ನಗಳನ್ನು ರಫ್ತು ಮಾಡಲಾಗುತ್ತಿದೆ. ಇತ್ತೀಚೆಗೆ ಕೇಂದ್ರ ಅಬಕಾರಿ ಇಲಾಖೆಯವರು 10,500 ಕೋಟಿ ರೂ. ಅಬಕಾರಿ ಸುಂಕ ಬಾಕಿಯನ್ನು ನೀಡಬೇಕು ಎಂದು ನೋಟೀಸ್ ಜ್ಯಾರಿ ಮಾಡಿದ್ದಾರೆ. ಪತ್ರಿಕೆಗಳಲ್ಲಿ ಈ ಕುರಿತು ವರದಿಯಾಗಿದೆ. ಇದನ್ನು ವಸೂಲಿ ಮಾಡಲು ಸೂಕ್ತ ಕ್ರಮ ಕೈಗೊಳ್ಳಬೇಕು.

ಮೇಲೆ ಹೇಳಿದ 7 ಅಂಶಗಳ ಬಗ್ಗೆ ಕೇಂದ್ರ ಸರಕಾರ ಸೂಕ್ತ ಕ್ರಮ ಕೈಗೊಂಡರೆ ಒಟ್ಟು 21,000 ಕೋಟಿ ರೂ.ನಷ್ಟು ಆದಾಯ ಕೇಂದ್ರ ಸರಕಾರಕ್ಕೆ ಬರುತ್ತದೆ. ಅಥವಾ ಅಷ್ಟರ ಮಟ್ಟಿಗೆ ಜನರ ಮೇಲಿನ ಹೊರೆಯನ್ನು ಕಡಿಮೆ ಮಾಡಬಹುದಾಗಿದೆ. ಒಟ್ಟಾರೆಯಾಗಿ ಬೆಲೆ ಸ್ಥಿರೀಕರಣ ನಿಧಿಯನ್ನು ಬಲಪಡಿಸಿದರೆ, ಅಂತರರಾಷ್ಟ್ರೀಯ ಮಟ್ಟದಲ್ಲಿ ಎಷ್ಟು ಬೆಲೆ ಹೆಚ್ಚಿದರೂ, ತೈಲ ಉದ್ದಿಮೆಗಳಿಗೆ ನಷ್ಟವಾಗದೆ, ಜನರ ಮೇಲೆ ಹೊರೆ ಬೀಳದಂತೆ ನೋಡಿಕೊಳ್ಳಬಹುದು. ಆದರೆ ಕೇಂದ್ರ ಸರಕಾರಕ್ಕೆ ಒಂದು ಪ್ರಮುಖ ಕೊರತೆ ಇದೆ. ಅದು ರಾಜಕೀಯ ಇಚ್ಛಾಶಕ್ತಿ! ಶ್ರೀಮಂತ ಖಾಸಗಿ ಮಾಲೀಕರ ಪರವಾಗಿರುವ ಕಾಂಗ್ರೆಸ್ ಮತ್ತು ಬಿಜೆಪಿ ನೇತೃತ್ವದ ಸರಕಾರಗಳಿಗೆ ಈ ನಿರ್ಧಾರ ಸುಲಭವಲ್ಲ. ಜನರ ಐಕ್ಯ ಹೋರಾಟ ಮಾತ್ರವೇ ಜನವಿರೋಧಿ ನಿರ್ಧಾರಗಳನ್ನು ಬದಲಿಸಲು ಸಾಧ್ಯ.

ರಾಜ್ಯ ಸರಕಾರ ತೆರಿಗೆ ಕಡಿತಗೊಳಿಸಲಿ : ಈ ಸಂದರ್ಭದಲ್ಲಿ ಇನ್ನೊಂದು ಅಂಶವನ್ನು ಹೇಳಬೇಕಾಗುತ್ತದೆ. ಪ್ರತಿ ಬಾರಿ ಪೆಟ್ರೋಲ್ ಬೆಲೆ ಹೆಚ್ಚಿದಂತೆಲ್ಲ ಕರ್ನಾಟಕದಲ್ಲಿ ಆ ಬೆಲೆ ಇನ್ನಷ್ಟು ಜಾಸ್ತಿ ಆಗುತ್ತದೆ. ಇತ್ತೀಚಿನ ಬೆಲೆ ಹೆಚ್ಚಳದ ನಂತರ ಬೆಂಗಳೂರಿನಲ್ಲಿ ಪೆಟ್ರೋಲ್ ಬೆಲೆ ಲೀಟರಿಗೆ ರೂ. 50.66. ಆದರೆ, ದಿಲ್ಲಿಯಲ್ಲಿ ರೂ. 43.49, ದೆಹಲಿಯಲ್ಲಿ 3 ರೂ. ಮಾತ್ರ ಬೆಲೆ ಹೆಚ್ಚಳವಾಗಿದ್ದರೆ ಕರ್ನಾಟಕದಲ್ಲಿ ಇನ್ನೂ 36 ಪೈಸೆ ಜಾಸ್ತಿ. ಏಕೆಂದರೆ ಮಾರಾಟ ತೆರಿಗೆ ಹೆಚ್ಚು. ದಕ್ಷಿಣ ಭಾರತ ರಾಜ್ಯಗಳಲ್ಲಿ ತಿರುವನಂತಪುರದಲ್ಲಿ ಪೆಟ್ರೋಲ್ ಲೀಟರಿಗೆ ರೂ. 46.83 ಇದ್ದರೆ (ಹೆಚ್ಚಳದ ನಂತರ)ಚೆನ್ನೈನಲ್ಲಿ 47.49, ಹೈದರಾಬಾದ್ 49.19 ಮತ್ತು ಬೆಂಗಳೂರಿನಲ್ಲಿ ರೂ. 50.66 ಇದೆ. ಈ ದರ ವ್ಯತ್ಯಾಸಕ್ಕೆ ಸಾಗಾಣಿಕೆ ದರದಲ್ಲಿರುವ ತಾರತಮ್ಯ ಒಂದು ಕಾರಣವಾಗಿದ್ದರೂ ರಾಜ್ಯಗಳಲ್ಲಿ ಮಾರಾಟ ತೆರಿಗೆಯಲ್ಲಿನ ವ್ಯತ್ಯಾಸ ಪ್ರಮುಖ ಕಾರಣ. ಆದ್ದರಿಂದ ಪೆಟ್ರೋಲಿಯಂ ಮೇಲಿನ ಮಾರಾಟ ತೆರಿಗೆಯನ್ನು ಕಡಿತಗೊಳಿಸಬೇಕೆಂದು ರಾಜ್ಯ ಸರಕಾರವನ್ನು ಒತ್ತಾಯಿಸಬೇಕಾಗಿದೆ.

ಶಿಕ್ಷಣದ ಹಕ್ಕಿಗಾಗಿ ಆರ್ಭಟಿಸಿದ ವಿದ್ಯಾರ್ಥಿಗಳು ಬೆವರಿಳಿಸಿಕೊಂಡ ಸರ್ಕಾರ

ಕೇಂದ್ರ-ರಾಜ್ಯ ಸರ್ಕಾರಗಳ ಬಡ ವಿದ್ಯಾರ್ಥಿ ವಿರೋಧಿ ನೀತಿಗಳಿಂದ ಆಕ್ರೋಶಗೊಂಡಿರುವ ವಿದ್ಯಾರ್ಥಿ ಸಮುದಾಯ ಸರ್ಕಾರಗಳಿಗೆ ಬಿಸಿ ಮುಟ್ಟಿಸುತ್ತಿದೆ. ಕಳೆದ ಆಗಸ್ಟ್ 25 ರಂದು ಎಸ್.ಎಫ್.ಐ. ನೇತೃತ್ವದಲ್ಲಿ ರಾಜ್ಯಾದ್ಯಂತ ಶಾಲಾ-ಕಾಲೇಜ್ ಬಂದ್ ಪ್ರತಿಭಟನೆ ಮೂಲಕ ಸರ್ಕಾರಕ್ಕೆ ಎಚ್ಚರಿಸಿದ ಬೆನ್ನ ಹಿಂದೆಯೇ ಮತ್ತೊಮ್ಮೆ ಸೆ.14 ರಂದು ವಿದ್ಯಾರ್ಥಿಗಳು ಎಸ್.ಎಫ್.ಐ. ನೇತೃತ್ವದಲ್ಲಿ ಸರ್ಕಾರಕ್ಕೆ ಬೆವರಿಳಿಸಿದ್ದಾರೆ.

ಆರ್ಥಿಕ - ಸಾಮಾಜಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ತಮ್ಮ ಕುಟುಂಬ ನಿರ್ವಹಣೆಗಾಗಿ, ತುರ್ತು ಉದ್ಯೋಗಕ್ಕಾಗಿ, ವೃತ್ತಿಪರ ಅಥವಾ ಉನ್ನತ ಶಿಕ್ಷಣಕ್ಕೆ ಹೋಗಲಾಗದ ವೃತ್ತಿ ತರಬೇತಿ ಶಿಕ್ಷಣದ (ಜೆ.ಓ.ಸಿ.) ಕೋರ್ಸುಗಳಿಗೆ ಅವಲಂಬಿತರಾಗಿದ್ದ ಸಾವಿರಾರು ವಿದ್ಯಾರ್ಥಿಗಳನ್ನು ಬೀದಿಪಾಲು ಮಾಡಲಾಗಿದೆ. ಜಿಲ್ಲೆಗಳಲ್ಲಿನ ಆರ್ಥಿಕ ಸಂಪನ್ಮೂಲಗಳನ್ನು ಆಧರಿಸಿ ಉದ್ಯೋಗ ದೊರೆಯುವಂತಹ ಸಾಂಪ್ರದಾಯಿಕ ಕೋರ್ಸುಗಳನ್ನು ರದ್ದುಪಡಿಸಲು ತೀರ್ಮಾನಿಸಲಾಗಿದೆ. 3,6,8, ತಿಂಗಳಿನ ತಾತ್ಕಾಲಿಕ ಅಭದ್ರ ಕೋರ್ಸುಗಳನ್ನು ಆರಂಭಿಸಲು ಹೊರಟು, ಪಿ.ಯು.ಸಿ.ಗೆ ತತ್ಸಮಾನವಾಗಿ ಇದ್ದ ವೃತ್ತಿ ತರಬೇತಿ ಶಿಕ್ಷಣ (ಜೆ.ಓ.ಸಿ.) ಕೋರ್ಸುಗಳನ್ನು ರದ್ದುಪಡಿಸಿ ಈ ಕೋರ್ಸುಗಳಿಗೆ ಸೇರುವ ವಿದ್ಯಾರ್ಥಿಗಳನ್ನು ಮುಂದಿನ ಉನ್ನತ ಶಿಕ್ಷಣಕ್ಕೆ ಹೋಗಲಾಗದಂತೆ ಮಾಡಲಾಗಿದೆ. ಈಗಿರುವ ಕೋರ್ಸುಗಳು ಕನಿಷ್ಠ ಮೂಲಭೂತ ಸೌಕರ್ಯ ಇಲ್ಲದೆ ಅವಸಾನದ ಅಂಚಿನಲ್ಲಿವೆ. ಕಳೆದ 15-20 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಉಪನ್ಯಾಸಕರಿಗೆ ಸಮರ್ಪಕವಾಗಿ ಸಂಬಳ ನೀಡುತ್ತಿಲ್ಲ. ಖಾಯಂ ಮಾಡಿಕೊಂಡಿಲ್ಲ, ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಲ್ಲ. ಇಂತಹ ಗಂಭೀರ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಒತ್ತಾಯಿಸಿ ಎಸ್.ಎಫ್.ಐ. ನೇತೃತ್ವದಲ್ಲಿ ಸೆ.14 ರಂದು ಬೃಹತ್ ರಾಜ್ಯ ಮಟ್ಟದ ರ್‍ಯಾಲಿ - ಪ್ರತಿಭಟನೆ ರಸ್ತೆ ತಡೆ ಚಳುವಳಿಯನ್ನು ಹಮ್ಮಿಕೊಳ್ಳಲಾಗಿತ್ತು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ ಸಾವಿರಾರು ಗ್ರಾಮೀಣ ವಿದ್ಯಾರ್ಥಿಗಳು, ಬೆಂಗಳೂರು ನಗರದ ಚಿಕ್ಕಲಾಲ್‌ಬಾಗ್‌ನಿಂದ ಪ್ರತಿಭಟನಾ ರ್‍ಯಾಲಿ ನಡೆಸಿ ತಮ್ಮ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿದರು. ಸರ್ಕಾರದ ಬಡ ವಿದ್ಯಾರ್ಥಿ- ವಿರೋಧಿ ಧೋರಣೆಯನ್ನು ಖಂಡಿಸಿದರು. ಕರ್ನಾಟಕ ರಾಜ್ಯದ ಆರ್ಥಿಕ - ಸಾಮಾಜಿಕ ಪರಿಸ್ಥಿತಿಯನ್ನು ಆಧರಿಸಿ ರಾಜ್ಯದ ಅಭಿವೃದ್ಧಿಗೆ ಪೂರಕ, ಉದ್ಯೋಗ ದೊರೆಯುವಂತಹ ಕೋರ್ಸುಗಳನ್ನು ರದ್ದುಪಡಿಸಲು ಹೊರಟಿರುವ ಶಿಕ್ಷಣ ಸಚಿವರ ಉದ್ಧಟತನ ವಿರೋಧಿಸಿದರು.

ನಗರ ಕೇಂದ್ರದ ಪ್ರಮುಖ ರಸ್ತೆಗಳ ಮೂಲಕ ಕೆ.ಜಿ.ರಸ್ತೆ ಬಂದು ರಸ್ತೆ ತಡೆ ನಡೆಸಿ ರಸ್ತೆಯಲ್ಲಿ ಬಹಿರಂಗ ಸಭೆಯನ್ನಾಗಿ ಪರಿವರ್ತಿಸಿದರು. ಮುಖ್ಯಮಂತ್ರಿ ಸ್ಥಳಕ್ಕೆ ಬರಬೇಕು, ಶಿಕ್ಷಣ ಸಚಿವರು ಬರಬೇಕೆಂದು ಪ್ರತಿಭಟನಾಕಾರರು ಪಟ್ಟು ಹಿಡಿದರು. ವೃತ್ತಿ ತರಬೇತಿ (ಜೆ.ಓ.ಸಿ.) ಶಿಕ್ಷಣದ ನಿರ್ದೇಶಕರು ಪ್ರತಿಭಟನೆಯ ಸ್ಥಳಕ್ಕೆ ಆಗಮಿಸಬೇಕೆಂದು, ಅಲ್ಲಿಯವರೆಗೆ ಈ ಸ್ಥಳದಿಂದ ಕದಲುವುದಿಲ್ಲವೆಂದು ಸರ್ಕಾರಕ್ಕೆ ಎಚ್ಚರಿಸಿದಾಗ ಮುಖ್ಯಮಂತ್ರಿ ಮತ್ತು ಶಿಕ್ಷಣ ಸಚಿವರು ನಗರದಲ್ಲಿ ಇಲ್ಲದ ಕಾರಣ ಸರ್ಕಾರ ಪ್ರತಿಭಟನಾ ಸ್ಥಳಕ್ಕೆ ಮುಖ್ಯಮಂತ್ರಿಯ ಸೂಚನೆ ಮೇರೆಗೆ ಆಗಮಿಸಿದ ಕ್ರೀಡಾ ಮತ್ತು ಯುವಜನ ಸಚಿವರಾದ ಜಬ್ಬರ್‌ಖಾನ್ ಹೊನ್ನಳ್ಳಿಯವರು ಎಸ್ಸೆಫ್ಐ ನಾಯಕರ ಪ್ರಶ್ನೆಗಳಿಗೆ ಉತ್ತರಿಸಲಾಗದೆ ತತ್ತರಿಸಿದರು. ವಿದ್ಯಾರ್ಥಿಗಳು ಹಲವಾರು ಬಾರಿ ಪ್ರತಿಭಟನೆ-ಮನವಿ ಪತ್ರ ಕೊಟ್ಟು ಸರ್ಕಾರದ ಗಮನಕ್ಕೆ ತಂದಿದ್ದರೂ ಏನು ಪ್ರಯೋಜನವಿಲ್ಲ ಎಂದು ಆಕ್ರೋಶಗೊಂಡರು. ವಿದ್ಯಾರ್ಥಿಗಳ ದಿಟ್ಟ ನಿಲುವಿಗೆ - ಹೋರಾಟಕ್ಕೆ ಮಣಿದ ಸಚಿವರು ಜೆ.ಓ.ಸಿ. ನಿರ್ದೇಶಕರನ್ನು ಸ್ಥಳಕ್ಕೆ ಬರಮಾಡಲು ಪ್ರಯತ್ನಿಸಿದರು.



ವಿದ್ಯಾರ್ಥಿಗಳ ಪ್ರತಿಭಟನೆಗೆ ಹೆದರಿದ ನಿರ್ದೇಶಕರು ಪ್ರತಿಭಟನಾಸ್ಥಳಕ್ಕೆ ಬರಲಿಲ್ಲ. ಕೊನೆಗೂ ವಿದ್ಯಾರ್ಥಿ ಮುಖಂಡರ ಬೇಡಿಕೆಗೆ ಮಣಿದ ಸರ್ಕಾರ ಬೇಡಿಕೆಗಳನ್ನು ಈಡೇರಿಸುತ್ತೇವೆ, ಮುಖ್ಯಮಂತ್ರಿಯವರ ಜೊತೆ ಎಲ್ಲಾ ಅಧಿಕಾರಿಗಳನ್ನೊಳಗೊಂಡಂತೆ ಸಭೆ ಕರೆಯುತ್ತೇವೆಂದು ಪ್ರತಿಭಟನಾಕಾರರನ್ನು ಮನವಿ ಮಾಡಿಕೊಂಡ ಮೇರೆಗೆ ರಸ್ತೆ ತಡೆಯನ್ನು ಹಿಂತೆಗೆದುಕೊಳ್ಳಲಾಯಿತು. ಮಾರನೇ ದಿನವೂ ಮುಖ್ಯಮಂತ್ರಿ ಮನೆ ಮುಂದೆ ಧರಣಿ ನಡೆಸಲಾಗುತ್ತದೆ, ಬೇಡಿಕೆ ಈಡೇರಿಸುವ ತನಕ ಪ್ರತಿಭಟನೆ ಮುಂದುವರೆಯುತ್ತದೆಂದು ಸರ್ಕಾರಕ್ಕೆ ಎಚ್ಚರಿಸಲಾಯಿತು.

ಸರ್ಕಾರಿ ಕಾಲೇಜಿಗಾಗಿ ಒತ್ತಾಯ

ಹಾವೇರಿ ಜಿಲ್ಲೆಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜ್ ಆಗಬೇಕೆಂದು ಹಾಗೂ ಜೆ.ಓ.ಸಿ. ಬೇಡಿಕೆಗಳೂ ಈಡೇರಿಸಬೇಕೆಂದು ಒತ್ತಾಯಿಸಿ ಮುಖ್ಯಮಂತ್ರಿ ಮನೆ ಮುಂದೆ ಸೆಪ್ಟೆಂಬರ್ 15 ರಂದು ಪ್ರತಿಭಟನೆಯನ್ನು ಎಸ್.ಎಫ್.ಐ. ನೇತೃತ್ವದಲ್ಲಿ ಮುಂದುವರೆಸಲಾಯಿತು. ಎಸ್.ಎಫ್.ಐ. ನಿಯೋಗವನ್ನು ಭೇಟಿ ಮಾಡಿದ ಮುಖ್ಯಮಂತ್ರಿಗಳು ಎಲ್ಲಾ ಶೈಕ್ಷಣಿಕ ಸಮಸ್ಯೆಗಳನ್ನು ಬಗೆಹರಿಸಲು ಎಲ್ಲಾ ಇಲಾಖೆ ಅಧಿಕಾರಿಗಳನ್ನು ಒಳಗೊಂಡಂತೆ ಸಭೆ ಮಾಡಿ ಬೇಡಿಕೆಗಳನ್ನು ಈಡೇರಿಸುತ್ತೇವೆಂದು ವಿದ್ಯಾರ್ಥಿ ನಾಯಕರಿಗೆ ಭರವಸೆ ನೀಡಿದರು. ಸೆ.21 ರಂದು ಮುಖ್ಯಮಂತ್ರಿಗಳು ಸಭೆ ಕರೆದಿದ್ದಾರೆ.

ಎಸ್.ಎಫ್.ಐ. ವೈಜ್ಞಾನಿಕ ದೃಷ್ಟಿಕೋನ-ಸರ್ಕಾರ ಅವೈಜ್ಞಾನಿಕ ನೀತಿ.

ನಗರ ಹಾಗೂ ಗ್ರಾಮೀಣ ಸಾಮಾನ್ಯ ಜನತೆಯ ಬದುಕಿನ ಅಭಿವೃದ್ಧಿಗೆ ಪೂರಕ ಉದ್ಯೋಗ ಸೃಷ್ಟಿಸುವ ಕೋರ್ಸುಗಳನ್ನು ಆರಂಭಿಸುವ ಬದಲಿಗೆ ಬಂಡವಾಳಶಾಹಿ ಬೆಳವಣಿಗೆಗೆ ಪೂರಕವಾಗಿರುವಂತಹ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರಲಾಗುತ್ತಿದೆ. ಇದು ಡಬ್ಲ್ಯು.ಟಿ.ಓ., ಐ.ಎಂ.ಎಫ್., ವಿಶ್ವಬ್ಯಾಂಕ್ ಷರತ್ತುಗಳಿಗೆ ಮಣಿದು ಶಿಕ್ಷಣ ವ್ಯಾಪಾರೀಕರಣ ಖಾಸಗೀಕರಣ ಪರವಾದ ನೀತಿಗಳ ಜಾರಿಗೆ ತರುವುದರ ಪರಿಣಾಮ ಹಾಗೂ ಶಿಕ್ಷಣದ ಬಜೆಟ್ ಕಡಿತ ಮಾಡುತ್ತಿರುವುದರ ಪರಿಣಾಮ.

ಕನಿಷ್ಠ ಅಗತ್ಯ ಶಿಕ್ಷಣ ಪಡೆದ ನಂತರ ವಿದ್ಯಾರ್ಥಿಗಳು ಕೇವಲ ಪದವೀಧರ ನಿರುದ್ಯೋಗಿಗಳಾಗುವ ಸಲುವಾಗಿ ಓದದೆ ಜೀವನವನ್ನು ರೂಪಿಸಿಕೊಳ್ಳಲು ಸಾಧ್ಯವಾಗುವಂತೆ, ರಾಷ್ಟ್ರದ ಉತ್ಪಾದನೆಗೆ, ಸಾಮಾಜಿಕ ಬೆಳವಣಿಗೆಗೆ ಕೊಡುಗೆ ನೀಡುವಂತಹ ಸ್ವಾವಲಂಬಿ ಉದ್ಯೋಗಿಗಳಾಗಬೇಕಾದರೆ, ಎಲ್ಲರಿಗೂ ಶಿಕ್ಷಣ-ಉದ್ಯೋಗ ದೊರೆಯುವಂತಾಗ ಬೇಕಾದರೆ ವೃತ್ತಿ ತರಬೇತಿ ಕೋರ್ಸುಗಳನ್ನು ಹೆಚ್ಚು ಹೆಚ್ಚು ಆರಂಭಿಸಬೇಕು. ಶಿಕ್ಷಣಕ್ಕೆ ಬಜೆಟ್‌ನಲ್ಲಿ ಆದ್ಯತೆ ನೀಡಬೇಕು. ಸಾಮಾಜಿಕವಾಗಿ - ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಶಿಕ್ಷಣ ಶುಲ್ಕ ಕೈಗೆಟುಕುವಂತಿರಬೇಕು. ಅಗತ್ಯವಾದಷ್ಟು ಎಲ್ಲಾ ರೀತಿಯ ಕೋರ್ಸುಗಳ ಸರ್ಕಾರಿ ಶಾಲಾ ಕಾಲೇಜುಗಳನ್ನು ಆರಂಭಿಸಬೇಕು ಎಂದು ಎಸ್ಸೆಫ್ಐ ಒತ್ತಾಯಿಸಿದೆ. ಆದರೆ ರಾಜ್ಯ ಸರ್ಕಾರ ಬಡ ವಿದ್ಯಾರ್ಥಿಗಳ ವಿರೋಧಿ ನೀತಿಗಳನ್ನು ಜಾರಿಗೆ ತರುತ್ತಿದೆ. ಹೀಗೆ ತರಬೇತಿ ಕೋರ್ಸುಗಳ ಸಮಸ್ಯೆಗಳು ಗಂಭೀರವಾಗಿ ಬಡ ಗ್ರಾಮೀಣ ವಿದ್ಯಾರ್ಥಿಗಳು ಬೀದಿ ಪಾಲಾಗುತ್ತಿದ್ದಾರೆ. ಇಂಥ ವಿದ್ಯಾರ್ಥಿ-ವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸಿ ವಿದ್ಯಾರ್ಥಿ ಪರ ನೀತಿಗಳನ್ನು ಜಾರಿಗೆ ತರಲು ಎಸ್ಸೆಫ್ಐ ಕಂಕಣಬದ್ಧವಾಗಿ ಹೋರಾಟ ರೂಪಿಸಲಿದೆ. ರಾಜ್ಯಾದ್ಯಂತ ವಿದ್ಯಾರ್ಥಿ ಸಮುದಾಯ ಒಂದಾಗಿ ಜನರ ಅಭಿವೃದ್ಧಿಗಾಗಿ - ದೇಶದ ಅಭಿವೃದ್ಧಿಗಾಗಿ ಶಿಕ್ಷಣ ಜಾರಿಗೆ ತರಲು ಶ್ರಮಿಸುತ್ತದೆ. ಮುಂದಿನ ದಿನಗಳಲ್ಲಿ ಶೈಕ್ಷಣಿಕ ಸಮಸ್ಯೆಗಳನ್ನು ಬಗೆಹರಿಸದಿದ್ದರೆ ರಾಜ್ಯಾದ್ಯಂತ ದೊಡ್ಡ ಮಟ್ಟದಲ್ಲಿ ಉಗ್ರ ಚಳುವಳಿಯನ್ನು ರೂಪಿಸಲು ಎಸ್ಸೆಫ್ಐ ತೀರ್ಮಾನಿಸಿದೆ.

ಸೆಪ್ಟೆಂಬರ್ 29 ರ ಸಾರ್ವತ್ರಿಕ ಮುಷ್ಕರ....

ಪುಟ 6 ರಿಂದ

ಬೇಡಿಕೆಯೂ ಇದೆ. ಅಂಗನವಾಡಿ ಕಾರ್ಮಿಕರಿಗೆ ಪೆನ್ಷನ್ ನಮ್ಮ ಬೇಡಿಕೆಗಳಲ್ಲಿ ಸೇರಿದೆ. ಇವರು ಎಲ್ಲರೂ ಮಹಿಳೆಯರೇ. ಪಂಚಾಯತ್ ನೌಕರರಲ್ಲೂ ಮಹಿಳೆಯರದ್ದು ದೊಡ್ಡ ಸಂಖ್ಯೆ - ಅವರಿಗೂ ಇದೇ ಸೌಲಭ್ಯ ಬೇಕೆಂದು ಕೇಳುತ್ತಿದ್ದೇವೆ.

ಬೀಡಿ ಕಾರ್ಮಿಕರು, ಗಾರ್ಮೆಂಟ್ ಕಾರ್ಮಿಕರು ಕೂಡಾ ಸುಮಾರಾಗಿ ಎಲ್ಲರೂ ಮಹಿಳೆಯರೇ. ಅದೇ ರೀತಿ ತೋಟ ಕಾರ್ಮಿಕರಲ್ಲೂ ಬಹಳಷ್ಟು ಸಂಖ್ಯೆಯಲ್ಲಿ ಮಹಿಳೆಯರಿದ್ದಾರೆ. ಇವರೆಲ್ಲರಿಗೂ ಪೆನ್ಷನ್ ಸೌಲಭ್ಯದ ಬೇಡಿಕೆ ಇಡಲಾಗಿದೆ.

ಕಾರ್ಮಿಕ ಕಾನೂನುಗಳ ಜಾರಿಯಾಗಬೇಕೆಂಬ ಬೇಡಿಕೆ ಮಹಿಳಾ ಕಾರ್ಮಿಕರಿಗೆ ನೆರವಾಗುತ್ತದೆ. ಈ ಬೇಡಿಕೆಗಳಲ್ಲಿ ಮಹಿಳೆಯರಿಗೆ ನಿರ್ದಿಷ್ಟವಾಗಿ ಸಂಬಂಧಿಸಿದ ಕಾನೂನು ಅಂಶಗಳೂ ಸೇರಿವೆ. ಹೆರಿಗೆ ಸೌಲಭ್ಯ ಕಾನೂನು, ಎಲ್ಲಾ ಕಾರ್ಖಾನೆಗಳಲ್ಲಿ ಮತ್ತು ಕಚೇರಿಗಳಲ್ಲಿ ಶಿಶುಪಾಲನಾ ಸೌಲಭ್ಯ 30 ಅಥವಾ ಹೆಚ್ಚು ಮಹಿಳೆಯರು ಕೆಲಸ ಮಾಡುತ್ತಿರುವಲ್ಲಿ ಇರಲೇಬೇಕು. ಅಸಂಘಟಿತ ವಲಯದಲ್ಲಿ ಕೆಲಸ ಮಾಡುವ ಬಹುಪಾಲು ಮಹಿಳೆಯರು, ಪುರುಷರು ಕೂಡಾ ಭವಿಷ್ಯ ನಿಧಿ, ವೈದ್ಯಕೀಯ ಮತ್ತು ಇತರ ಸೌಲಭ್ಯಗಳಂತಹ ಕಾನೂನುಬದ್ಧ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಏಕೆಂದರೆ ಕಾರ್ಮಿಕ ಕಾನೂನುಗಳು ಅಲ್ಲಿ ಜಾರಿಯಾಗುವುದೇ ಇಲ್ಲ. **ಈ ಕಾರ್ಮಿಕ ಕಾನೂನುಗಳ ಜಾರಿಯಾಗಬೇಕು ಎಂದು ದೊಡ್ಡ ಬೊಬ್ಬೆ ಎಬ್ಬಿಸಬೇಕಾದ ಸಮಯವೀಗ ಬಂದಿದೆ.** ಈ ಕಾರ್ಯಾಚರಣೆಯ ಬೇಡಿಕೆ ಈ ಅಂಶದ ಮೇಲೆ ನಿರ್ದಿಷ್ಟವಾಗಿ ಗಮನ ಹರಿಸಿದೆ.

ಭೂಸುಧಾರಣೆಗಳಲ್ಲದೆ ರೈತರ **ಬೇಡಿಕೆಯಾದ** ನೀರಾವರಿ ಮತ್ತು ಗ್ರಾಮೀಣ ಬೆಳವಣಿಗೆಗೆ ಸೂಕ್ತ ಹಣ ಒದಗಿಸಬೇಕೆಂಬ ಬೇಡಿಕೆಯೂ ಇದೆ.

ಶಿಕ್ಷಣ ವಲಯದಲ್ಲಿ ಖಾಸಗೀಕರಣದ ವಿರುದ್ಧ ಬೇಡಿಕೆಯಿದೆ. ಇದು ಅಭ್ಯರ್ಥಿಗಳ, ಪೋಷಕರ ಹಾಗೂ ಶಿಕ್ಷಕರ ಹಿತವನ್ನು ಸಾಧಿಸುವ ಬೇಡಿಕೆ. ಏಕೆಂದರೆ ಇತ್ತೀಚಿನ ಸುಪ್ರೀಂಕೋರ್ಟ್ ತೀರ್ಪು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಇವರನ್ನೆಲ್ಲಾ ಸುಲಿಯಲು ಮುಕ್ತ ಅವಕಾಶ ನೀಡಿದೆ.

ಗ್ರಾಮೀಣ ಉದ್ಯೋಗ ಖಾತರಿ ಕಾನೂನನ್ನು ತರಬೇಕೆಂಬ ಪ್ರಧಾನ ಬೇಡಿಕೆಯನ್ನು, ಈ ನಡುವೆಯೇ ಮಸೂದೆಯನ್ನು ಸರಿಪಡಿಸಿ ಈಡೇರಿಸಿದ್ದರೂ, ನಮ್ಮ ಜವಾಬ್ದಾರಿ ಅಷ್ಟಕ್ಕೇ ಮುಗಿಯುವುದಿಲ್ಲ. ಸಾರ್ವತ್ರಿಕ ಉದ್ಯೋಗಾವಕಾಶ ನಮ್ಮ ಗುರಿ. ಉದ್ಯೋಗಾವಕಾಶಗಳ ರಕ್ಷಣೆ, ಸಿಬ್ಬಂದಿ ಕಡಿತಕ್ಕೆ ವಿರೋಧ ಇತ್ಯಾದಿ ಬೇಡಿಕೆಗಳು ಬಹಳಷ್ಟು ಸಂಖ್ಯೆಯಲ್ಲಿ ನಿರುದ್ಯೋಗಿ ಯುವಕರಿಗೆ ಉದ್ಯೋಗದ ಅವಕಾಶ ನೀಡುತ್ತದೆ. ನಿರುದ್ಯೋಗಿಗಳೂ ಕಾರ್ಮಿಕರೇ, ಉದ್ಯೋಗದಿಂದ ವಂಚಿಸಲ್ಪಟ್ಟ ಕಾರ್ಮಿಕರು. ಆದ್ದರಿಂದ ಸಂಪೂರ್ಣ ಉದ್ಯೋಗ, ಇಲ್ಲವೇ ನಿರುದ್ಯೋಗ ಭತ್ಯೆ ಎಂಬುದು ಸಮಸ್ತ ಜನಗಳ ಬೇಡಿಕೆ.

ರಾಜ್ಯದಲ್ಲೂ ಜೆಸಿಟಿಯು ರಾಜ್ಯ ಸರ್ಕಾರದ ವಿಫಲತೆಯ ಮೇಲೂ ಗಮನ ಕೇಂದ್ರೀಕರಿಸಿತು-ವಿಶೇಷವಾಗಿ ಕಾರ್ಮಿಕರ ಬೇಡಿಕೆಗಳಿಗೆ ಸಂಬಂಧಪಟ್ಟಂತೆ; ಪೊಲೀಸ್ ದೌರ್ಜನ್ಯಗಳ ಪ್ರಶ್ನೆ - ಬಂಡವಾಳಶಾಹಿಗಳ ಮರ್ಜಿಯನ್ನು ಈಡೇರಿಸುವ ಅಗತ್ಯ ಬಂದಾಗ ಪೊಲೀಸರು ದೌರ್ಜನ್ಯಕ್ಕೆ ಇಳಿಯುತ್ತಾರೆ, ಅವರು ಬಂಡವಾಳಶಾಹಿಗಳ ಹಿತದೃಷ್ಟಿಯಿಂದಲ್ಲೇ ಕೆಲಸ ಮಾಡುತ್ತಾರೆ, ಇದನ್ನು ಬಲವಾಗಿ ಪ್ರತಿರೋಧಿಸಬೇಕು.

ಅದೇ ರೀತಿ ಸಾರಿಗೆ, ವಿದ್ಯುತ್ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಮಿಕರ ಅಮಾನುಷ ಶೋಷಣೆಯನ್ನು ನಿಲ್ಲಿಸಬೇಕು.

ಆದ್ದರಿಂದ ಕಾರ್ಮಿಕ ಸಂಘಗಳ ಜಂಟಿ ಸಮಿತಿ ರಾಜ್ಯಾದ್ಯಂತ ಹರತಾಳಕ್ಕೆ ಕರೆ ನೀಡಿದೆ. ಇದು ಮತ್ತುಹ ಸಮಸ್ತ ಜನಗಳ ಪರವಾದ ಒಂದು ಬಂದ್ ಆಗಿ ಪರಿಣಮಿಸಲಿ.

ಕರ್ನಾಟಕದಲ್ಲಿ ಸೆಪ್ಟೆಂಬರ್ 29 ರಂದು ಸಾರ್ವತ್ರಿಕ ಮುಷ್ಕರ ಮತ್ತು ಕಾರ್ಯಾಚರಣೆ ಯಶಸ್ವಿಯಾಗಿ ಪ್ರತಿಧ್ವನಿಗೊಳ್ಳಲಿ! ಭವಿಷ್ಯದಲ್ಲಿ ಕೂಡಾ ಸತತ ಹಾಗೂ ನಿರಂತರ ಕಾರ್ಯಾಚರಣೆಗಳ ಮೂಲಕ ಬೇಡಿಕೆಗಳ ಈಡೇರಿಕೆಯತ್ತ ಸರ್ವ ಪ್ರಯತ್ನ ನಡೆಯಲಿ. ಇದು ಮಾತ್ರವೇ ಜನರ ಹಿತಾಸಕ್ತಿಗಳನ್ನು ರಕ್ಷಿಸುವ ಭರವಸೆ ನೀಡಬಲ್ಲದು. ಸಮಸ್ತ ಜನತೆಯ ಹಿತದೃಷ್ಟಿಯಿಂದ ಕಾರ್ಯಾಚರಣೆ ನಡೆಸುವುದು. ಕಾರ್ಮಿಕ ವರ್ಗಗಳ ಬದ್ಧ ಕರ್ತವ್ಯ.

ಹೀಗೆ ಸೆಪ್ಟೆಂಬರ್ ಸೆಪ್ಟೆಂಬರ್ 29, 2005 ನಮಗೆಲ್ಲಾ ಉತ್ತಮ ಅವಕಾಶವಾಗಲಿ! ಅದನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳೋಣ!

ಉನ್ನತ ಶಿಕ್ಷಣದಲ್ಲಿ ಬಂಡವಾಳಶಾಹಿಗಳ ಆಕ್ರಮಣ ಶಿಕ್ಷಣ – ದೇಸಿ ಸಂಸ್ಕೃತಿಗಳ ದುರ್ಮರಣ

- ಡಾ. ಲ್ಯೂಟನ್ ಜೆ.
ಖ್ಯಾತ ಶಿಕ್ಷಣ ತಜ್ಞರು
ಬೊಲಿವಿಯನ್ ವಿಶ್ವವಿದ್ಯಾಲಯ, ಕಾರಕಸ್, ವೆನಿಜುವೆಲಾ

16ನೇ ವಿದ್ಯಾರ್ಥಿ ಯುವಜನ ಉತ್ಸವ 2005

ವೆನಿಜುವೆಲಾ ದೇಶದಲ್ಲಿ ನಡೆದ ವಿಶ್ವಸಾಮ್ರಾಜ್ಯಶಾಹಿ ವಿರೋಧಿ ವಿದ್ಯಾರ್ಥಿ ಯುವಜನೋತ್ಸವದ ಆರಂಭೋತ್ಸವ ಇತ್ಯಾದಿಗಳ ಬಗೆಗೆ ಕಳೆದ ಸಂಚಿಕೆಯಲ್ಲಿ ಓದಿದ್ದೀರಿ. ಕರ್ನಾಟಕದ ವಿದ್ಯಾರ್ಥಿ ಪ್ರತಿನಿಧಿಯಾಗಿ ಬಿ.ರಾಜಶೇಖರ ಮೂರ್ತಿಯವರು ಪಾಲ್ಗೊಂಡ ಶಿಕ್ಷಣದ ಕುರಿತ ವಿಚಾರ ಸಂಕಿರಣದಲ್ಲಿ ಮಂಡಿಸಲಾದ ವಿವಿಧ ದೇಶಗಳ ಶೈಕ್ಷಣಿಕ ಪರಿಸ್ಥಿತಿಗಳ ಬಗೆಗೆ ವರದಿ ಇಲ್ಲಿದೆ.

ಪ್ರಪಂಚದ ವಿವಿಧ ದೇಶಗಳನ್ನು ಪ್ರತಿನಿಧಿಸಿ ಆಗಮಿಸಿರುವ ಯುವ ಚೇತನಗಳೇ, ನಮ್ಮ ಈ 16ನೇ ವಿದ್ಯಾರ್ಥಿ-ಯುವಜನ ಉತ್ಸವದಲ್ಲಿ ನಡೆಯುತ್ತಿರುವ ನೂರಾರು ಕಾರ್ಯಕ್ರಮಗಳಲ್ಲಿ ತಮ್ಮ ತಮ್ಮ ದೇಶಗಳಲ್ಲಿನ ಶಿಕ್ಷಣದ ಪರಿಸ್ಥಿತಿ ಹೇಗಿದೆ. ಅದು ದುಡಿಯುವ ಜನರ ಕೈಗೆಟುಕುತ್ತಿದೆಯೇ, ಜನರ ಅಭಿವೃದ್ಧಿಗೆ ಪೂರಕವಾಗಿದೆಯೇ, ಬಂಡವಾಳಶಾಹಿ - ಸಾಮ್ರಾಜ್ಯಶಾಹಿ - ಶ್ರೀಮಂತರಿಗೆ ಮಾತ್ರ ಉನ್ನತ ಶಿಕ್ಷಣ ಮೀಸಲಾಗಿದೆಯೇ ಎಂಬುದರ ಬಗ್ಗೆ ನೀವೂ ಇಲ್ಲಿ ಪ್ರಸ್ತಾವಿಸಲಿದ್ದೀರಿ. ದೇಶದ ಜನತೆಯ ಅಭಿವೃದ್ಧಿಗೆ ಬೇಕಾದಂತಹ ಶಿಕ್ಷಣದ ಪದ್ಧತಿ ನಮಗೆ ಬೇಕಿದೆ. ಹಿಂದುಳಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಶಿಕ್ಷಣವನ್ನು ಸಮಗ್ರವಾಗಿ ಸಾರ್ವತ್ರೀಕರಣಗೊಳಿಸದಿರುವುದು. ಜೊತೆಗೆ ಸಾಮಾನ್ಯ ಜನ ಸಾಮಾನ್ಯ ಶಿಕ್ಷಣ ಪಡೆಯುವಂತಹ ಸ್ಥಿತಿಗೆ ಬರದೆ ಹೀನಾಯ ಸ್ಥಿತಿಯಲ್ಲಿರುವುದು, ಬಂಡವಾಳಶಾಹಿ - ಸಾಮ್ರಾಜ್ಯಶಾಹಿ ಶಕ್ತಿಗಳ ಮೇಲುಗೈ ಇರುವುದರಿಂದಲೇ ಇಂಥ ಪರಿಸ್ಥಿತಿ ಉಂಟಾಗುತ್ತಿದೆ. ಇನ್ನೊಂದೆಡೆ ಸಮಾಜವಾದಿ ರಾಷ್ಟ್ರಗಳಲ್ಲಿ ಹಾಗೂ ಸಾಮ್ರಾಜ್ಯಶಾಹಿ - ಬಂಡವಾಳಶಾಹಿ ವಿರುದ್ಧ ಇರುವ ದೇಶಗಳಲ್ಲೂ ಜನರ ಅಭಿವೃದ್ಧಿಗೆ ಪೂರಕ ಶಿಕ್ಷಣ ದೊರೆಯುತ್ತಿದೆ. ಉದಾಹರಣೆಯೆಂದರೆ ಅಮೇರಿಕಾದ ಎಲ್ಲಾ ರೀತಿಯ ದಬ್ಬಾಳಿಕೆಗಳ ವಿರುದ್ಧ ಪ್ರತಿರೋಧ ಒಡ್ಡುತ್ತಿರುವ ಕ್ಯೂಬಾ ದೇಶದ ಶಿಕ್ಷಣ ಪದ್ಧತಿಯನ್ನು ಜನ ಜೀವನದ ಪರಿಸ್ಥಿತಿಯನ್ನು ಪ್ರಜ್ಞಾಪೂರ್ವಕವಾಗಿ ಎಲ್ಲಾ ದೇಶಗಳು ನೋಡಬೇಕಾಗುತ್ತದೆ. ತಾಂತ್ರಿಕ ವಿಷಯವೇ ಆಗಲಿ, ವೈದ್ಯಕೀಯ ಕ್ಷೇತ್ರವೇ ಇರಲಿ, ವಿವಿಧ ವ್ಯವಸಾಯೋತ್ಪನ್ನ ತಯಾರಿಕೆಯಲ್ಲಿಯೂ ಸಮಗ್ರ ರೀತಿಯಲ್ಲಿ ಉನ್ನತ ಶಿಕ್ಷಣದಲ್ಲಿ ಸಂಶೋಧನೆ - ಪ್ರಾಯೋಗಿಕ ಆಯಾಮಗಳ ಆಧಾರದಲ್ಲಿ ನಡೆಯುತ್ತಿರುವುದರಿಂದ ಇಡೀ ಪ್ರಪಂಚಕ್ಕೆ ಮಾದರಿಯಾಗಿದೆ.

ಶಿಕ್ಷಣವೆಂಬುದು ಯಾರ ಸ್ವತ್ತಲ್ಲ. ಅದೊಂದು ಜ್ಞಾನ-ವಿಜ್ಞಾನ. ಅದು ಎಲ್ಲಾ ಜನರಿಗೆ ನೀರು-ಗಾಳಿ, ಬೆಳಕು ಮಾನವರಿಗೆ ಸಿಗುವಂತೆ ಶಿಕ್ಷಣದ ಜ್ಞಾನವೂ ಕೂಡ ಎಲ್ಲರಿಗೂ ದೊರೆಯುವಂತಾಗಬೇಕು. ನಮ್ಮ ವೆನಿಜುವೆಲಾದಲ್ಲಿ ಯುವಜನತೆಯೂ ಸೇರಿದಂತೆ ದೇಶದ ಜನರೆಲ್ಲಾ ಹೊಸ ಉತ್ಸಾಹ, ಹೊಸ ಆಶಾಭಾವವನ್ನು ಹೊಂದಿದ್ದಾರೆ.

ವೆನಿಜುವೆಲಾದ ಧ್ರುವತಾರೆ ಛಾವೇಜ್‌ರವರು ಅಧಿಕಾರಕ್ಕೇರಿದ ಮೇಲೆ ಸಾಮ್ರಾಜ್ಯಶಾಹಿ ಪರವಾದ ಆಡಳಿತಶಾಹಿ ಶಕ್ತಿ ವೆನಿಜುವೆಲಾದಲ್ಲಿ ಕುಂದಿದ ಮೇಲೆ ನಾಡಿನ ಜನಕ್ಕೆಲ್ಲಾ ಕಡ್ಡಾಯ ಶಿಕ್ಷಣ ಜಾರಿಗೆ ತಂದಿದ್ದೇವೆ.

ಪ್ರತಿಯೊಂದು ಮಗುವೂ ಮಕ್ಕಳೂ ತಪ್ಪದೇ ಪ್ರಾಥಮಿಕ ಶಿಕ್ಷಣ ಪಡೆಯಬೇಕು. ಕುಟುಂಬದ ಆರ್ಥಿಕ ಸಮಸ್ಯೆಯ ಪರಿಣಾಮದಿಂದಾಗಲಿ, ಅಥವಾ ಗ್ರಾಮೀಣ ಪ್ರದೇಶಗಳಲ್ಲಿ ಶಾಲೆಗಳ ಕೊರತೆಯೆಂಬುದಾಗಲೀ ಇಲ್ಲದೇ, ಶುಲ್ಕಗಳನ್ನು ನೀಡದೇ ಎಲ್ಲಾ ಮಕ್ಕಳು ಶಾಲೆ ಹೋಗುವಂತಹ ಹೊಸ ಪದ್ಧತಿಯನ್ನು ಜಾರಿಗೆ ತರಲಾಗಿದೆ. ಅಲ್ಲದೆ ಅಗತ್ಯ ಪ್ರಮಾಣದಲ್ಲಿ ಶಾಲಾ-ಕಾಲೇಜುಗಳ ಆರಂಭಿಸಲಾಗಿದೆ.

ಆರ್ಥಿಕ ಸಮಸ್ಯೆಯಿಂದ ಪ್ರತಿಭಾವಂತ ವಿದ್ಯಾರ್ಥಿಗಳು ಯಾವುದೇ ರೀತಿಯ ಶಿಕ್ಷಣ ಪಡೆಯದಂತಹ ಸ್ಥಿತಿ ಇತ್ತೀಚಿನ ವರ್ಷಗಳಲ್ಲಿಲ್ಲ. ಕಳೆದ ವರ್ಷಗಳಲ್ಲಿ ಬಹುತೇಕ ಜನತೆ ಉನ್ನತ ಶಿಕ್ಷಣವಿರಲಿ, ವೃತ್ತಿ ಶಿಕ್ಷಣವಿರಲಿ, ಸಾಮಾನ್ಯ ಶಿಕ್ಷಣವೂ ಕೂಡ ವೆನಿಜುವೆಲಾದಲ್ಲಿ ದಕ್ಕುತ್ತಿರಲಿಲ್ಲ. ಇಲ್ಲಿ ಎಲ್ಲಾ ರೀತಿಯ ಐಷಾರಾಮ ಜೀವನ ಕೇವಲ ಶೇ. 15-20 ಜನಕ್ಕೆ ಮಾತ್ರ ಸೀಮಿತವಾಗಿದೆ. ಈಗ ಸಮಾಜಮುಖಿಯಾದ ಮಾನವೀಯ ಕೆಲಸಗಳು ವೆನಿಜುವೆಲಾದಲ್ಲಿ ಆರಂಭಗೊಂಡಿದೆ. ಒಂದು ಕಾಲದಲ್ಲಿ ಕೆಲವೇ ಶ್ರೀಮಂತ ರಾಷ್ಟ್ರಗಳಿಗೆ - ಅಮೇರಿಕಾ ದೇಶದ ಬಹುರಾಷ್ಟ್ರೀಯ ಕಂಪನಿಗಳಿಗೆ ಭೋಗದ ನೆಲವಾಗಿದ್ದ ವೆನಿಜುವೆಲಾ ತನ್ನ ನಿಜ ಸ್ವಾತಂತ್ರ್ಯವನ್ನು ಕಂಡಿದೆ. ಜನತೆ ಇದೇ ಸಾಮ್ರಾಜ್ಯಶಾಹಿ ವಿರುದ್ಧ ಹೋರಾಡುತ್ತಿದ್ದಾರೆ. ಇದರಲ್ಲಿ ಶಿಕ್ಷಣ ಪ್ರಮುಖ ಪಾತ್ರವಹಿಸಿದೆ. ಗ್ರಾಮೀಣ ಪ್ರದೇಶದ ಅತಿ ಬಡ ಕುಟುಂಬದ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯುತ್ತಿದ್ದಾರೆ. ಅವರೇ ಈ ವಿಶ್ವ ಹಬ್ಬವನ್ನು ವೆನಿಜುವೆಲಾ ತಾಯಿನಾಡಿನ ಸಂಸ್ಕೃತಿಯನ್ನು ಆಕಾಶದೆತ್ತರಕ್ಕೆ ಕೊಂಡೊಯ್ಯುತ್ತಿದ್ದಾರೆ.

'ಕೊನೆಯದಾಗಿ ಹೇಳುತ್ತೇನೆ. ಮಾನವನ ಅಭಿವೃದ್ಧಿಗೆ ದೇಶದ ಅಭಿವೃದ್ಧಿಗೆ ಶಿಕ್ಷಣ - ಉನ್ನತ ಶಿಕ್ಷಣದ ಪಾತ್ರ ಅತಿ ಮುಖ್ಯ. ಆದರೆ ಬಂಡವಾಳಶಾಹಿಗಳ ಹಿಡಿತದಿಂದಾಗಿ ಉನ್ನತ ಶಿಕ್ಷಣ



ಅವರ ಕಪಿಮುಷ್ಟಿಯಲ್ಲಿದೆ. ಶಿಕ್ಷಣದ ವ್ಯಾಪಾರೀಕರಣವಲ್ಲದೇ ಆಯಾ ದೇಶದ ಅಭಿವೃದ್ಧಿಗೆ ಪೂರಕ ಸಂಶೋಧನೆಗಳಾಗಲೀ, ಅಥವಾ ಸಂಪನ್ಮೂಲಗಳನ್ನು ಬಳಸಿಕೊಳ್ಳುವುದನ್ನು ಬಿಟ್ಟು ಬಂಡವಾಳಶಾಹಿ ಬೆಳವಣಿಗೆಯ ಅನುಕೂಲಕ್ಕಾಗಿ ವಿದ್ಯಾರ್ಥಿ- ಯುವಜನತೆಯನ್ನು ಸತ್ವಹೀನರನ್ನಾಗಿ ಮಾಡುತ್ತಿದ್ದಾರೆ. ಪ್ರಗತಿಪರ ಹಾದಿತುಳಿದಂತಹವರನ್ನು ಭಯೋತ್ಪಾದಕರು, ಪ್ರಜಾಪ್ರಭುತ್ವ ವಿರೋಧಿ ರಾಷ್ಟ್ರಗಳಿವು, ಎಂದು ಬಿಂಬಿಸಲಾಗುತ್ತಿದೆ. ಇಂಥ ಹುನ್ನಾರವನ್ನು ವಿರೋಧಿಸಬೇಕಿದೆ. ಇಡೀ ವಿಶ್ವದ ನೀವು ಬಂಡವಾಳಶಾಹಿ ರಾಷ್ಟ್ರಗಳಿಗೂ - ಸಮಾಜವಾದಿ ರಾಷ್ಟ್ರಗಳಿಗೂ ಇರುವ ವ್ಯತ್ಯಾಸವನ್ನು ಅರಿಯಬೇಕಿದೆ. ಹೀಗಾಗಿ ನಿಮ್ಮ - ನಿಮ್ಮ ದೇಶದ ಶೈಕ್ಷಣಿಕ ಪರಿಸ್ಥಿತಿಯನ್ನು ವಿವರಿಸಿ ಆಹ್ವಾನಿಸುತ್ತೇವೆ'. ಹೀಗೆ ಖ್ಯಾತ ಶಿಕ್ಷಣ ತಜ್ಞರು, ಬೊಲಿವಿಯನ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ನ್ಯೂಟನ್ ಜೆ ರವರು ಚರ್ಚೆಗೆ ಪೂರಕವಾಗಿ ತಮ್ಮ ವಿಚಾರಸರಣಿಯನ್ನು ಮಂಡಿಸಿದರು. ನಂತರ ಸಂಶೋಧನಾ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳು ತಮ್ಮ ದೇಶದ ಶಿಕ್ಷಣ ಪರಿಸ್ಥಿತಿಯ ಮಾಹಿತಿಗಳ ಬುತ್ತಿಗಳನ್ನು ಬಿಚ್ಚಿ ಒಬ್ಬೊಬ್ಬರೇ 5 ನಿಮಿಷಗಳ ಅವಧಿಯಲ್ಲಿ ಅಂಕಿ ಅಂಶಗಳ ಆಧಾರದಲ್ಲಿ ವಿವರಿಸಿದರು.

ಕೊಲಂಬಿಯಾದ ಸಂಶೋಧನಾ ವಿದ್ಯಾರ್ಥಿಯಾದ ಗಿಲಾಬ್ ಮಾನವ ಹಕ್ಕುಗಳ ಬಗ್ಗೆ ಸಂಶೋಧನೆ ಮಾಡುತ್ತಿದ್ದಾರೆ. ಇವರು ಹೇಳಿದ್ದು 'ನಮ್ಮ ದೇಶದಲ್ಲಿ ಹೆಸರಿಗೆ ಮಾತ್ರ ಜನರ ಹೆಸರಲ್ಲಿ ಆಡಳಿತ ನಡೆಯುತ್ತಿದೆ. ಬಹುತೇಕ ಬಡಜನತೆಗೆ ಸಾಮಾನ್ಯ ಶಿಕ್ಷಣವನ್ನು ನೀಡದೆ ವಂಚಿಸಲಾಗಿದೆ. ಶ್ರೀಮಂತರಿಗೆ - ಹಣ ಉಳ್ಳವರಿಗೆ ಮಾತ್ರ ಶಿಕ್ಷಣ ಎಂಬ ನೀತಿ ಜಾರಿಯಲ್ಲಿದೆ. ಸರ್ಕಾರಿ ಶಾಲಾ-ಕಾಲೇಜು ವಿ.ವಿ.ಗಳಿಗಿಂತ ಖಾಸಗಿ ಶಿಕ್ಷಣ ಸಂಸ್ಥೆಗಳೇ ಮೇಲುಗೈ ಪಡೆದಿವೆ. ಬಡ ಗ್ರಾಮೀಣ ಜನತೆಗೆ ವೃತ್ತಿ ಶಿಕ್ಷಣ ಕನಸಿನ ಮಾತಾಗಿದೆ. ಪ್ರಾಥಮಿಕ ಶಿಕ್ಷಣದ ಕಡ್ಡಾಯಕ್ಕಾಗಿ, ಶಿಕ್ಷಣ ವ್ಯಾಪಾರೀಕರಣದ ವಿರುದ್ಧ ಹೋರಾಟ ಮಾಡಿದ ವಿದ್ಯಾರ್ಥಿ ಮುಖಂಡರನ್ನು ಗುಂಡಿಕ್ಕಿ ಕೊಲ್ಲಲಾಯಿತು. ರ್‍ಯಾಲಿಯಾಗಲೀ, ಕರ ಪತ್ರವಾಗಲೀ ಮುದ್ರಿಸಿದರೆ ಹಿಂಸಾತ್ಮಕ ರೀತಿಯಲ್ಲಿ ಕ್ರೂರ ಹಿಂಸೆಯನ್ನು ನೀಡುತ್ತಿದೆ ಈಗಿನ ಸರ್ಕಾರ.

ಇಷ್ಟಾದರೂ ವಿದ್ಯಾರ್ಥಿಗಳ ಪ್ರತಿಭಟನೆ ಹೋರಾಟ ನಿಲ್ಲುತ್ತಿಲ್ಲ. ನೆರೆ ದೇಶದ ವೆನಿಜುವೆಲಾ ಬೆಳವಣಿಗೆ - ಬದಲಾವಣೆ ನಮಗೂ ಸ್ಫೂರ್ತಿ-ಸ್ಥೈರ್ಯ ತಂದಿದೆ. ಮುಂದಿನ ದಿನಗಳಲ್ಲಿ ಕೊಲಂಬಿಯಾ ಜನ ಸಮುದಾಯ ಕೊಲಂಬಿಯಾದ ಸ್ವಾವಲಂಬನೆಗಾಗಿ ಹೋರಾಡುತ್ತೇವೆ. ವಿಜ್ಞಾನ, ತಂತ್ರಜ್ಞಾನ, ವೈದ್ಯಕೀಯ ಅಭ್ಯಾಸಕ್ಕಾಗಿ ಆಗರ್ಭ ಶ್ರೀಮಂತರು ಅಮೇರಿಕಾಕ್ಕೆ ಹೋಗುವುದುಂಟು, ಇತ್ತೀಚಿನ ದಿನಗಳಲ್ಲಿ ವೈದ್ಯಕೀಯ ರಂಗದಲ್ಲಿ ಪ್ರಖ್ಯಾತಿ ಹೊಂದಿರುವ ಸಮಾಜವಾದಿ ರಾಷ್ಟ್ರ ಕ್ಯೂಬಾಕ್ಕೂ ಕೊಲಂಬಿಯಾದ ವಿದ್ಯಾರ್ಥಿಗಳು ವೈದ್ಯಕೀಯ ಶಿಕ್ಷಣಕ್ಕಾಗಿ ಹೋಗುತ್ತಿದ್ದಾರೆ. ಆದರೆ ಅಮೇರಿಕಾಕ್ಕೆ ಹೋಗಿ ಡಾಲರ್ ರೂಪದಲ್ಲಿ ಹಣ ತೆತ್ತು ಬರುವುದು ಸಾಮಾನ್ಯ ಮಧ್ಯಮ ವರ್ಗದ ಪ್ರತಿಭಾವಂತ ಕೊಲಂಬಿಯಾ ವಿದ್ಯಾರ್ಥಿಗಳಿಗೆ ಸಾಧ್ಯವಾಗುತ್ತಿಲ್ಲ.

ಆದ್ದರಿಂದ ಶಿಕ್ಷಣ ಕ್ಷೇತ್ರಕ್ಕೆ ಹಣ ವಿನಿಯೋಗಿಸಲು ಸರ್ಕಾರಕ್ಕೆ ಒತ್ತಡ ತರುತ್ತಿದ್ದೇವೆ. ಆದರೆ ಬಂಡವಾಳಶಾಹಿ ಪರವಾದ ಸರ್ಕಾರ ಒಪ್ಪುತ್ತಿಲ್ಲ. ಬದಲಾಗಿ ನಮ್ಮನ್ನು ದಮನ ಮಾಡಲು ಸರ್ಕಾರ ಪ್ರಯತ್ನಿಸುತ್ತಿದೆ. ಎದೆಗುಂದದೆ ನವ ಸಮಾಜದ ನಿರ್ಮಾಣಕ್ಕೆ ನಾವು ಬದ್ಧವಾಗಿದ್ದೇವೆ ಎಂದ ಅವರು ತಮ್ಮ ಹೋರಾಟಕ್ಕೆ ಇತರರ ಬೆಂಬಲ ದೊರೆಯಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿ ತಮ್ಮ ಮನಸ್ಸಿನಾಳದಿಂದ ತನ್ನ ದೇಶದ ಶಿಕ್ಷಣ ಪರಿಸ್ಥಿತಿಯನ್ನು ಬಿಡಿಸಿಟ್ಟರು.

ತದನಂತರದಲ್ಲಿ ಪನಾಮ ದೇಶದ ಪ್ರತಿನಿಧಿ ತನ್ನ ದೇಶದಲ್ಲಿ ಶಿಕ್ಷಣ ಪರಿಸ್ಥಿತಿಯನ್ನು ವಿವರಿಸಿದರು. ಉದ್ಯೋಗ ಸೃಷ್ಟಿಸುವ ವ್ಯವಸ್ಥೆ ಇಲ್ಲದೆ ಕಲಿತ ಯುವಜನತೆ ನಿರುದ್ಯೋಗದಿಂದ ನರಳುತ್ತಿದ್ದರೆ, ವಿದ್ಯಾಭ್ಯಾಸಕ್ಕಾಗಿ ಹೋರಾಟ ಮಾಡುವ ಪರಿಸ್ಥಿತಿ ಇನ್ನೊಂದೆಡೆ ಎಂದು ವಿವರಿಸಿದರು. ಭಾರತವನ್ನು ಪ್ರತಿನಿಧಿಸಿ ತಮಿಳುನಾಡಿನ ಎಸ್ .ಎಫ್.ಐ. ರಾಜ್ಯ ಅಧ್ಯಕ್ಷರಾದ ಸೆಲ್ವ ಮತ್ತು ಕರ್ನಾಟಕ ರಾಜ್ಯ ಅಧ್ಯಕ್ಷರಾದ ಬಿ.ರಾಜಶೇಖರಮೂರ್ತಿ ಭಾರತದಲ್ಲಿ ಶಿಕ್ಷಣ ವ್ಯಾಪಾರೀಕರಣದ ಬಗ್ಗೆ, ಡೊನೇಷನ್ ಪರಿಸ್ಥಿತಿ, ಸರ್ಕಾರಗಳ ಶಿಕ್ಷಣ ಖಾಸಗೀಕರಣದ ನೀತಿ, ಇದರಿಂದ ಪ್ರತಿಭಾವಂತ ಹಾಗೂ ಸಾಮಾಜಿಕವಾಗಿ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಶಿಕ್ಷಣ ವಂಚಿಸುವುದು, ಇದರಿಂದ ಕರ್ನಾಟಕ, ಕೇರಳ ರಾಜ್ಯಗಳಲ್ಲಿ ಮಮತಾ, ಪ್ರತಿಭಾ, ರಜನಿ ಮುಂತಾದ ವಿದ್ಯಾರ್ಥಿಗಳ ಆತ್ಮಹತ್ಯೆ ಮತ್ತು ಇಡೀ ರಾಜ್ಯ ಎಸ್.ಎಫ್.ಐ. ಸಂಘಟನೆಯ ಹೋರಾಟ ಮತ್ತು ಸರ್ಕಾರಗಳ ಬಡ ವಿದ್ಯಾರ್ಥಿ ವಿರೋಧಿ ನೀತಿಗಳ ಬಗ್ಗೆ ವಿವರಿಸಲಾಯಿತು. ಕರ್ನಾಟಕ ರಾಜ್ಯದ ಪ್ರತಿಭಾ ಮತ್ತು ಮಮತ ಫೋಟೋಗಳನ್ನು ಮತ್ತು ಬೆಂಗಳೂರಿನಲ್ಲಿ ನಡೆಸಿದ ಬೃಹತ್ ಪ್ರತಿಭಟನೆಯ ಫೋಟೋಗಳನ್ನು ಪ್ರದರ್ಶಿಸಲಾಗಿತ್ತು.

ನಂತರದಲ್ಲಿ ಬ್ರೆಜಿಲ್‌ನ ಸಂಗಾತಿ ಲಾರೆನ್‌ರವರು ತನ್ನ ದೇಶದ ಶಿಕ್ಷಣ ಪರಿಸ್ಥಿತಿಯನ್ನು ವಿವರಿಸಿದರು. ಪ್ರಗತಿಪರ ಚಿಂತನೆಯುಳ್ಳ - ದುಡಿಯುವ ಜನತೆಯ ಪರ ಕಾಳಜಿಯುಳ್ಳ ಲುಲಾ ಅಧ್ಯಕ್ಷತೆಯ ಸರ್ಕಾರವಿದ್ದರೂ ಬಂಡವಾಳಶಾಹಿ ಪದ್ಧತಿಯ ಸ್ವರೂಪದ ಸರ್ಕಾರವೇ ಮುಂದುವರೆಯುತ್ತಿರುವುದರಿಂದ ಶಿಕ್ಷಣ ವ್ಯಾಪಾರೀಕರಣ - ಖಾಸಗೀಕರಣ ನಿರಂತರವಾಗಿದೆ. ಆದರೆ, ಬ್ರೆಜಿಲ್‌ನ ದಕ್ಷಿಣ ಭಾಗದಲ್ಲಿ ಅರ್ಧದಷ್ಟು ಭೌಗೋಳಿಕವಾಗಿ ಶ್ರೀಮಂತ ಸಂಪನ್ಮೂಲಗಳ ಲಭ್ಯತೆಯಿಂದ ಜನ ಜೀವನದ ಪರಿಸ್ಥಿತಿ ಉತ್ತಮ ಇರುವುದರಿಂದ ಸಾಮಾನ್ಯ ಜನತೆಗೆ ಸಾಮಾನ್ಯ ಶಿಕ್ಷಣ ಪಡೆಯಲು ಕಷ್ಟವಾಗುತ್ತಿಲ್ಲ. ಆದರೆ ದಕ್ಷಿಣ ಬ್ರೆಜಿಲ್‌ನ ಉಳಿದ ಅರ್ಧಭಾಗ ಜನರು, ದಿನ ನಿತ್ಯದ ಹೊಟ್ಟೆಪಾಡಿಗಾಗಿ ಪರದಾಡುವ ಪರಿಸ್ಥಿತಿ ಇದೆ. ಈ ಜನರು ಕನಿಷ್ಠ ಶಿಕ್ಷಣ - ಆರೋಗ್ಯ, ವಾಸಿಸಲು ಯೋಗ್ಯ ಮನೆಗಳಿಲ್ಲದೆ ರೋಗ ರುಜಿನುಗಳಿಗೆ ಬಲಿಯಾಗುವ ಪರಿಸ್ಥಿತಿ ಇದೆ. ಹೀಗಿರುವ ಸರ್ಕಾರ ಕಾಳಜಿಯುಳ್ಳ ಸರ್ಕಾರವೆಂದು ಹೇಳಿಕೊಂಡು ಬಂದರೂ ದೃಢವಾಗಿ ಸಾಮ್ರಾಜ್ಯಶಾಹಿಗಳನ್ನು ಎದುರಿಸುವ ಶಕ್ತಿ ಹೊಂದಿಲ್ಲ. ಜೊತೆಗೆ ತಮ್ಮಲ್ಲಿನ ವೈಯಕ್ತಿಕ ಗುಂಪುಗಳಿಂದಾಗಿ ಪರೋಕ್ಷವಾಗಿ ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿ ಶಕ್ತಿಗಳು ಬ್ರೆಜಿಲ್‌ನ್ನು ನುಂಗಿ ಹಾಕುವ ಪರಿಸ್ಥಿತಿ ಉಂಟಾಗಿದೆ. ಇಡೀ ಲ್ಯಾಟಿನ್ ಅಮೇರಿಕಾದ ವಿದ್ಯಾರ್ಥಿ ಹೋರಾಟದ ಸ್ಫೂರ್ತಿಯ ಅನುಭವದಿಂದ ಶಿಕ್ಷಣವನ್ನು ಸಾರ್ವತ್ರೀಕರಿಸಲು ಉನ್ನತ ಶಿಕ್ಷಣವನ್ನು ವಿಸ್ತರಿಸುವಂತಾಗಲೂ ಬಲಿಷ್ಠ ಹೋರಾಟಗಳನ್ನು ರೂಪಿಸಲಾಗಿದೆ. ಯುದ್ಧ ವಿರೋಧಿಸಿ, ಅಮೇರಿಕಾದ ದಬ್ಬಾಳಿಕೆ ನೀತಿಯನ್ನು ಖಂಡಿಸಿ ಬೃಹತ್ ರ್‍ಯಾಲಿಗಳನ್ನು ವಿದ್ಯಾರ್ಥಿಗಳು ನಡೆಸಿದ್ದಾರೆ. ನೂರಾರು ಜನ ವಿದ್ಯಾರ್ಥಿಗಳು ಶಿಕ್ಷಣಕ್ಕಾಗಿ ಪ್ರಾಣ ತ್ಯಾಗ ಮಾಡಿದ್ದಾರೆ. ವಿದ್ಯಾರ್ಥಿ-ಯುವಜನ ಹೋರಾಟದ ಫಲ ಇಂದಿನ ಪರಿಸ್ಥಿತಿಯಲ್ಲಿ ಅತ್ಯಲ್ಪ. ಬಹುತೇಕ ಗ್ರಾಮೀಣ ಜನತೆ ಸಾಮಾನ್ಯ ಶಿಕ್ಷಣದಿಂದ ವಂಚಿತರಾಗಿದ್ದರೆ. ಶ್ರೀಮಂತರ ಸ್ವತ್ತಾಗಿ ಶಿಕ್ಷಣ ಖಾಸಗಿಯವರ ಒಡೆತನದಲ್ಲಿದೆ. ಕ್ಯೂಬಾ, ಚೈನಾ, ವೆನಿಜುವೆಲಾ, ಉತ್ತರ ಕೊರಿಯಾ ಮಾದರಿಯಲ್ಲಿ ನಮ್ಮ ದೇಶದಲ್ಲೂ ಎಲ್ಲ ರೀತಿಯ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸಲು ಪಣ ತೊಡುತ್ತೇವೆ. ಶಿಕ್ಷಣ ಕ್ಷೇತ್ರದಲ್ಲಿ ಜನರ ಅಭಿವೃದ್ಧಿಗಾಗಿ ಬದಲಾವಣೆ ತರುತ್ತೇವೆ. ಈ ಹೋರಾಟಕ್ಕೆ ನಿಮ್ಮ ಬೆಂಬಲ ಪಡೆಯುತ್ತೇವೆಂಬ ಛಲವನ್ನು ವ್ಯಕ್ತಪಡಿಸಿದರು.


ಇದೇ ರೀತಿಯಲ್ಲಿ ವಿವಿಧ ದೇಶಗಳ ಶಿಕ್ಷಣ ಪರಿಸ್ಥಿತಿಯ ಬಗ್ಗೆ ಸುಮಾರು 3 ಘಂಟೆಗಳ ಕಾಲ ನಡೆದ ಚರ್ಚೆಯಲ್ಲಿ ಸುಮಾರು 18 ದೇಶಗಳನ್ನು ಪ್ರತಿನಿಧಿಸಿ ವಿದ್ಯಾರ್ಥಿ ಮುಖಂಡರು ತಮ್ಮ ದೇಶದ ಶಿಕ್ಷಣ ಪರಿಸ್ಥಿತಿಯನ್ನು ವ್ಯಕ್ತ ಪಡಿಸಿದರು.

ಬಹುತೇಕ ದೇಶಗಳಲ್ಲಿ ಶತಮಾನಗಳ ಕಾಲ ಬಹುಸಂಖ್ಯಾತ ಜನ ಸಮುದಾಯಕ್ಕೆ ಶಿಕ್ಷಣ ವಂಚಿಸಿದ್ದು, ಸಾಮ್ರಾಜ್ಯಶಾಹಿಗೆ - ಬಂಡವಾಳಶಾಹಿಗಳ ಹಿತಕ್ಕೆ ಅನುಕೂಲವಾಗು ವಂತಹ ಶಿಕ್ಷಣವನ್ನೇ ನೀಡುತ್ತಾ ಬಂದಿರುವುದು. ಶಿಕ್ಷಣವನ್ನು ಬಂಡವಾಳಶಾಹಿಗಳ ಬೆಳವಣಿಗೆಗೆ ಆಯುಧವನ್ನಾಗಿ ಬಳಸಿರುವುದು, ಈ ಚರ್ಚೆಯ ಮೂಲಕ ಎಲ್ಲರಿಗೂ ಮನದಟ್ಟಾಗಿತ್ತು.

ಬಂಡವಾಳಶಾಹಿ - ಸಾಮ್ರಾಜ್ಯಶಾಹಿ ಶಕ್ತಿಗಳಿಂದ ಶಿಕ್ಷಣ ರಂಗವನ್ನು ಬಿಡಿಸಿ ಜನಸಾಮಾನ್ಯರ ಕೈಗೆ ಅದು ದೊರಕುವಂತೆ ಮಾಡುವ ಚಳುವಳಿಗಳನ್ನು ಬಲಪಡಿಸಬೇಕೆಂಬ ಅಭಿಪ್ರಾಯಕ್ಕೆ ಬರಲಾಯಿತು. ಖಾಸಗಿ ವಿ.ವಿ.ಗಳು, ವಿದೇಶಿ ವಿ.ವಿ.ಗಳು ಆಯಾ ದೇಶದ ಸಾರ್ವಭೌಮತೆಗೆ ಧಕ್ಕೆ ತರುವಂತಹ ಪ್ರವೃತ್ತಿಯನ್ನು ತಡೆಗಟ್ಟಬೇಕೆಂದು ನಿರ್ಣಯಿಸಲಾಯಿತು.

ಸರ್ಕಾರಗಳು ಆಯಾ ದೇಶಕ್ಕೆ ಅನುಗುಣವಾಗಿ ಶಿಕ್ಷಣ ಕ್ಷೇತ್ರಕ್ಕೆ ಆರ್ಥಿಕ ಆದ್ಯತೆ ನೀಡಬೇಕು. ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸಬೇಕು. ಶಿಕ್ಷಣ ವ್ಯಾಪಾರೀಕರಣ- ಖಾಸಗೀಕರಣಗಳ ವಿರುದ್ಧ ಬೃಹತ್ ಹೋರಾಟ ರೂಪಿಸಿ ಜನಸಾಮಾನ್ಯರಿಗೆ ಶಿಕ್ಷಣ ಸಿಗುವಂತಹ, ದೇಶದ ಅಭಿವೃದ್ಧಿಗೆ ಬೇಕಾಗುವಂತಹ ವಾತಾವರಣವನ್ನು ನಿರ್ಮಿಸಲು ಶ್ರಮಿಸಬೇಕೆಂದು ನಿರ್ಣಯಿಸಲಾಯಿತು.

ಕುಸಿಯುತ್ತಿರುವ ಭಾರತದ ಕೃಷಿ



ಕುರುಡು ಕಾಂಚಾಣ

ಜಿ.ಎಸ್.ಮಣಿ

ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು ಎಂದು ಸರ್ವಜ್ಞ ಅಂದೇ ಹೇಳಿದ. ಕೃಷಿ ಭಾರತದ ಸಂದರ್ಭದಲ್ಲಿ ಇಂದಿಗೂ ಅಷ್ಟೇ ಮಹತ್ವ ಹೊಂದಿದೆ. ದೇಶದ ಶೇ 70 ರಷ್ಟು ಜನತೆ ಇಂದಿಗೂ ಕೃಷಿಯ ಮೇಲೆ ಅವಲಂಬಿತರಾಗಿದ್ದಾರೆ. ಕೃಷಿಯ ಬೆಳವಣಿಗೆ ದರ ಹೆಚ್ಚಾಗಿದ್ದರೆ ಈ ಜನ ನೆಮ್ಮದಿ ಕಾಣಬಹುದು. ಇಲ್ಲದಿದ್ದರೆ ಬಡತನದ ಬೇಗೆ ಅವರನ್ನು ತಿನ್ನುತ್ತಿದೆ ಎಂದರ್ಥ.

ಎಂಟನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಅಂದರೆ 1992-97 ರ ಅವಧಿಯಲ್ಲಿ ಕೃಷಿಯ ವಾರ್ಷಿಕ ಸರಾಸರಿ ಬೆಳವಣಿಗೆ ಶೇ 4.7 ರಷ್ಟಿತ್ತು. ಒಂಬತ್ತನೇ ಯೋಜನೆಯ ಅವಧಿಯಲ್ಲಿ ಅದು (ಅಂದರೆ 1997-2002) ಶೇ 2.1 ಕ್ಕೆ ಇಳಿದಿದೆ. ನಂತರ ಹತ್ತನೇ ಯೋಜನೆಯ ಮೊದಲ ಮೂರು ವರ್ಷಗಳಲ್ಲಿ (2002-2005 ರವರೆಗೆ) ಈ ಬೆಳವಣಿಗೆಯ ದರ ಬರೀ ಶೇ 1.2 ರಷ್ಟಕ್ಕೆ ಇಳಿದಿದೆ.

ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಇದನ್ನು ಬಹಳ ಗಂಭೀರವಾಗಿ ತೆಗೆದುಕೊಂಡು ಕೃಷಿಯನ್ನು ಅಭಿವೃದ್ಧಿಗೊಳಿಸುವ, ಬೆಳವಣಿಗೆ ಹೆಚ್ಚಿಸುವ ನೀತಿಗಳನ್ನು ಅಳವಡಿಸಿಕೊಳ್ಳಬೇಕಾಗಿತ್ತು. ಬದಲಿಗೆ ಉದಾರೀಕರಣದ ಹೆಸರಿನಲ್ಲಿ ಬಂಡವಾಳಶಾಹಿಗಳಿಗೆ ಅನುಕೂಲ ಮಾಡಿಕೊಡುವ ನೀತಿಗಳನ್ನೇ ಅನುಸರಿಸುತ್ತಿದೆ. ಮೂರು ವರ್ಷದಲ್ಲಿ ಕೃಷಿಗೆ ಬ್ಯಾಂಕು ಸಾಲ ದುಪ್ಪಟ್ಟಾಗಬೇಕೆಂಬ ಫರ್ಮಾನು ಹೊರಡಿಸಿದ್ದನ್ನು ಬಿಟ್ಟರೆ ಈ ಸರ್ಕಾರ ಕೃಷಿಗಾಗಿ ಹೆಚ್ಚಿನದೇನನ್ನೂ ಮಾಡಿಲ್ಲ.

ಭತ್ತ, ಗೋಧಿಯಂತಹ ಏಕದಳ ಧಾನ್ಯಗಳ ಉತ್ಪಾದನೆಯೂ ಕುಸಿಯುತ್ತಿದೆ. ಹೀಗೆ ಕುಸಿತ ಉಂಟಾದರೆ ಆಹಾರ ಸುಭದ್ರತೆಗೆ ದೊಡ್ಡ ಧಕ್ಕೆಯುಂಟಾಗುತ್ತದೆ. ಆಹಾರ ಧಾನ್ಯಗಳ ಇಂದಿನ ತಲಾ ಲಭ್ಯತೆ 1997ಕ್ಕಿಂತ ಶೇ 10 ರಷ್ಟು ಕಡಿಮೆಯಾಗಿದೆ.

ಕೃಷಿ ಲಾಗುವಾಡುಗಳ ವಿತರಣೆಯಲ್ಲಿ ಏರುಪೇರು, ಧಾನ್ಯ ಬೆಳೆಗಳಿಂದ ವಿಮುಖವಾಗಿ ತೋಟಗಾರಿಕಾ ಬೆಳೆಗಳಿಗೆ ಒತ್ತು ನೀಡಿರುವುದು ಇತ್ಯಾದಿಗಳೆಲ್ಲ ಇಂದಿನ ಕೃಷಿ ಪರಿಸ್ಥಿತಿಗೆ ಕಾರಣವಾಗಿದೆ. ಭೂಸುಧಾರಣೆಯಂತಹ ಕ್ರಮ ಕೈಗೊಳ್ಳುವುದಿರಲಿ ಬೂರ್ಜ್ವಾ ನೇತೃತ್ವದ ಸರ್ಕಾರಗಳು ಪ್ರತಿಗಾಮಿ ಕ್ರಮಗಳನ್ನೇ ಕೈಗೊಂಡಿವೆ. ಕೃಷಿಯ ಬಿಕ್ಕಟ್ಟು ದಿನದಿಂದ ದಿನಕ್ಕೆ ಉಲ್ಬಣಗೊಳ್ಳುತ್ತಿದೆ. ಕೃಷಿ ಅವಲಂಬಿತರ ಬದುಕು ಹೀನಾಯಗೊಳ್ಳುತ್ತಿದೆ.

ಶ್ರೀಮಂತರಿಗೇ ಹೆಚ್ಚಿನ ಅಭಿವೃದ್ಧಿ?

ದೇಶದ ಎಲ್ಲ ಭಾಗಗಳೂ ಸಮನಾಗಿ ಅಭಿವೃದ್ಧಿ ಹೊಂದಬೇಕು ಎಂಬುದು ನಮ್ಮ ಸಂವಿಧಾನದ ಆಶಯ. ಪಂಚವಾರ್ಷಿಕ ಯೋಜನೆಗಳೂ ಈ ಆಶಯ ಕಾರ್ಯರೂಪಕ್ಕೆ ತರುವ ಸಾಧನ.

ಆದರೆ ಉದಾರೀಕರಣದ ಯುಗದಲ್ಲಿ ಇಂತಹ ಜವಾಬ್ದಾರಿಗಳಿಲ್ಲ. ಶ್ರೀಮಂತ ರಾಜ್ಯಗಳು ಶ್ರೀಮಂತವಾಗಲಿ. ಬಡ ರಾಜ್ಯಗಳು ಬಡವಾಗೇ ಉಳಿಯಲಿ ಎಂಬಂತಹ ಸ್ಥಿತಿ.

ವಿದೇಶಿ ನೇರ ಹೂಡಿಕೆ ನಮ್ಮ ಯುಪಿಎ ಪ್ರಧಾನ ಮಂತ್ರಿ ಮನಮೋಹನಸಿಂಗ್‌ಗೆ ಪ್ರಮುಖವಾದ ವಿಷಯ. ಇದಿಲ್ಲದೆ ದೇಶದ ಅಭಿವೃದ್ಧಿ ಸಾಧ್ಯವಿಲ್ಲ ಎಂದು ಅವರು ಪದೇ ಪದೇ ಹೇಳುತ್ತಿದ್ದಾರೆ. ಈ ವಿದೇಶಿ ನೇರ ಹೂಡಿಕೆ ಪಕ್ಷಪಾತಿ ಧೋರಣೆಯದ್ದು.

ಒಂದು ಅಧ್ಯಯನದ ಪ್ರಕಾರ ಶ್ರೀಮಂತ ರಾಜ್ಯಗಳಿಗೆ ಹೆಚ್ಚಿನ ವಿದೇಶಿ ನೇರಹೂಡಿಕೆ ಹರಿದು ಬರುತ್ತದೆ ಹೊರತು ಬಡ ರಾಜ್ಯಗಳಿಗಲ್ಲ. ಯಾವ ರಾಜ್ಯಗಳ ಒಟ್ಟುತ್ಪಾದನೆ ಹೆಚ್ಚಿಗೆ ಇದೆಯೋ ಆ ರಾಜ್ಯಗಳಿಗೇ ವಿದೇಶಿ ನೇರ ಹೂಡಿಕೆ ದೊಡ್ಡ ಪ್ರಮಾಣದಲ್ಲಿ ಹರಿದುಬರುತ್ತಿದೆಯಂತೆ.

ಈ ಅಧ್ಯಯನದ ಪ್ರಕಾರ ಉತ್ತರ ಪ್ರದೇಶ, ಮಹಾರಾಷ್ಟ್ರ, ಪ.ಬಂಗಾಳ, ಗುಜರಾತ್, ಆಂಧ್ರಪ್ರದೇಶ, ತಮಿಳುನಾಡು, ಕರ್ನಾಟಕ, ರಾಜಸ್ತಾನ ಮತ್ತು ಮಧ್ಯಪ್ರದೇಶಗಳಿಗೆ ವಿದೇಶಿ ನೇರ ಹೂಡಿಕೆಗಳು ಬರುತ್ತಿವೆಯಂತೆ, ಬೇರೆ ರಾಜ್ಯಗಳಿಗೆ ಇಲ್ಲ.

ವಿದೇಶಿ ನೇರ ಹೂಡಿಕೆ ಬಾರದ ರಾಜ್ಯಗಳ ಅಭಿವೃದ್ಧಿ ಏನಾಗಬೇಕು.?

ಸಾಲದ ಹಾಲೋಗರ

ಹಣಕಾಸು ವಲಯದ ಉದಾರೀಕರಣದ ಮೂಲಕ ಜನರ ಸಾಲದ ಹೊರೆಯನ್ನು ಸರ್ಕಾರ ಹೆಚ್ಚು ಮಾಡಿದೆ. ಇದರ ಪರಿಣಾಮ ನೋಡಿ: 2005 ರ ಮಾರ್ಚಿಗೆ ಕೊನೆಗೊಂಡ ಹಣಕಾಸು ಸಾಲಿನಲ್ಲಿ ಕುಟುಂಬಗಳ ನಿವ್ವಳ ಉಳಿತಾಯದ ಪ್ರಮಾಣ ತೀವ್ರವಾಗಿ ಕುಸಿದು ಬಿದ್ದಿದೆ.

ಹೀಗೆ ಉಳಿತಾಯ 1996 ರಲ್ಲಿ ಒಮ್ಮೆ ಕುಸಿದಿತ್ತು. ಈಗ ಅದರ ಪುನರಾವರ್ತನೆ ಆಗಿದೆ. ಇದೇ ಸಮಯದಲ್ಲಿ ಋಣ ಶೇ 65 ರ ಪ್ರಮಾಣದಲ್ಲಿ ಬೆಳೆದಿದೆಯಂತೆ. ಸಾಲ ಈ ಪ್ರಮಾಣದಲ್ಲಿ ಬೆಳೆದಿರುವುದರಿಂದಲೇ ನಿವ್ವಳ ಉಳಿತಾಯ ಕುಸಿದಿರುವುದು.

ಪಾಶ್ಚಾತ್ಯ ದೇಶದ ಕೊಳ್ಳುಬಾಕ ಸಂಸತಿಯನ್ನೇ ಉದಾರೀಕರಣ ದೊಡ್ಡ ಪ್ರಮಾಣದಲ್ಲಿ ಬೆಳೆಸುತ್ತಿರುವುದರಿಂದ ಎಲ್ಲವನ್ನೂ ಸಾಲ ಮಾಡಿಯಾದರೂ ಕೊಳ್ಳಬೇಕೆಂಬ ಪ್ರವೃತ್ತಿ ಮಧ್ಯಮ ವರ್ಗದಲ್ಲಿ ಬೆಳೆಯುತ್ತಿದೆ. ಇಂತಹ ಬೆಳವಣಿಗೆಯಿಂದಾಗಿಯೇ ಸಾಲ ಹೆಚ್ಚಾಗಿ ಉಳಿತಾಯ ಕುಸಿದಿರುವುದು ವಿವಿಧ ರೀತಿಯಲ್ಲಿ ಉಳಿತಾಯವಾದರೆ ಈ ಉಳಿತಾಯ ಹಣ ಹೂಡಿಕೆಗೆ ದೊರೆಯುತ್ತದೆ. ಕೊಳ್ಳುಬಾಕ ಸಂಸತಿಯಿಂದಾಗಿ ಹಣ ಬಂಡವಾಳಿಗರ ಕೈಗೆ ಸೇರಿ ಅವರ ಬಂಡವಾಳದ ವೃದ್ಧಿಯಾಗುತ್ತದೆ. ಆದ್ದರಿಂದಲೇ ಇಂತಹ ಉದಾರೀಕರಣವನ್ನು ಬಂಡವಾಳಿಗರು ಉದ್ದೇಶಪೂರ್ವಕವಾಗಿ ಬೆಳಸುತ್ತಿರುವುದು.



ಸಾಲ ಹೆಚ್ಚಳದಿಂದಾಗಿ ಜನರ ಜೀವನಮಟ್ಟ ಸುಧಾರಿಸಿದೆ ಎಂದೂ ಇವರು ವಾದ ಮಾಡುತ್ತಾರೆ. ಆದರೆ ಈ ಕೊಳ್ಳುಬಾಕ ಸಂಸತಿಯ ಲಾಭ ಪಡೆದವರು ಬಹಳ ಅಲ್ಪ ಪ್ರಮಾಣದ ಪಟ್ಟಣದ ಜನಗಳು ಎಂಬುದನ್ನು ಮರೆಯಲಾಗದು.

ದೇಶದ ಶೇ 70 ರಷ್ಟು ಜನ ಕೃಷಿಯನ್ನು ಅವಲಂಬಿಸಿದ್ದಾರೆ ಮತ್ತು ದೇಶದ ಕೃಷಿ ಹಿಂಜರಿತವನ್ನು ಅನುಭವಿಸುತ್ತಿದೆ ಎಂಬುದನ್ನು ಗಮನದಲ್ಲಿರಿಸಿಕೊಂಡರೆ ಇಂತಹ ಸಾಲದ ಬೆಳವಣಿಗೆಯ ಲಾಭ ಎಷ್ಟು ಜನರಿಗೆ ದೊರೆಯುತ್ತಿದೆ ಎಂಬುದು ಸ್ಪಷ್ಟವಾಗುತ್ತದೆ.

ಸರ್ಕಾರಿ ನ್ಯಾಯ ಬೆಲೆ ಅಂಗಡಿಗಳಲ್ಲಿ ಏನೇನು ಸಿಗಬೇಕು?

ಪಕ್ಷದ ರಾಷ್ಟ್ರವ್ಯಾಪಿ ಪ್ರಚಾರಾಂದೋಲನಕ್ಕೆ ಪೂರಕವಾಗಿ ರೇಷನ್ ವ್ಯವಸ್ಥೆ ಕುರಿತ ಲೇಖನಗಳನ್ನು ಈಗಾಗಲೇ ಪತ್ರಿಕೆಯಲ್ಲಿ ಓದಿದ್ದೀರಿ. ಜನಪರವಾದ ಪಡಿತರ ವ್ಯವಸ್ಥೆ ಇರುವ ರಾಜ್ಯಗಳಲ್ಲಿ ಜನರಿಗೆ ಅಗತ್ಯವಾದ ಏನೆಲ್ಲಾ ವಸ್ತುಗಳನ್ನು ವಿತರಿಸಲಾಗುತ್ತಿದೆ ಮತ್ತು ಏನೆಲ್ಲಾ ವಸ್ತುಗಳನ್ನು ವಿತರಿಸಿವುದು ಅಗತ್ಯ ಎಂಗ ಬಗ್ಗೆ ಈ ಲೇಖನದಲ್ಲಿ ವಿವರಿಸಲಾಗಿದೆ.



ಸರ್ಕಾರಿ ನ್ಯಾಯ ಬೆಲೆ ಅಂಗಡಿಗಳಲ್ಲಿ ಈಗ ಸಿಗುವುದು ಕೆಲವೇ ವಸ್ತುಗಳು ಮತ್ತು 'ರೇಷನ್ ಬಂದಿಲ್ಲ', 'ರೇಷನ್ ಸ್ಟಾಕಿಲ್ಲ' ಸಿದ್ಧ ಉತ್ತರಗಳು.

ಇನ್ನೂ ಹೆಚ್ಚಿಗೆ ಎಂದರೆ ಆಹಾರ ವಸ್ತುಗಳಾದ ಅಕ್ಕಿ-ಗೋಧಿಯ ಜೊತೆಗೆ ಸಾಕಷ್ಟು ಕಸ, ಕಲ್ಲು, ಮಣ್ಣು, ಹೊಟ್ಟು ಸಿಗಬಹುದು.

ಎಷ್ಟೋ ಪ್ರದೇಶದಲ್ಲಿ ಜನರಿಗೆ ಸೀಮೆಎಣ್ಣೆ. ಯಾವಾಗ, ಯಾರಿಗೆ ಕೊಡಲಾಯಿತು ಎಂಬುದು ಗೊತ್ತಾಗುವುದಿಲ್ಲ. ಎಲ್ಲ 'ಮಾಯಾಜಾಲ'. ಯಾವಾಗಲೋ ಬಂದು ನಾಲ್ಕು ಜನರಿಗೆ ಅಳೆದು-ಸುರಿದು ನೊರೆ ತುಂಬಿಸಿ ಅರೆಬರೆ ಹನಿಸಿದರೆ ಮುಗಿಯಿತು. ಹೆಚ್ಚಿನವರಿಗೆ ಪಂಗನಾಮ. ಇದರ ಸಲುವಾಗಿ ಬೆಳಗಿನ ಜಾವ ಎರಡು ಗಂಟೆಗೆ - ಮೂರು ಗಂಟೆಗೇ ಎದ್ದು ಸಾಲಿನಲ್ಲಿ ನಿಲ್ಲಬೇಕು(ಇಲ್ಲವೇ ಡಬ್ಬ ಇಡಬೇಕು) ಮುಂಜಾವಿನಿಂದ ಎಣ್ಣೆ ಬರುವವರೆಗೆ ಜಾತಪಕ್ಷಿಯಂತೆ ಕಾಯಬೇಕು. ಆಳುವ ಸರ್ಕಾರಗಳು ಜನಪರವಾಗಿ ಯೋಚಿಸಿದರೆ ಪಡಿತರ ವ್ಯವಸ್ಥೆ ಮೂಲಕ ಈಗ ಕೊಡುತ್ತಿರುವ ಸೀಮೆಎಣ್ಣೆ-ಅಕ್ಕಿ-ಗೋಧಿ-ಸಕ್ಕರೆ, ಅಡಿಗೆಎಣ್ಣೆ ಮಾತ್ರವಲ್ಲ ಬಹಳಷ್ಟು ವಸ್ತುಗಳನ್ನು ಕೊಡಬಹುದು.

ಪಶ್ಚಿಮ ಬಂಗಾಳ ರಾಜ್ಯದಲ್ಲಿ ಜನರಿಗೆ ಒಟ್ಟಾರೆ ಹದಿನೈದು ಅಗತ್ಯ ವಸ್ತುಗಳು ದೊರೆಯುತ್ತವೆ. ಅಕ್ಕಿ-ಗೋಧಿ, ಎಣ್ಣೆ, ಸಕ್ಕರೆ ಅಲ್ಲದೆ ಸಾಂಬಾರ ಪುಡಿ(ಖಾರದ ಪುಡಿ), ಸ್ನಾನದ ಸಾಬೂನು, ಬಟ್ಟೆ ಒಗೆಯುವ ಸಾಬೂನು, ಬಿಸ್ಕತ್ತುಗಳು, ಅಯೋಡೀಕೃತ ಉಪ್ಪು, ತುಪ್ಪ, ಮೇಣದ ಬತ್ತಿ, ಬೆಂಕಿ ಪೊಟ್ಟಣ, ಬಟ್ಟೆಗಳು, ಜನತಾ ಸೀರೆ ಮತ್ತು ದೋತಿಗಳು ಮತ್ತು ಶಾಲಾ ಮಕ್ಕಳ ನೋಟ್ ಪುಸ್ತಕಗಳು ಹೀಗೆ ಒಂದು ಕುಟುಂಬದ ಹಲವು ಅಗತ್ಯಗಳನ್ನು ಪಡಿತರದ ಮೂಲಕ ಪೂರೈಸಲಾಗುವುದು.

ಕೇರಳ ಎಡರಂಗ ಸರ್ಕಾರ ಜಾರಿಗೆ ತಂದ ಮತ್ತೊಂದು ಯಶಸ್ವಿ ಪ್ರಯೋಗವು ಇಲ್ಲಿ ಗಮನಾರ್ಹ. ಹಬ್ಬಗಳು ಉತ್ಸವ ಮುಂತಾದ ಸಂದರ್ಭಗಳಲ್ಲಿ ಸೊಪ್ಪು - ತರಕಾರಿಗಳ ಬೆಲೆಗಳು ಏರುವುದು ಸಾಮಾನ್ಯವಲ್ಲವೇ? ಆದರೆ ಕೇರಳದಲ್ಲಿ ಬಹುಪಾಲು ಹೀಗಾಗುವುದಿಲ್ಲ. ಏಕೆಂದರೆ ಅಂತಹ ಹಬ್ಬಗಳ ಸಂದರ್ಭದಲ್ಲಿ ಸ್ಟೋರ್‌ಗಳು ಎಂದು ಕರೆಯಲಾಗುವ ಅಂಗಡಿಗಳಲ್ಲಿ ನಿಯಂತ್ರಿತ ದರಗಳಲ್ಲಿ ತರಕಾರಿ, ಸೊಪ್ಪುಗಳನ್ನು ಮಾರಲಾಗುತ್ತದೆ.

ಮನಸ್ಸಿದ್ದಲ್ಲಿ ಮಾರ್ಗ ಇದೆ. ಜನರಿಗೆ ರಿಯಾಯಿತಿ ದರದಲ್ಲಿ ರೇಷನ್ ಏಕೆ ಕೊಡಬೇಕು. ಮುಕ್ತ ಮಾರುಕಟ್ಟೆಯಲ್ಲಿ ಕೊಂಡುಕೊಳ್ಳಲಿ ಎನ್ನುವ ಜಾಗತೀಕರಣವನ್ನು ಒಪ್ಪಿಕೊಂಡವರಿಗೆ- ಕೊಡುತ್ತಿರುವ ವಸ್ತುಗಳನ್ನು ಕಡಿತ ಮಾಡುವುದು ಹೇಗೆ, ಬೆಲೆ ಏರಿಸುವುದು ರೇಷನ್ ಕಾರ್ಡುಗಳ ಸಂಖ್ಯೆ ಕಡಿತಗೊಳಿಸುವುದು ಹೇಗೆ ಎಂಬುದೇ ಚಿಂತೆ. ಇನ್ನಷ್ಟು ಹೆಚ್ಚು ವಸ್ತುಗಳ ವಿತರಣೆಯ ಬಗೆಗೆ ಯೋಚಿಸಲು ಪುರುಸೊತ್ತೆಲ್ಲಿದೆ?

ತಿದ್ದುಪಡಿ

- ಪತ್ರಿಕೆಯ 36 ರ ಸಂಚಿಕೆಯಲ್ಲಿ ಸೆಪ್ಟೆಂಬರ್ 29 ರ ಮುಷ್ಕರದ ಬಗೆಗಿನ ಲೇಖನದಲ್ಲಿ 'ವಿವಿಧ ಕೇಂದ್ರ ಕಾರ್ಮಿಕ ಸಂಘಟನೆಗಳು' ಎಂಬುದರ ಬದಲು 'ವಿದೇಶಿ ಕೇಂದ್ರ ಕಾರ್ಮಿಕ ಸಂಘಟನೆಗಳು' ಎಂದಾಗಿದೆ.
- ಸಂಚಿಕೆ 37 ರ 'ಶ್ರೀರಾಮಪುರದಲ್ಲಿ ಸ್ವಾತಂತ್ರ್ಯ ದಿನಾಚರಣೆ' ಲೇಖನದಲ್ಲಿ 'ಶ್ರೀರಾಮಪುರ ಪ್ರದೇಶ' ಎಂಬುದರ ಬದಲು ಶ್ರೀರಾಮಪುರ ಪರದೇಶ ಎಂದಾಗಿದೆ.
- ಸರ್ಕಾರಿ ಭೂಮಿ ಬಡವರಿಗೆ ಸಿಗಲಿ ಎಂಬ ಲೇಖನದಲ್ಲಿ '1936 ರಲ್ಲಿ ಸ್ಥಾಪನೆಯಾದ ಅಖಿಲ ಭಾರತ ಕಿಸಾನ್ ಸಭಾ' ಎಂಬ ಬದಲಿಗೆ '1396 ರಲ್ಲಿ ಸ್ಥಾಪನೆಯಾದ .....' ಎಂದಾಗಿದೆ.

ಆಗಿರುವ ತಪ್ಪುಗಳಿಗೆ ವಿಷಾದಿಸುತ್ತೇವೆ.

- ಸಂ.

ರಕ್ತದಲ್ಲಿ ಅದ್ದಿದ ಇರಾಕ್ ಸಂವಿಧಾನ

ಶರತ್‌ಚಂದ್ರ

ಅಮೇರಿಕನ್ ಬ್ರಿಟಿಷ್ ಟ್ಯಾಂಕು-ಕ್ಷಿಪಣಿಗಳ ಬಲದ ಮೇಲೆ ನಿಂತಿರುವ ಇರಾಕಿನ ಪಾರ್ಲಿಮೆಂಟು ಒಂದು ಹೊಸ ಸಂವಿಧಾನ ಬಿಡುಗಡೆ ಮಾಡಿದೆ. ವಿದೇಶಿ ಸೈನ್ಯದ ಅಧೀನದಲ್ಲಿರುವ ದೇಶ ತನಗೊಂದು ಸಂವಿಧಾನ ಬರೆದುಕೊಳ್ಳುವುದೇ ದೊಡ್ಡ ಜೋಕು. ಸಾಲದೆಂಬಂತೆ ಈ ಸಂವಿಧಾನ ಇಸ್ಲಾಮಿಕ್ ಮೂಲಭೂತವಾದಿಯಾಗಿದ್ದು ಜನಾಂಗೀಯ ವೈಷಮ್ಯಗಳನ್ನು ವಿಷಮಗೊಳಿಸಿ ದೇಶವೇ ಒಡೆದು ಹೋಗುವಂತೆ ಮಾಡುತ್ತದೆ ಎಂಬ ಆತಂಕ ಹಬ್ಬಿದೆ. ನೆರೆಯ ದೇಶಗಳಲ್ಲೂ, ಇರಾಕ್ ಒಡೆದು ಹೋಗಿ, ಆ ವಿಷ ಎಲ್ಲಾ ದೇಶಗಳಿಗೂ ಹರಡಬಹುದು ಎಂಬ ತೀವ್ರ ಆತಂಕ ಹರಡಿದೆ. ಈ ಸಂವಿಧಾನದ ಮೇಲೆ ಅಕ್ಟೋಬರ್‌ನಲ್ಲಿ ಜನಮತಸಂಗ್ರಹ ಬೇರೆ ಹಮ್ಮಿಕೊಂಡಿದ್ದು ಸಂವಿಧಾನ ಇರಾಕಿ ಮತ್ತು ಇಡೀ ಪ್ರದೇಶದ ಜನತೆ ಮೇಲೆ ಮಾಡಿದ ಕ್ರೂರ ಜೋಕ್‌ನಂತೆ ಕಾಣುತ್ತಿದೆ.

ಇರಾಕ್ ಸಂವಿಧಾನವನ್ನು ಕೊನೆಗೂ ಇರಾಕಿ ಪಾರ್ಲಿಮೆಂಟು ಅಂಗೀಕರಿಸಿ, ಪ್ರಕಾಶನ ಮಾಡಿದೆ. ಅಕ್ಟೋಬರ್‌ನಲ್ಲಿ ಈ ಬಗ್ಗೆ ಜನಮತಸಂಗ್ರಹ ನಡೆಯಲಿದೆ. ಸಂವಿಧಾನದ ಹಲವು ಅಂಶಗಳ ಬಗ್ಗೆ ನಡೆದ ದೀರ್ಘ ಚರ್ಚೆ ತೀರಾ ಜನಾಂಗೀಯ ಆಧಾರದ ಮೇಲೆ ಆಗಿದ್ದು, ಅದು ಅತ್ಯಂತ ವಿಚ್ಛಿದ್ರಕಾರಿಯಾಗಿದ್ದು ಒಂದು ಹೊಸ ಆಧುನಿಕ ದೇಶ ಕಟ್ಟುವ ಧೋರಣೆ ಅಲ್ಲಿ ಇರಲಿಲ್ಲ. ಶಿಯಾ, ಸುನ್ನಿ ಕುರ್ದಿಶ್, ತುರ್ಕಿ, ಕ್ರಿಶ್ಚಿಯನ್ ಇವರೆಲ್ಲರ ಜನಾಂಗೀಯ ಆಕಾಂಕ್ಷೆಗಳನ್ನು (ಅಥವಾ ಅವರ ನೆಲೆ ಇಲ್ಲದ ನಾಯಕರ ಮಹತ್ವಾಕಾಂಕ್ಷೆಗಳನ್ನು) ಈಡೇರಿಸುವುದು ಹೇಗೆ ಎಂಬುದೆ ಚರ್ಚೆಯ ವಿಷಯವಾಗಿತ್ತು. ಅದರಲ್ಲೂ ಎಷ್ಟು ಸಹಮತದ ಅಭಾವ ಇತ್ತೆಂದರೆ, ಅಧ್ಯಕ್ಷ ಬುಶ್ ಈ ನಾಯಕರಿಗೆ ಫೋನು ಮಾಡಿ ಬೆದರಿಕೆ ಹಾಕಿದ ಮೇಲೆ ಸಂವಿಧಾನ ಅಂಗೀಕಾರವಾದದ್ದು.

ವಿದೇಶಿ ಸೈನ್ಯ ಮತ್ತು ಸಂವಿಧಾನ

ಎಲ್ಲರಿಗೂ ಗೊತ್ತಿರುವ ಹಾಗೆ ವಿದೇಶಿ ಸೈನ್ಯಗಳು ಇರುವ ದೇಶದಲ್ಲಿ ಸಂವಿಧಾನ ರಚಿಸುವುದು ಎಂಬುದೇ ದೊಡ್ಡ ಜೋಕು. ಪ್ರಜಾಸತ್ತಾತ್ಮಕ ಜನತೆ ಪ್ರಜಾಸತ್ತಾತ್ಮಕ ಸಂವಿಧಾನ ರಚಿಸುವ ಸ್ಥಿತಿ ಇದ್ದರೆ, ವಿದೇಶಿ ಸೈನ್ಯ ಯಾಕೆ ಇರಬೇಕು? ಸಂವಿಧಾನ ರಚಿಸ ಹೊರಟಿರುವ ನಾಯಕರುಗಳು ರಾಜಧಾನಿಯ 'ಸುರಕ್ಷಿತ' 'ಹಸಿರು ಪ್ರದೇಶ'ವನ್ನು, ಜಗತ್ತಿನ ಅತ್ಯಂತ ಪ್ರಬಲ ಸೈನ್ಯ ತನ್ನ ನೆಲೆ ಬಿಟ್ಟು ಕದಲಲು ಸಾಧ್ಯವಿಲ್ಲದ ಪರಿಸ್ಥಿತಿ ಇದೆ ಇರಾಕ್‌ನಲ್ಲಿ. ವಿದೇಶಿ ಸೈನ್ಯ ಮತ್ತು ಅವರ ರಕ್ಷಣೆಯಲ್ಲಿ ಬದುಕಿರುವ 'ಸ್ವದೇಶಿ' ಸರ್ಕಾರದ ವಿರುದ್ಧ ಹೋರಾಡುತ್ತಿರುವ ಬಂಡುಕೋರರು ದಿನಾ ಸ್ಫೋಟಗಳನ್ನು ನಡೆಸುತ್ತಿರುವ ಸ್ಥಿದಿದೆ. ಇಂತಹ ಸಂದರ್ಭದಲ್ಲಿ ಸಂವಿಧಾನದ ಬಗ್ಗೆ ಚರ್ಚೆ ನಡೆಸುವುದು ಹಾಸ್ಯಾಸ್ಪದ.

ಇಸ್ಲಾಮಿಕ್ ಸಂವಿಧಾನ

ಮೊದಲನೆಯದಾಗಿ ಇರಾಕಿ ಪಾರ್ಲಿಮೆಂಟು ಅಂಗೀಕರಿಸಿರುವ ಸಂವಿಧಾನ ಮೂಲಭೂತವಾದಿ ಇಸ್ಲಾಮಿಕ್ ಸಂವಿಧಾನ, ಇಸ್ಲಾಮ್ ದೇಶದ ಅಧಿಕೃತ ಧರ್ಮ ಮಾತ್ರವಲ್ಲ, ಇಸ್ಲಾಮಿಕ್ ನಿಯಮಗಳನ್ನು ಮೀರುವ ಯಾವುದೇ ಕಾನೂನು ಮಾಡಲು ಸಾಧ್ಯವಿಲ್ಲ ಎಂದು ಸಂವಿಧಾನ ಹೇಳುತ್ತದೆ. ಆಧುನಿಕ ಅವಧಿಯಲ್ಲಿ ಎಂದೂ ಧರ್ಮ ಮತ್ತು ರಾಜಕಾರಣ ಮಿಶ್ರ ಮಾಡದ ದೇಶದಲ್ಲಿ ಇದು ಹಾಸ್ಯಾಸ್ಪದ. ಇದು ಇರಾಕ್‌ನ ಬಹುಸಂಖ್ಯಾತ ಜನತೆಯ ಕಾಳಜಿ ಅಲ್ಲ, ಇರಾನ್ ಪರವಾದ ಕೆಲವು ಶಿಯಾ ಧಾರ್ಮಿಕ ನಾಯಕರ ಆಕಾಂಕ್ಷೆ ಅಷ್ಟೆ.

ಇರಾಕಿ ಸಂವಿಧಾನದ ವಿಚಿತ್ರ 'ಫೆಡರಲ್' ಸ್ವರೂಪ ಸಹ ಇಂದಿನ ಪರಿಸ್ಥಿತಿಯಲ್ಲಿ ವಿಚ್ಛಿದ್ರಕಾರಕ ಆಗಬಹುದು. ಜನಾಂಗಿಯ ಆಧಾರದ ಮೇಲೆ ಸ್ವಾಯತ್ತತೆ ದೇಶವನ್ನು ಒಡೆದು ಹಾಕುವ ಮಟ್ಟದಲ್ಲಿ ಇದೆ. ಕುರ್ದಿಶ್ ಪ್ರದೇಶಗಳಿಗೆ ಮೊದಲೇ ಆಶ್ವಾಸನೆಗಳನ್ನು ಈಡೇರಿಸುವ ತರಾತುರಿಯಲ್ಲಿ, ಎಲ್ಲಾ ಪ್ರಮುಖ ಜನಾಂಗಗಳಿಗೆ ಸ್ವಾಯತ್ತತೆ ನೀಡಲಾಗಿದೆ. ಕುರ್ದಿಶ್, ಶಿಯಾ, ಸುನ್ನಿ ಹೀಗೆ ಸ್ವಾಯತ್ತ ಪ್ರಾಂತ್ಯಗಳಿರುತ್ತವೆ. ಮಾತ್ರವಲ್ಲ, ಆ ಪ್ರದೇಶದ ನೈಸರ್ಗಿಕ ಸಂಪತ್ತು ಬೆಳೆಸಲು ಪ್ರಾಂತೀಯ ಸರ್ಕಾರಗಳಿಗೆ ಹಕ್ಕು ಇರುತ್ತದೆ. ಈಗಿರುವ ತೈಲ ಬಾವಿಗಳ ಒಡೆತನ ಮತ್ತು ಸಂಪತ್ತು ಕೇಂದ್ರಸರ್ಕಾರದ್ದಾಗಿದ್ದರೂ, ಹೊಸ ತೈಲ ಸಂಪತ್ತು ಬೆಳೆಸುವ ಬಗ್ಗೆ ಸಂವಿಧಾನ ಅಸ್ಪಷ್ಟವಾಗಿದೆ. ಫೆಡರೇಷನ್ ಯಾವುದೇ ಜನಾಂಗೀಯ ಪ್ರಾಂತ್ಯಕ್ಕೆ ಇಷ್ಟವಾಗದಿದ್ದರೆ ಸ್ವತಂತ್ರವಾಗುವ ಬಗ್ಗೆ ಅಸ್ಪಷ್ಟವಾದರೂ ಸಂವಿಧಾನದಲ್ಲಿ ಅವಕಾಶ ಇದೆ.

ದೇಶ ಒಡಕಿಗೆ ಆಹ್ವಾನ

ಒಟ್ಟಾರೆಯಾಗಿ ಸಂವಿಧಾನದಲ್ಲಿ ಬೇಕೆಂತಲೇ ಕೇಂದ್ರ ಸರ್ಕಾರವನ್ನು ದುರ್ಬಲಗೊಳಿಸಲಾಗಿದೆ. ಇರಾಕ್ ಒಡೆದು ಜನಾಂಗೀಯ ಆಧಾರಿತ ಪ್ರಾಂತ್ಯಗಳು ಸ್ವತಂತ್ರವಾದರೆ, ಅವನ್ನು ನಿಯಂತ್ರಿಸುವುದು ಹೆಚ್ಚು ಸುಲಭವಾದೀತು ಎಂಬುದು ಅಮೇರಿಕನ್ನರ ಹವಣಿಕೆ. ಇರಾಕ್‌ನ ಹೊಸ ಕುರ್ದಿಶ್ ಸರ್ಕಾರದಲ್ಲಿ ಕುರ್ದಿಶ್ ನಾಯಕರಿಗೆ ಇರುವ ಪ್ರಭಾವ, ಅಮೇರಿಕ ಅವರಿಗೆ ಕೊಡುತ್ತಿರುವ ಕುಮ್ಮಕ್ಕು, ಹಿಂದಿನಿಂದಲೂ ಅವರ ಜತೆ ಅಮೇರಿಕಾದ ನಿಕಟ ಸಂಬಂಧ ಇವೆಲ್ಲಾ ಸಂವಿಧಾನದ ಬಗ್ಗೆ ಇನ್ನಷ್ಟು ಅಪನಂಬಿಕೆ ಹುಟ್ಟಿಸಿದೆ. 1998ರಲ್ಲೇ ಅಮೇರಿಕ ಕುರ್ದಿಶ್ ನಾಯಕರ ಜತೆ ಮಾಡಿಕೊಂಡ ಒಪ್ಪಂದದ ಪ್ರಕಾರ, ಕುರ್ದಿಶ್ ಪ್ರದೇಶದ ತೈಲ ಮತ್ತು ಪ್ರಾಕೃತಿಕ ಗ್ಯಾಸ್ ಸಂಪನ್ಮೂಲಗಳ ಮೇಲೆ 40 ವರ್ಷಗಳವರೆಗೆ ಒಡೆತನ ಕೊಟ್ಟಿದೆ. ಇರಾಕಿ ಸಂವಿಧಾನ ಕರಡು ಈ ಒಪ್ಪಂದಕ್ಕೆ ಕಾನೂನುಬದ್ಧತೆ ಒದಗಿಸಿದೆ ಎನ್ನಲಾಗಿದೆ. ತುರ್ಕಿಯ ಗಡಿ ಪ್ರದೇಶದಲ್ಲಿರುವ ಕಿರ್‌ಕುಕ್ ಮತ್ತು ಮತ್ತಿತರ ತೈಲಪ್ರದೇಶಗಳನ್ನು ಕುರ್ದಿಶ್ ಪ್ರಾಂತ್ಯದಲ್ಲಿ ಸೇರಿಸಬೇಕೆಂದು ಕುರ್ದಿಶ್ ನಾಯಕರು ಒತ್ತಾಯಿಸುತ್ತಿದ್ದಾರೆ. ಅಲ್ಲದೆ ಕುರ್ದಿಶ್ ಜನಕ್ಕೆ ಹೊಸ ಇರಾಕಿನ ಕೇಂದ್ರ ಸರ್ಕಾರದ ವರ್ತನೆ ಇಷ್ಟವಾಗಿದಿದ್ದರೆ, 2008ರ ಹೊತ್ತಿಗೆ ಸ್ವತಂತ್ರವಾಗುವ ಅಧಿಕಾರ ಇರಬೇಕೆಂದು ಕುರ್ದಿಶ್ ನಾಯಕರು ಒತ್ತಾಯಿಸುತ್ತಿದ್ದಾರೆ. ಇದು ಕುರ್ದಿಶ್ ಪ್ರದೇಶದಲ್ಲಿರುವ ಇರಾಕಿ ಮೂಲದ ತುರ್ಕಿ ಜನಾಂಗದವರಿಗೆ (ತುರ್ಕೋಮನ್ ಎನ್ನುತ್ತಾರೆ



ಅವರಿಗೆ) ಮತ್ತು ಅರಬ್ ಅಲ್ಪಸಂಖ್ಯಾತರಿಗೆ ಗಾಬರಿ ಹುಟ್ಟಿಸಿದೆ. ಕುರ್ದಿಶ್ ಪ್ರಾಂತ್ಯ ಸ್ವತಂತ್ರವಾದರೆ, ಎಲ್ಲಾ ಅಲ್ಪಸಂಖ್ಯಾತರನ್ನು ಓಡಿಸಿಬಿಡಬಹುದು ಅಥವಾ ನರಮೇಧ ನಡೆಸಬಹುದು ಎಂಬ ಆತಂಕ ಹರಡಿದೆ.

ಹಿಂದೆ ಇರಾಕ್‌ನ ಆಳುವ ಪ್ರಬಲ ಜನಾಂಗವಾಗಿದ್ದ ಸುನ್ನಿ ಜನಾಂಗದವರಿಗೆ ಹೊಸ ಸಂವಿಧಾನ ತಮಗೆ ಅನ್ಯಾಯ ಮಾಡುತ್ತದೆ ಎಂದು ಅನ್ನಿಸಿದೆ, ಶಿಯಾ, ಸುನ್ನಿ, ಕುರ್ದಿಶ್ ಪ್ರಾಂತ್ಯಗಳಲ್ಲಿ ಸುನ್ನಿ ಪ್ರಾಂತ್ಯದಲ್ಲೇ ಅತ್ಯಂತ ಕಡಿಮೆ (ಇಲ್ಲವೇ ಇಲ್ಲ ಎನ್ನಬಹುದಾದದ್ದು) ತೈಲ ಸಂಪತ್ತು ಇರುವುದು. ಆದ್ದರಿಂದ ಇದು ಬಡ ಪ್ರಾಂತ್ಯವಾಗಿರುತ್ತದೆ. ಶಿಯಾ ಅಥವಾ ಕುರ್ದಿಶ್ ಪ್ರಾಂತ್ಯಗಳು ಪ್ರತ್ಯೇಕವಾದರೆ ತಮ್ಮದು ಬರಡು ದೇಶವಾಗುತ್ತದೆ ಎಂಬ ಆತಂಕ ಸುನ್ನಿಗಳಲ್ಲಿ ಹರಡಿದೆ. ಇವೆಲ್ಲಾ ತೀವ್ರ ಆಂತರಿಕ ಯುದ್ಧಕ್ಕೆ ಎಡೆಕೊಡಬಹುದು ಎಂಬ ಆತಂಕ ಎಲ್ಲೆಡೆ ಹರಡಿದೆ.

ಇರಾಕ್ ನೆರೆಹೊರೆಯಲ್ಲಿ ಆತಂಕ

ಇರಾಕ್ ನೆರೆಹೊರೆಯಲ್ಲೂ (ಅಂದರೆ ಇಡೀ ಪಶ್ಚಿಮ ಏಶ್ಯಾ ಪ್ರದೇಶದಲ್ಲೇ) ಇರಾಕಿನ ಸಂವಿಧಾನದ ಸ್ವರೂಪದ ಬಗ್ಗೆ ತೀವ್ರ ಆತಂಕ ಹರಡಿವೆ. ತುರ್ಕಿ ತಮ್ಮ ಗಡಿ ಪ್ರದೇಶದಲ್ಲಿ ಕುರ್ದಿಶ್ ಸ್ವಾಯತ್ತ ಪ್ರಾಂತ್ಯ (ಮುಂದೆ ದೇಶವಾದರೂ ಆಗಬಹುದು)ದ ಬಗ್ಗೆ ಆತಂಕ. ತುರ್ಕಿಯಲ್ಲೂ ಇರುವ ಕುರ್ದಿಶ್ ಜನತೆ ಇಂತಹುದೇ ರಾಜಕೀಯ ಹಕ್ಕು ಕೇಳಬಹುದು ಎಂಬ ಆತಂಕ. ಕುರ್ದಿಶ್ ಪ್ರಾಂತ್ಯದಲ್ಲಿರುವ ತುರ್ಕಿನ ಅಲ್ಪಸಂಖ್ಯಾತರನ್ನು ಓಡಿಸಿ, ಅವರು ತುರ್ಕಿಗೆ ವಲಸೆ ಬಂದು ಭಾರಿ ಸಮಸ್ಯೆಯಾಗಬಹುದು ಎಂಬುದು ಅವರ ಆತಂಕ.

ಇನ್ನು ಇರಾಕ್‌ನ ಅರಬ್ ನೆರೆಯ ದೇಶಗಳು ಸುನ್ನಿ ಮತ್ತು ಅರಬರು ದುರ್ಬಲ ಅಲ್ಪಸಂಖ್ಯಾತರಾಗುವ ಮತ್ತು ಅದರಿಂದಾಗಿ ಒಡೆದು ಹೋಗುವ ಬಗ್ಗೆ ಆತಂಕಿತರಾಗಿದ್ದಾರೆ. ಮಾತ್ರವಲ್ಲದೆ ಧರ್ಮ-ಪಂಥ ಜನಾಂಗದ ಮೇಲೆ ಇರಾಕ್ ಹರಿದುಹಂಚಿಹೋದರೆ, ಅದರ ಪರಿಣಾಮ ನೆರೆಯ ತಮ್ಮ ದೇಶಗಳ (ಜೋರ್ಡಾನ್, ಅಲ್ಜಿರಿಯಾ, ಸಿರಿಯಾ, ಈಜಿಪ್ಟ್, ಸೌದಿ ಅರೇಬಿಯಾ ಇತ್ಯಾದಿ) ಮೇಲೂ ಆದೀತು ಎಂದು ಭಯಭೀತರಾಗಿದ್ದಾರೆ. ಇಡೀ ಅರಬ್ ಪ್ರದೇಶದಲ್ಲೇ ಭದ್ರತೆ, ಸಮೃದ್ಧಿಯ ಮತ್ತು ಅರಬ್ ರಾಷ್ಟ್ರೀಯತೆಯ ಆಗರವಾಗಿದ್ದ ಇರಾಕ್ ಒಡೆದು ಹೋಗುವುದು ಊಹಿಸಲಸಾಧ್ಯ ದುರಂತ. ಎಲ್ಲಾ ನೆರೆಹೊರೆಯ ದೇಶಗಳಲ್ಲಿ ಇರಾನ್ ಒಂದೇ ಇರಾಕ್ ಸಂವಿಧಾನದಿಂದ ಸಂತೋಷದಿಂದಿರುವುದು. ಕನಿಷ್ಠ ಇರಾನಿನ ಆಳುವ ಶಿಯಾ ಮುಲ್ಲಾಗಳು ತಮ್ಮಂತೆಯೇ ಧಾರ್ಮಿಕ ಮೂಲಭೂತವಾದ ಆಧಾರಿತ ಸಂವಿಧಾನ ಅಂಗೀಕರಿಸಿದ್ದಾರೆ ಎಂದು ಖುಷಿ ಪಡುತ್ತಿದ್ದಾರೆ.

ಇರಾಕಿನ ನೆರೆ ಹೊರೆಯಲ್ಲೂ ಅಷ್ಟೇ ತೀವ್ರ ಆತಂಕ ಹರಡಿದೆ. (ಬಾಕ್ಸ್ ನೋಡಿ) ನೆರೆಹೊರೆಯಲ್ಲಿ ತೀವ್ರ ಖಾರದ ಪ್ರತಿಕ್ರಿಯೆ ವ್ಯಕ್ತವಾಗಿದೆ. ಈ ನಡುವೆ ಇರಾಕಿ ಜನತೆ ಅಕ್ಟೋಬರ್ ಮಧ್ಯದಲ್ಲಿ ಈ ಸಂವಿಧಾನದ ಬಗ್ಗೆ ಜನಮತಸಂಗ್ರಹದಲ್ಲಿ ಭಾಗವಹಿಸಲಿದ್ದಾರೆ. ಹಲವು ತಾಕಲಾಟಗಳ ವಿಚಿತ್ರ ಕಿಚಡಿಯಾಗಿರುವ ಸಂವಿಧಾನದ ಬಗ್ಗೆ ಜನರಿಗೆ ಆಯ್ಕೆ ಇರುವುದು ಎರಡೇ - ಹೌದು ಅಥವಾ ಇಲ್ಲ ಎನ್ನಲು. ಸಂವಿಧಾನದ ಕರಡು ಯಾವುದೇ ರೀತಿಯಲ್ಲಿ ಇರಾಕಿ ಜನತೆಯ ಅಭಿಪ್ರಾಯದ ಅಭಿವ್ಯಕ್ತಿ ಆಗಿಲ್ಲ. ಸಂವಿಧಾನ ಬಗ್ಗೆ ಹಲವು ಆತಂಕಗಳು ಹಲವರಲ್ಲಿ ಹರಡಿರುವುದರಿಂದ ಜನಮತ ಸಂಗ್ರಹಕ್ಕೆ ಜನತೆ ಆಸಕ್ತಿ ತೋರಿದರೆ ತಿರಸ್ಕೃತವಾದರೂ ಆಶ್ಚರ್ಯವಿಲ್ಲ. ಬಹುಮತ ಬಂದರೂ ಈ ಸಂವಿಧಾನ ಇರಾಕನ್ನು ರಕ್ತದ ಮಡುವು ಮತ್ತು ದುರಂತದಿಂದ ಯಾವುದೇ ರೀತಿಯಲ್ಲಿ ಕಾಪಾಡಬಹುದು ಎಂದು ಯಾರಿಗೂ ನಂಬಿಕೆಯಿಲ್ಲ. ○

ಇರಾಕಿ ಸಂವಿಧಾನದ ಬಗ್ಗೆ ಅರಬ್ ಜಗತ್ತಿನಲ್ಲಿ ಆತಂಕ

ಇರಾಕಿ ಸಂವಿಧಾನದ ಬಗ್ಗೆ ಅರಬ್ ಜಗತ್ತಿನಲ್ಲಿ ಇರಾಕಿನ ನೆರೆಹೊರೆಯಲ್ಲಿ ತೀವ್ರ ಆತಂಕ ವ್ಯಕ್ತವಾಗಿದೆ. ಈ ದೇಶದ ನಾಯಕರು, ಪತ್ರಿಕೆಗಳು, ಸಾರ್ವಜನಿಕ ಅಭಿಪ್ರಾಯ ಪ್ರತಿನಿಧಿಸುವ ವ್ಯಕ್ತಿಗಳು ಖಾರವಾಗಿ ಪ್ರತಿಕ್ರಿಯಿಸಿದ್ದಾರೆ. ಕೆಲವು ಮಾದರಿಗಳು ಇಲ್ಲಿವೆ

■ "ಶಿಯಾ, ಸುನ್ನಿ, ಮುಸ್ಲಿಂ, ಕ್ರಿಶ್ಚಿಯನ್‌ಗಳ ನಡುವೆ ಈ ಒಡಕು ತರುವುದರಲ್ಲಿ ನನಗೆ ನಂಬಿಕೆ ಇಲ್ಲ. ಇದು ಇರಾಕ್‌ನಲ್ಲಿ ಮಾತ್ರವಲ್ಲ ಇಡೀ ಪ್ರದೇಶದಲ್ಲೇ ಅರಾಜಕತೆ ಮತ್ತು ಪ್ರಕ್ಷುಬ್ಧತೆಗೆ ಆಹ್ವಾನ ಕೊಟ್ಟಂತೆ....

- ಅಮರ್ ಮೌಸ್-
ಅರಬ್ ಪಾಸ್ ಸೆಕ್ರೆಟರಿ ಜನರಲ್
ಮತ್ತು ಮಾಜಿ ಈಜಿಪ್ಟ್ ವಿದೇಶ ಮಂತ್ರಿ

■ "ಪ್ರತ್ಯೇಕತಾವಾದಿ ಪ್ರಭುತ್ವ ಅಥವಾ ಪ್ರಭುತ್ವದ ಒಳಗೆ ಪ್ರತ್ಯೇಕತಾವಾದಿ ಪಾಳೆಯಗಳನ್ನು ನಿರ್ಮಿಸುವುದು ಇರಾಕ್ ಆತ್ಮಹತ್ಯೆ ಮಾಡಿಕೊಂಡಂತೆ.

- ಅಲ್ ಶರತ್ ಅಲ್ ಅಮನತ್
(ಅರಬ್ ಪತ್ರಿಕೆ)

■ "ಇರಾಕಿ ಸಂವಿಧಾನ..... ಕಾದಿರುವ ದುರಂತ..."

- ಸೌದಿ ಪತ್ರಿಕೆ 'ಅರಬ್ ನ್ಯೂಸ್'

■ ಈ ಸಂವಿಧಾನ... ಇರಾಕನ್ನು ಕುಲಗೆಡಿಸುವುದು. ಜಗತ್ತಿನ ಅತ್ಯಂತ ಪ್ರಕ್ಷುಬ್ಧ ಪ್ರದೇಶಗಳಲ್ಲಿ ಇರಾಕ್ ಸಮತೋಲನ ಮತ್ತು ಸುಭದ್ರತೆಯ ಪ್ರತೀಕವಾಗಿತ್ತು. ಪ್ರತ್ಯೇಕತೆ ಮತ್ತು ಹಿಂಸಾಚಾರದ ವೈರಸ್ ಇರಾಕ್‌ನ್ನು ಮಾತ್ರ ಕಾಡಿಸುವುದಿಲ್ಲ. ನೆರೆಹೊರೆಗೂ ಸಾಂಕ್ರಾಮಿಕದಂತೆ ಹರಡುವುದು...."

- ಅಲ್ ಕುದ್ಸ್ ಅಲ್ ಅರಬಿ
(ಪ್ಯಾಲೆಸ್ಟೇನಿಯನ್ ಪತ್ರಿಕೆ)

ಬುಶ್ 'ಮಾನಹಾನಿ' ಮಾಡಿದ ಕಟ್ರಿನಾ ಮತ್ತು ಸಿಂಡಿ

ಕಳೆದ ಕೆಲವು ವಾರಗಳಲ್ಲಿ ಸಿಂಡಿ ಮತ್ತು ಕಟ್ರಿನಾ ಅಧ್ಯಕ್ಷ ಬುಶ್‌ರ 'ಮಾನಭಂಗ' ಮಾಡಿದ್ದಾರೆ. ಸಾರ್ವಜನಿಕ ಅಭಿಪ್ರಾಯದಲ್ಲಿ ಎಂದೂ ಮುಟ್ಟದ ತಳವನ್ನು ಬುಶ್ ತಟ್ಟಿದ್ದಾರೆ. ಯಾರಿದು ಕಟ್ರಿನಾ ಮತ್ತು ಸಿಂಡಿ ಎಂದಿರಾ? ಕಟ್ರಿನಾ ಬಹಳ ಜನರಿಗೆ ಗೊತ್ತು. ಕಟ್ರಿನಾ ಅಮೆರಿಕದ ದಕ್ಷಿಣ ಕರಾವಳಿಗೆ ಹೊಡೆದ ಚಂಡಮಾರುತ.

ಸಿಂಡಿ ಶೀಹನ್, ಅಧ್ಯಕ್ಷ ಬುಶ್‌ರ ಟೆಕ್ಸಾಸ್ ಜಹಗೀರಿನ ಮುಂದೆ 'ಧರಣಿ' ಕೂತಿರುವ ವೃದ್ಧೆ. ಈಕೆ ಇರಾಕ್ ಯುದ್ಧದಲ್ಲಿ ಮಡಿದ ಯೋಧನೊಬ್ಬನ ತಾಯಿ. 'ಇರಾಕ್ ನಿಂದ ಪಡೆಗಳನ್ನು ವಾಪಸು ಕರೆಸಿ, ಮತ್ತು ನನಗೆ ನನ್ನ ಮಾತು ಹೇಳಲು ಅವಕಾಶ ಕೊಡಿ ಎಂದು ಈಕೆ ಹಲವು ವಾರಗಳು 'ಧರಣಿ' ಕೂತಿದ್ದಾಳೆ. ಆಕೆ ಜತೆ ನೂರಾರು, ಸಾವಿರಾರು ಯುದ್ಧ-ವಿರೋಧಿ ಚಳುವಳಿಗಾರರು ಸೇರುತ್ತಿದ್ದಾರೆ. ಆಕೆಯ ಛಲ, ಧೈರ್ಯದ, ನಿಲುವು ಅದು ಹೇಗೋ ಅಮೆರಿಕನ್ನರ ಮನಸೆಳೆದಿದೆ. ಆಕೆಯ ಧರಣಿಗೆ ತೀವ್ರ ಪ್ರತಿಸ್ಪಂದನ ದೊರಕಿದೆ. ಆಕೆಯ ಏಕಾಂಗಿ ಕಾರ್ಯಾಚರಣೆ ತಣ್ಣಗಾಗುತ್ತಿದ್ದ ಯುದ್ಧ-ವಿರೋಧಿ ಚಳುವಳಿಗೆ ಪುನಃ ಉತ್ಸಾಹ ತುಂಬಿದೆ. ಅಧ್ಯಕ್ಷ ಬುಶ್ ಮತ್ತು ಆತನ ಬಾಲಬಡುಕರನ್ನು ದಂಗು ಮಾಡಿದೆ. ಮೊದಮೊದಲು ಸಿಂಡಿಯ ಧರಣಿಯನ್ನು ನಿರ್ಲಕ್ಷ್ಯ ಮಾಡಿದ ಮಾಧ್ಯಮಗಳಿಗೆ ಇದು ನುಂಗಲಾರದ ತುತ್ತಾಗಿದೆ.

ಅಮೆರಿಕದ ವರ್ಣವ್ಯವಸ್ಥೆ, ಮನುಷ್ಯ ಪ್ರೇಮ ಇಲ್ಲದ ಕ್ರೂರ ವ್ಯವಸ್ಥೆಯನ್ನು ಬಯಲುಗೊಳಿಸಿದೆ. ಚಂಡಮಾರುತ 'ಕಟ್ರಿನಾ' ಹತ್ತು ಸಾವಿರ ಸಾವು, ಮುಳುಗುತ್ತಿರುವ ನ್ಯೂ ಓರ್ಲಿನ್ಸ್ ನಗರದಲ್ಲಿ ಹಿಂದೆ ಉಳಿದ ಒಂದು ಲಕ್ಷ ಜನದಲ್ಲಿ ಬಹುಸಂಖ್ಯಾತರು ಕರಿಯರು ಎಂಬುದು ಅಮೆರಿಕದ ಜನತೆಗೆ ನಡುಕ ತಂದಿದೆ. ಎಲ್ಲೋ ಮೂರನೇ ಜಗತ್ತಿನ ಬಡ ದೇಶಗಳ ಸ್ಥಿತಿ ತಮ್ಮ ದೇಶದಲ್ಲಿ ಕಂಡು ಅವರು ಅವಕ್ಕಾಗಿದ್ದಾರೆ. ಅಧ್ಯಕ್ಷ ಬುಶ್ ಮತ್ತು ಅವರ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದಾರೆ.

ಜೋಗಿಗಳ ಕುಟುಂಬಕ್ಕೆ ಸೇರಿದ ಮುಗ್ಧ ಯುವಕನೊಬ್ಬ ಬೆಂಗಳೂರಿಗೆ ಬಂದು ತನಗೆ ಇಷ್ಟವಿಲ್ಲದೆ ಪರಿಸ್ಥಿತಿ ಸನ್ನಿವೇಶಗಳ ಕಾರಣಕ್ಕಾಗಿ ದೊಡ್ಡ ರೌಡಿಯಾಗಿ ರೂಪುಗೊಳ್ಳುವುದೇ ಚಿತ್ರದ ಕತೆ. ಆತ ಬೆಂಗಳೂರಿಗೆ ಬರುವುದು, ತಾಯಿಯ ಮೇಲಿನ ಮಮತೆಯಿಂದ. ಕೊನೆಗೆ ಕೈಗೆ ಮಚ್ಚು ತೆಗೆದುಕೊಳ್ಳುವುದು ಸಹ ಬೆಂಗಳೂರಿಗೆ ಬಂದು ತನ್ನನ್ನು ಹುಡುಕುತ್ತಿರುವ ತಾಯಿಯನ್ನು ಪತ್ತೆ ಹಚ್ಚಲು, ಕೊನೆಗೂ ತಾಯಿಯ ಮುಖ ನೋಡಲಾಗದೆ ಆಕೆ ಮಗನ ಹುಡುಕಾಟದಲ್ಲೇ ಸಾಯುತ್ತಾಳೆ.

ಒಂದು 'ಅನಾಥ ಹೆಣ'ವಾಗಿ ಆಕೆಯ ಸಂಸ್ಕಾರ ವಾಗುತ್ತದೆ. ಅದನ್ನು ಸ್ವತಃ ಮಗನೇ ನೆರವೇರಿಸುತ್ತಾನೆ. ಆದರೆ ಸಂಸ್ಕಾರ ಮುಗಿಯುವವರೆಗೂ ಅದು ತನ್ನ ತಾಯಿ ಎಂದು ಗೊತ್ತಾಗುವುದಿಲ್ಲ. ಇದು ತಾಯಿ ಮಗನ ಪ್ರೀತಿಯ ಮತ್ತೊಂದು ಎಳೆ.

ತಾಯಿ ಮಗನ ನಡುವಿನ ಪ್ರೀತಿಯ ಭಾವನಾತ್ಮಕ ಸೆಳೆತಕ್ಕೆ ನೋಡುಗರನ್ನು ಸಿಲುಕಿಸಿ ತಾನು ನೀಡುತ್ತಿರುವ ಅಪಾಯಕಾರಿ ಸಂದೇಶದ ವಿಕೃತಿಯನ್ನು ಮರೆಮಾಚಿಸುವಷ್ಟು ಸೊಗಸಾಗಿದೆ ಚಿತ್ರದ ನಿರೂಪಣೆ.

ಉತ್ತಮವಾದ ಅಭಿನಯ, ಛಾಯಾಗ್ರಹಣ, ದಕ್ಷ ನಿರ್ದೇಶನದ ಈ ಚಿತ್ರ ಸಾಮಾನ್ಯ ವೀಕ್ಷಕರನ್ನು ಭಾವ ಪರವಶಗೊಳಿಸುವಲ್ಲಿ ಯಶಸ್ವಿಯಾಗುತ್ತದೆ.

ಅದರಲ್ಲಿಯೂ ಚಾಮರಾಜನಗರ ಪ್ರದೇಶದ ಜೋಗಿ ಕುಟುಂಬದ ಚಿತ್ರಣ, ತನ್ನ ನೈಜ ಮತ್ತು ಕಲಾತ್ಮಕ ಸೊಗಸಿಗಾಗಿ ಗಮನ ಸೆಳೆಯುತ್ತದೆ.

ಈ ಭಾಗದ ಗ್ರಾಮೀಣ ಭಾಷೆಯನ್ನೇ ಆಗಲಿ, ಹುಬ್ಬಳ್ಳಿ ಮುಸ್ಲಿಂನ ಪಾತ್ರದ ಭಾಷೆಯನ್ನೇ ಆಗಲಿ ಅಥವಾ ಬೆಂಗಳೂರು ರೌಡಿಲೋಕದ ಭಾಷೆಯನ್ನೇ ಆಗಲಿ ಚಿತ್ರದಲ್ಲಿ ನೈಜ ಸೊಗಡಿನೊಂದಿಗೆ ತರಲು ಸಾಕಷ್ಟು ಪರಿಶ್ರಮ ವಹಿಸಲಾಗಿದೆ.


ಚಿತ್ರದ ಇಂತಹ ಅಂಶಗಳೇ ಇದೊಂದು ಪಕ್ಕಾ ವ್ಯಾಪಾರಿ ಸೂತ್ರದ ಮಾಮೂಲಿ ಚಿತ್ರ ಎಂಬುದನ್ನು ಮುಸುಕು ಮಾಡುತ್ತವೆ.

ಅಸಂಭವನೀಯಗಳ ಕಂತೆ

ಅಮ್ಮ ತನ್ನ ಮಗ 'ಮಾದೇಸ'ನಿಗಾಗಿ ಬೆಂಗಳೂರಿಗೆ ಹುಡುಕಿಕೊಂಡು ಬಂದಾಗ, ಆಗಾಗಲೇ ಬೆಂಗಳೂರಿನ ದೊಡ್ಡ ರೌಡಿಯಾದ 'ಜೋಗಿ' (ಮಾದೇಸ)ಯನ್ನು ಸಂದರ್ಶಿಸಲು ಪದೇ ಪದೇ ಅವನನ್ನು ಭೇಟಿಯಾಗುವ ಪತ್ರಕರ್ತೆಯೇ ಆಕೆಗೆ ಸಿಗುತ್ತಾಳೆ. ಆಶ್ರಯ ನೀಡುತ್ತಾಳೆ. ಇಬ್ಬರೂ ಸೇರಿ 'ಮಾದೇಶ'ನ ಹುಡುಕಾಟ ಮುಂದುವರಿಸುತ್ತಾರೆ. ಆ ತಾಯಿ ಮಗನ ಫೋಟೋ ತೋರಿಸಿದರೂ ಪತ್ರಕರ್ತೆಗೆ ಮಾದೇಶನ ಗುರುತೇ ಸಿಗುವುದಿಲ್ಲ (ಜುಟ್ಟು ಮಾತ್ರ ಹೋಗಿರುತ್ತದೆ - ಹೆಸರು ಬದಲಾಗಿರುತ್ತದೆ) ಪರಸ್ಪರ ಹುಡುಕಾಟದಲ್ಲಿ ತಾಯಿ ಮತ್ತು ಮಗ ತೀರಾ ಹತ್ತಿರದಲ್ಲೇ ಸುಳಿದಾಡುತ್ತಿರುವಾಗ ಹತ್ತಕ್ಕೂ ಹೆಚ್ಚು ಭಾರಿ ಅವರು ಪರಸ್ಪರ ಭೇಟಿಯಾಗುವುದು ಅಥವಾ ಪರಸ್ಪರರ ಬಗೆಗೆ ತಿಳಿಯುವುದು ಆಕಸ್ಮಿಕ ಕಾರಣಗಳಿಗಾಗಿ ತಪ್ಪುತ್ತದೆ. ಮಗ ಕಾಣೆಯಾಗಿ ದ್ದಾನೆಂಬ ಸುದ್ದಿ ಇರುವ ಕರಪತ್ರ-ಪತ್ರಿಕಾ ಜಾಹಿರಾತು (ಆತನ ಫೋಟೋ ಸಹಿತವಾಗಿ) ಆತನ ಕೈಯಲ್ಲೇ-ಜೇಬಲ್ಲೆ ಇದ್ದರು ಆತ ಅದನ್ನು ನೋಡುವುದಿಲ್ಲ! ಇಂತಹ ಆಕಸ್ಮಿಕಗಳ ಸರಣಿಗೆ ಲೆಕ್ಕವೇ ಇಲ್ಲ.

ಕೊನೆಗೆ 'ಅನಾಥ ಹೆಣ'ದ ಸಂಸ್ಕಾರದಲ್ಲಿ ಕೈಜೋಡಿಸುವ ಜೋಗಿಯು ಸಂಸ್ಕಾರಕ್ಕೆ ಮುಂಚೆ ತನ್ನ ತಾಯಿಯ ಮುಖ ನೋಡುವುದು ಸಹ ಹಲವಾರು ಬಾರಿ ಆಕಸ್ಮಿಕ ಕಾರಣಗಳಾಗಿ ತಪ್ಪಿಹೋಗುತ್ತದೆ.

ಗಲ್ಲಾಪೆಟ್ಟಿಗೆಯ ಮೇಲೆ ಕಣ್ಣಿಟ್ಟ ಜೋಗಿ ಯಂತಹ ಒಂದು ವ್ಯಾಪಾರಿ ಚಿತ್ರದಲ್ಲಿ ಮಾತ್ರವೇ ಇಂತಹ ಸರಣೀ ಆಕಸ್ಮಿಕಗಳು ನಡೆಯಲು ಸಾಧ್ಯ.



ಜೋಗಿ ಚಿತ್ರದತ್ತ ಜನಜಾತ್ರೆಯೇ ನುಗ್ಗುತ್ತಿದೆ. ಹಾಡುಗಳ ಕ್ಯಾಸೆಟ್ ಮಾರಾಟ ಹಾಗೂ ಚಿತ್ರದ ಜನಪ್ರಿಯತೆ ಎಲ್ಲ ಹಳೆಯ ದಾಖಲೆಗಳನ್ನು ಮುರಿದಿವೆ ಎನ್ನಲಾಗುತ್ತಿದೆ. ಚಿತ್ರ ವಿಮರ್ಶೆಗೆ ಹೆಸರಾದ ಖ್ಯಾತ ಪತ್ರಿಕೆಗಳು ಸೇರಿದಂತೆ ಬಹಳಷ್ಟು ಪತ್ರಿಕೆಗಳು ಚಿತ್ರವನ್ನು ಹಾಡಿ ಹೊಗಳಿ ಅಭಿನಂದಿಸಿವೆ. ನಿಜವಾಗಿಯೂ ಇದು ಇಲ್ಲಿ ಹಾಡಿ ಹೊಗಳುವಷ್ಟು ಉತ್ತಮ ಚಿತ್ರವೇ? ಹಾಗಿದ್ದರೆ ಅದು ನೀಡುತ್ತಿರುವ ಸಂದೇಶವೇನು?

ಅಸಂಭವನೀಯಗಳ ಕಂತೆ ಪಾತಕ ಲೋಕದ ಕಲಾತ್ಮಕ ವೈಭವೀಕರಣ 'ಜೋಗಿ'

ಅಪಾಯಕಾರಿ ಸಂದೇಶ : 'ಜೋಗಿ' ಸಾಕ್ಷಿಯಾಗುತ್ತಿರುವ ಪಾತಕಗಳು

ಕಲಾತ್ಮಕವಾಗಿ ಚಿತ್ರಿಸಿದಾಕ್ಷಣ ಚಿತ್ರದ ಅಪಾಯಕಾರಿ ಸಂದೇಶಗಳು ಸಮರ್ಥನೀಯ ವಾಗುವುದೇ. ತಂದೆ ತೀರಿಕೊಂಡ ನಂತರ ವಿಧವೆ ತಾಯಿಯ ಬಳೆ ಒಡೆದದ್ದನ್ನು ಸಹಿಸಲಾರದ ಮಾದೇಶ 'ತಾಯಿಗೆ ಒಡೆದು ಹಾಕಲು ಆಗದ' ಚಿನ್ನದ ಬಳೆ ಮಾಡಿಸಿಕೊಡುವ ಸಲು ವಾಗಿಯೇ ಬೆಂಗಳೂರಿಗೆ ಬಂದಿರುತ್ತಾನೆ. ಹೋಟೆಲ್‌ನಲ್ಲಿ ತಟ್ಟೆ ಲೋಟ ತೊಳೆದು ದುಡಿದು ಹಣ ಸಂಪಾದಿಸುತ್ತಾನೆ. ಊರಿಗೆ ಹೊರಡುವ ದಿನ ತಾಯಿಗೆಂದು ಮಾಡಿಸಿಟ್ಟು ಕೊಂಡಿದ್ದ ಚಿನ್ನದ ಬಳೆಯನ್ನು ಬಲಗೈಲಿ ಹಿಡಿದ ಆತ ಎಡಗೈನಲ್ಲಿ ಟೀ ಕೊಡುವುದನ್ನು ಸಹಿಸದ ರೌಡಿ ತಂಡದೊಂದಿಗೆ ವಾಗ್ವಾದ ನಡೆಯುತ್ತದೆ.

ಯಾವ ಸೂಳೆಗೆ ಕೊಡುವುದಕ್ಕೆ ಬಳೆ? ಎನ್ನುತ್ತಾನೆ ರೌಡಿ ತಂಡದ ನಾಯಕ. ಹರಳು ಕಾಳಿನಂತೆ ಸಿಡಿದ ಜೋಗಿ ಇಡೀ ರೌಡಿ ತಂಡವನ್ನು ಸದೆಬಡಿದು, ತಂಡದ ನಾಯಕನನ್ನು ಅಟ್ಟಾಡಿಸಿ ಕೊಂಡು ಬೆನ್ನಟ್ಟಿ ನಡುಬೀದಿಯಲ್ಲಿ ಕೊಲ್ಲುತ್ತಾನೆ.

ಸಣ್ಣಪುಟ್ಟ ಕಾರಣಗಳಿಗೂ ಉದ್ವೇಗಗೊಂಡು ಬಡಿದಾಟಕ್ಕೆ ನಿಲ್ಲುವುದು, ಹುಸಿ ಪ್ರತಿಷ್ಟೆ- 'ಈಗೋ'ಗಳ ಆಧಾರದಲ್ಲಿ ಕಗ್ಗೊಲೆಗಳಿಗೆ ಮುಂದಾಗುವ ಪ್ರವೃತ್ತಿ ಯುವ ಜನಾಂಗದಲ್ಲಿ ವ್ಯಾಪಕಗೊಳ್ಳುತ್ತಿದೆ. ಅದು ಸಮರ್ಥನೀಯವೇ? ರೌಡಿಯ ಮಾತು ಕೆಟ್ಟದ್ದೇನೋ ನಿಜ, ಆದರೆ ಅದಕ್ಕೆ ಆತನ ಹತ್ಯೆಯೊಂದೇ ಪರಿಹಾರವೇ? ಅದೊಂದೇ ಪ್ರತಿಕ್ರಿಯೆಯಾಗಬೇಕಿತ್ತೆ?

"ಹೊಡಿ ಮಗ ಹೊಡಿಮಗ .... ಬಿಡಬೇಡ ಅವ್ನ......" ಎಂಬ ಹಾಡು ಯುವಜನರಿಗೆ ನೀಡುತ್ತಿರುವ ಸಂದೇಶ ಏನು? ಇದು ಅಗತ್ಯವಿತ್ತೆ? ಇದೆಲ್ಲಾ ಕತೆಗೆ ಅಗತ್ಯ ಎನ್ನುವವರಿದ್ದಾರೆ. ಶತ್ರುಗಳು ತನ್ನ ಮೇಲೆ ಆಕ್ರಮಣಕ್ಕಾಗಿ ಯತ್ನಿಸುತ್ತಿರುವಾಗ ತನ್ನ ತಾಯಿಯನ್ನು ಹುಡುಕಬೇಕಾದ ನಾಯಕನಿಗೆ ಮಚ್ಚು ಹಿಡಿಯುವುದು ಅನಿವಾರ್ಯವಾಗಿತ್ತು ಎಂಬುದು ವಾದ. ಕತೆ-ಹಿನ್ನೆಲೆ ಯಾರಿಗೆ ಬೇಕಾಗಿದೆ. ತಮಗೆ ಯಾವುದು ಬೇಕೋ ಅದನ್ನು ಸ್ವೀಕರಿಸುವುದು ಯುವಜನರಿಗೆ ಗೊತ್ತಿದೆ. ಜೋಗಿ ಸಿನಿಮಾ ಯಾರನ್ನು ಸೆಳೆಯುತ್ತಿದೆ ಮತ್ತು ಹೇಗೆ ಪ್ರಭಾವಿಸಿದೆ ಎಂಬುದಕ್ಕೆ ಇಲ್ಲೇ ಇದೆ ಸಾಕ್ಷಿ.

ಬೆಂಗಳೂರಿನ ಕಪಾಲಿ ಚಿತ್ರಮಂದಿರದ ಒಳಗೆ ಮೊದಲ ವಾರದಲ್ಲೆ ಎರಡು ತಂಡಗಳ ನಡುವೆ ಜಗಳವಾಗಿ ಮಚ್ಚು ಲಾಂಗುಗಳೊಂದಿಗೆ ಬಡಿದಾಡಿಕೊಂಡು ನಾಲ್ಕು ಜನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಾಗಿದ್ದಾರೆ. ಏನು ಕಾರಣ? "ಹೊಡಿ ಮಗ.... ಹೊಡಿ ಮಗ" ಹಾಡಿನ ಸಂದರ್ಭದಲ್ಲಿನ ಆವೇಶ, ಕುಣಿದಾಟಗಳು, ತಳ್ಳಾಟಗಳೇ ಜಗಳಕ್ಕೆ ಕಾರಣ.

ಈಗ ಚಿತ್ರ ಮಂದಿರದ ಹೊರಕ್ಕೆ ಬನ್ನಿ ಅಲ್ಲಿ ರಾರಾಜಿಸುತ್ತಿವೆ ಬ್ಯಾನರುಗಳು. ಶಿವಣ್ಣನನ್ನು ಅಭಿನಂದಿಸುವ ಕೊಂಡಾಡುವ ಬ್ಯಾನರ್‌ಗಳು. ಯಾರು ಅಭಿನಂದಿಸುತ್ತಿರುವವರು?

ಲಾಂಗ್ ಗೋಪಿ......, ಸೋವು (ಕಲಾಸ್),.... "ಗದೆ ಹಿಡಿಯೋಕೆ ರಾಜಣ್ಣ ಸರಿ-ಮಚ್ಚು ಹಿಡಿಯೋಕೆ ಶಿವಣ್ಣ ಸರಿ' ಇದು ಘೋಷಣೆ. ಅದು ಸರಿ. ಸಾಕಷ್ಟು ಹಾಡಿ ಹೊಗಳುತ್ತಿರುವ ಹಾಡುಗಳ ಕತೆ ಏನು?

"ನೀನು ಗರತಿಯಂಗೆ ಸೆರಗ್ಹಾಕ್ಕೊಂಡು ಲಾರಿಯೊಳಗೆ ಕುಂತ್ಕೊಂಡಿದ್ರೆ........" ಈ ಹಾಡು "ನೀನು ಮುದ್ಕಿಯಂಗೆ ಮುಸ್ಕಾಕ್ಕೊಂಡು, ಮ್ಯಾಗೆ ಒಂದು ಕಂಬಳಿ ಹೊದ್ಕೊಂಡ್....."ಎಂಬ ಜಾನಪದಗೀತೆ ಎನ್ನಲಾಗುವ, ಆದರೆ ಆಲೂರು ನಾಗಪ್ಪ ಎಂಬ ಸ್ವಘೋಷಿತ ಜಾನಪದ ಸಾಹಿತಿ (?) ಬರೆದ ಒಂದು ಹೊಲಸು ಹಾಡಿನ ರಿಮೇಕ್.

"ಈ ಭೂಮಿ ಮ್ಯಾಗೆ ಹುಟ್ಟಿದ ಮೇಲೆ
ಸಾವೇ ಕಣೋ..... ಈ ಕೈಗೆ ಮಚ್ಚು
ಸಿಕ್ಕಿದಮೇಲೆ ಬದುಕು ಕಣೋ" ಎಂಬ ಸಂದೇಶವು ನಮ್ಮ ಯುವ ಜನತೆಯ ದೊಡ್ಡ ವಿಭಾಗದವರನ್ನು ಆಕರ್ಷಿಸುತ್ತಿದೆ ಎಂಬುದೇ ನಾವು ಇಲ್ಲಿ ಅತ್ಯಂತ ಎಚ್ಚರಿಕೆ ವಹಿಸಬೇಕಾದ ಅಂಶ.

- ಆರ್.ರಾಮಕೃಷ್ಣ

ಪ್ರೀತಿಯ ಸಮ್ಮಿಲನದ ಸಂತೋಷ ಕೂಟ

ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿ ಸದಸ್ಯ ಹಾಗೂ ಕಾರ್ಮಿಕ ಮುಖಂಡರಾದ ಕಾಂ.ಮುಜೀಬ್ ಮತ್ತು ಹಿಂದೆ ಎಸ್‌ಎಫ್‌ಐ ಸಂಘಟನೆಯಲ್ಲಿ ಸಕ್ರಿಯವಾಗಿದ್ದು ಈಗ ಉಪನ್ಯಾಸಕಿಯಾಗಿರುವ ಕಾಂ.ಶಮೀಮಾ ಅವರ ವಿವಾಹದ ಸಂತೋಷ ಸಮಾರಂಭವು ಇತ್ತೀಚಿಗೆ ತುಮಕೂರಿನಲ್ಲಿ ನಡೆದಿದೆ. ಆ ಕುರಿತು ಒಂದು ವರದಿ.

ಎರಡು ಕುಟುಂಬಗಳ ಹಾಗೂ ಎರಡು ಹೃದಯಗಳ ಸಮ್ಮಿಲನವಾಗಬೇಕಾದ ಮದುವೆಗಳು ವ್ಯಾಪಾರೀಕರಣಗೊಂಡು ಕೆಲವರಿಗೆ ತಮ್ಮ ಹಣಬಲ, ಜನ ಬಲಗಳ ಒಣ ಪ್ರತಿಷ್ಠೆಗಳಾಗಿ ಹೋಗುತ್ತಿರುವುದು ವಿಷಾದಕರ ಎಂದು ಚಿಂತಕ ಕೆ.ದೊರೈರಾಜು ಅವರು ಅಭಿಪ್ರಾಯಪಟ್ಟರು.

ಅವರು ಈಚೆಗೆ ಸಿಪಿಐಎ(ಎಂ) ಮತ್ತು ಸಿಐಟಿಯು ತುಮಕೂರು ಜಿಲ್ಲಾ ಸಮಿತಿಗಳ ಆಶ್ರಯದಲ್ಲಿ ನಡೆದ ಕಾಂ. ಸೈಯದ್ ಮುಜೀಬ್ ಮತ್ತು ಕಾಂ. ಶಮೀಮಾ ಅವರ ಮದುವೆಯ ಸಂತೋಷಕೂಟದಲ್ಲಿ ಮಾತನಾಡಿದರು. ಸಮಾಜದ ಅನಿಷ್ಟ ಹಾಗೂ ಅವೈಜ್ಞಾನಿಕ, ಅನ್ಯಾಯಯುತವಾದ ಆಚರಣೆಗಳ ವಿರುದ್ಧ ಹೋರಾಡುವ ಮನಸ್ಥಿತಿ ಇರುವವರು ಮದುವೆಯಲ್ಲಿ ವ್ಯಾಪಾರ, ಪ್ರತಿಷ್ಠೆಯನ್ನು ಕೈಬಿಟ್ಟು, ಪ್ರೀತಿ-ಪ್ರೇಮಗಳ ಸಮ್ಮಿಲನ ಸಂದರ್ಭವಾಗಿ ನೋಡಬೇಕೆಂದು ಅವರು ಕರೆಯಿತ್ತರು. ಇಂತಹ ಈ ಮದುವೆಯ ಜೋಡಿಗಳನ್ನು ಅವರು ಅಭಿನಂದಿಸಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಸದಸ್ಯರಾದ ಹಾಗೂ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿಯವರು ಸಮಾಜದಲ್ಲಿಂದು ಯಾವುದು ವೈಯಕ್ತಿಕವೋ, ಯಾವುದು ಚರ್ಚೆಗೆ ಅನಗತ್ಯವೋ ಅದು ಚರ್ಚೆಗೆ ಗ್ರಾಸವಾಗುತ್ತಿದೆ. ಯಾವುದರ ಚರ್ಚೆ ಅವಶ್ಯಕವೋ, ಯಾವುದು ಸಾರ್ವಜನಿಕವಾಗಿ ಚರ್ಚೆ ಆಗಬೇಕಾಗಿದೆಯೋ ಅದು ಚರ್ಚೆಯೇ ಆಗದೆ ಉಳಿದುಬಿಡುತ್ತಿದೆ. ಮದುವೆ ಹೆಸರಿನಲ್ಲಿ ನಡೆಯುವ ಕಂದಾಚಾರಗಳು, ಮೂಢಾಚಾರಗಳನ್ನು ಬಿಡಬೇಕೆಂದು ಅಭಿಪ್ರಾಯ ಪಟ್ಟರು.

ಹಿರಿಯ ಕಾರ್ಮಿಕ ಮುಖಂಡರು, ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ ಆದ ಕಾಂ. ವಿ.ಜೆ.ಕೆ.ನಾಯರ್ ಅವರು ಮಾತನಾಡಿ ಹೋರಾಟಗಾರರು-ಜನರ ನಡುವೆ ಕೆಲಸ ಮಾಡುವವರು ಜನತೆಯಿಂದ ದೂರವಾಗುವ ರೀತಿಯಲ್ಲಿ ಬದುಕಬಾರದೆಂದು, ಮದುವೆ ಎಂಬುದು ಭಾರತೀಯ ಸಮಾಜದಲ್ಲಿ ಒಂದು ಬಲಿಷ್ಟ ಸಂಸ್ಥೆಯಾಗಿದೆ ಎಂದು ಅವರು ಅಭಿಪ್ರಾಯ ಪಟ್ಟರು. ಸಂತೋಷಕೂಟದಲ್ಲಿ ಡಿವೈಎಫ್‌ಐ ರಾಜ್ಯಾಧ್ಯಕ್ಷರಾದ ಕಾಂ. ಕೆ.ಎನ್.ಉಮೇಶ್, ಆಡಿಟರ್ ಆಂಜನಪ್ಪ, ಮಂಗಳೂರು ಜಿಲ್ಲಾ ಬೀಡಿ ಕಾರ್ಮಿಕರ ಮುಖಂಡ ಕಾಂ. ಬಿ.ಎಂ.ಭಟ್, ಜಿಲ್ಲಾ ಹಿರಿಯ ಕಾರ್ಮಿಕ ಮುಖಂಡರಾದ ಕಾಂ. ಮಹಮ್ಮದ್ ದಸ್ತಗೀರ್, ಜನವಾದಿ ಮಹಿಳಾ ಸಂಘಟನೆಯ ಎನ್.ಪ್ರಭಾ ಅವರು ಶುಭಕೋರಿ ಮಾತನಾಡಿದರು.



ಈ ಸಂತೋಷ ಕೂಟದಲ್ಲಿ ಪ್ರೊ. ಜಿ.ಎಂ.ಶ್ರೀನಿವಾಸಯ್ಯ, ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ, ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಜಿ.ಸಿ.ಬಯ್ಯಾರೆಡ್ಡಿ, ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಗೋವಿಂದರಾಜು, ಸಿಪಿಐ(ಎಂ)ನ ಬೆಂಗಳೂರು ಜಿಲ್ಲಾ ಕಾರ್ಯದರ್ಶಿಯಾದ ಕಾಂ. ಕೆ.ಪ್ರಕಾಶ್‌ರವರು, ರಾಜ್ಯ ಸಮಿತಿ ಸದಸ್ಯರಾದ ಕಾಂ. ಮೀನಾಕ್ಷಿ ಸುಂದರಂ ಉಪಸ್ಥಿತರಿದ್ದರು. ಈ ಕೂಟದಲ್ಲಿ ಸುಮಧುರವಾದ ಭಾವಗೀತೆ ಮತ್ತು ಅರಿವಿನ ಗೀತೆಗಳನ್ನು ಗಂಗಲಕ್ಷ್ಮಿ, ಲಿಂಗರಾಜು, ಮಲ್ಲಿಕಾರ್ಜುನ ಕೆಂಕೆರೆ, ತಿರುಮಲಯ್ಯ ಅವರುಗಳು ಹಾಡಿದರು.

ಕಾಂ. ಜಿ.ಕೆ.ಗಂಗಾಧರ್ ಸ್ವಾಗತಿಸಿದರು. ಡಿವೈಎಫ್‌ಐ ನ ಸುಬ್ರಹ್ಮಣ್ಯ ವಂದಿಸಿದರು. ಈ.ಬಸವರಾಜು ಕಾರ್ಯಕ್ರಮ ನಿರೂಪಿಸಿದರು ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರು ಈ ಸಮಾರಂಭದಲ್ಲಿ ಭಾಗವಹಿಸಿ ನೂತನ ವಧುವರರಿಗೆ ಶುಭಕೋರಿದರು.

- ರಾಘವೇಂದ್ರ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 22236462,
ಮುದ್ರಣ: ಹಾಸ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor : S.Y.GURUSHANTH